ಸೋಮವಾರ, ಸೆಪ್ಟೆಂಬರ್ 16, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಾಂಧಿ ಮತ್ತು ಅಂಬೇಡ್ಕರ್

‘ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ’ದ ಅಂಗವಾಗಿ ಬೆಂಗಳೂರಿನಲ್ಲಿ ನಿರ್ಮಿಸಲಾಗಿದ್ದ ‘ಮಾನವ ಸರಪಳಿ’ಯಲ್ಲಿ ವಿದ್ಯಾರ್ಥಿಗಳು ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಅವರ ವೇಷತೊಟ್ಟು ಭಾಗವಹಿಸಿದರು

As Parents



We want our children to

have a highly successful and blissful life. We want them to blossom into good sons / daughters, good life partners, good parents, and good citizens.

We want our children to

achieve their career goals without compromising on sports, hobbies & extracurricular activities.

We want our children to

study in a healthy, visionary committed environment, that will help them acquire the right personality traits, culture & value system required for optimum success in career & life.

We don’t want our children to

suffer stress & tension arising out of uncertainty. We want to help them have a fair evaluation of their current academic standing, aptitude and potential for a career of their choice.

Register your children for a FIITJEE Admission Test, leading to 360° analysis of aptitude, potential and academic standing. Let your children walk the right path.

Presenting 21st Edition

FTRE

FIITJEE TALENT REWARD EXAM

For Students Presently in Class V, VI, VII, VIII, IX, X & XI

Exam Dates : Offline / Computer Based (CBT) / Online Proctored : **6th October 2024** Online Proctored : **22nd, 23rd, 27th, 28th September, 4th & 5th October 2024**

(Subject to Terms & Conditions)

Scholarships on FIITJEE Programs & Hostel Fee ₹ 600+ Crores

Students will get a historic opportunity to earn unprecedented Scholarships worth Rs. 600+ Crores (100% increment from last year) on FIITJEE Program & Hostel Fees. In addition, Cash Scholarships worth Rs. 15+ Crores (50% increment from last year) will be given to students performing exceptionally well in the exam, at the territory as well as the national level. **FTRE is also an Admission cum Scholarship Test to join FIITJEE Classroom Programs.**

www.fiitjee.com/ftre

Awareness leads to making the Right Choices. Please scan the QR Code to take an Awareness Survey & Quiz that will definitely help you & your children.

Parents must distinguish between choosing a Stress & Tension filled Academic Journey for their children VERSUS Ethical Pressure with clarity on selecting realistic academic goals, and decide which is good. Scan the QR Code to get more learnings, which will help you take the right decision for your children.

Some choices are obvious.

FIITJEE

32 YEARS OF INNOVATION, SINCERITY, ETHICS, CONSISTENCY & HARD WORK

Please turn over...

Excel in a Stress & Tension Free way, only with FIITJEE...

Yet another Innovation by FIITJEE

OLYMPIADs

ALL INDIA TEST SERIES

Nurturing Your Olympiad Dreams. Simulating Real Olympiad Experience.

NSEJS | INJSO | IOQM | RMO | INMO | NSEP | INPhO | NSEC | INChO | NSEA | INAO

Preparation for Olympiads is not just for a select few or super brilliant students. All sincere students preparing for Olympiads benefit from its preparation and find their lives transformed.

FIITJEE All India Test Series for Olympiads is conducted exactly on the pattern of respective Olympiad Exam, that too Online giving you flexibility to attempt it within a time window.

You can choose & create your own schedule of All India Test Series for the Olympiads relevant to you, depending upon your preparation strategy.

Class	Relevant Olympiads
Students Presently in Class V, VI, VII & VIII	Junior Science Olympiad & Mathematical Olympiad
Students Presently in Class IX & X*	Junior Science Olympiad (*if age permits), Mathematical Olympiad and Physics, Chemistry & Astronomy Olympiads
Students Presently in Class XI & XII	Mathematical Olympiad and Physics, Chemistry & Astronomy Olympiads

Forthcoming Test Dates (Online Mode) :

September 22nd, 23rd, 27th & 28th

October 4th, 5th & 6th, 2024

For full schedule of All India Test Series for Olympiads until 2028, to register for one or more tests, and to get more information about the test series & various stages of Olympiads applicable, visit **www.fiitjee.com/olympiadAITS** or scan the QR Code

Why you should appear in FIITJEE's All India Test Series for Olympiads ?

- To get 360° analysis of your preparation & potential for these tests and receive guidelines on how you can prepare.
- You can use these tests to check your current preparation level.
- You can take these tests to fix your goals and then regularly check your progress.
- Preparing & competing in these tests will help you raise your Analytical Skills (IQ), which will be useful throughout your life.
- Win scholarships to prepare for these tests.
- You can also win a free intensive residential camp in FIITJEE Global Schools - Chennai & Vellore, during your summer vacations.

All Innovations brought out by FIITJEE for the benefit of students have become the Gold Standard for the Coaching Industry and have been adopted by all institutes without any changes.

FIITJEE innovates, Others follow.

Get World Class Offline Coaching for National Level Competitive Exams in an Online Mode, at your doorsteps.



FIITJEE eSchool
bringing offline expertise to online

gives you

Live Interactive Online Classroom Programs

Programs available for Students presently in Class V to XII (appearing / pass)

✓ LIVE Interactive Online Classes with 2-way communication, enabling engaging interaction with teachers & peer groups, just like an offline classroom learning experience. ✓ Impactful classes delivered by the Best Teachers from FIITJEE Delhi Centres who teach in the offline centres. ✓ Recorded sessions of LIVE Interactive Online Classes for self-study, revision and note-taking. ✓ Specific doubt sessions are provisioned to help children to engage with teachers to discuss and clear doubts. ✓ Parents, the most important stakeholders in a child's academic journey are given regular inputs through ePTM on their child's academic progress.

Helpline : 8400 92 8400

www.fiitjee-eschool.com

e-Mail : query@fiitjee-eschool.com

Book your video counselling session www.fiitjee-eschool.com/VCO

In Service of Students & Society

FIITJEE UNIVERSE

FIITJEE LIMITED — www.fiitjee.com | FIITJEE eSchool — www.fiitjee-eschool.com | MEGACOSM Publishing Company — www.megacosmcognitions.com | FIITJEE Medical Limited — Being Launched | FIITJEE World School — www.fiitjeeworldschool.com | FIITJEE Global School — www.fiitjeeglobalschool.com | And many more initiatives...

Bangalore Centre - 19, S. S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 7825895355 | **Web: www.fiitjeebangalore.com** | **Hostel Facility Available**

National Admissions Office: FIITJEE House, 29-A, Kalu Sarai, Sarvapriya Vihar, New Delhi | **FIITJEE Helpline No: 7825895400** | **FIITJEE eSchool Helpline No: 8400-92-8400** | Web: www.fiitjee.com | Buy books at www.megacosmcognitions.com | www.facebook.com/fiitjeeindia123 | www.twitter.com/fiitjee | www.linkedin.com/company/fiitjee | www.youtube.com/fiitjeeltd

JEE

2025 & 2026 aspirants

Experience JEE several times before the real JEE

with

FIITJEE's Computer Based

ALL INDIA TEST SERIES — THE ORIGINAL ONE

Program	Last Date to Enrol & Fee (including GST)
FIITJEE's Computer Based **All India Test Series** for JEE Main & Advanced 2025	15th November 2024 | Rs. 19,200/- First Test - 16th November 2024 (Part Test 1 - Main) 17th November 2024 (Part Test 1 - Advanced)
FIITJEE's Computer Based **All India Integrated Test Series** for JEE Main & Advanced 2026	30th September 2024 | Rs. 22,000/- First Test - 1st December 2024 (Part Test 1 - Main) 8th December 2024 (Part Test 1 - Advanced)

For the complete AITS schedule and to enrol online, scan the QR Code or visit ***www.fiitjeenonclassroomprograms.com***

myPAT FIITJEE

Online Test Series (Accessible 24/7)

myPAT is an Online Platform for Learning through Assessment, Analysis and Identification of Improvement Areas. myPAT enables you to track your progress, giving an in depth analysis and allows you to assess yourself both in Test Mode and Learning Mode.

Relevant for students preparing for JEE 2025 & 2026, also NTSE type of scholastic tests.

Sign up for a 14 day Free Trial now !

To enrol, scan the QR Code or visit ***www.mypat.in***

Rankers Study Material Programs for Class XI & XII / XII Pass : For JEE 2026 & 2025 | **Jr. Rankers Study Material Programs** for Class IX & X : Foundation for NEET, JEE 2028 & 2027 plus Excellence in School, Boards, Jr. Science Olympiad, NTSE

To enrol online, scan the QR Code or visit ***www.fiitjeenonclassroomprograms.com***

Admission Tests after FTRE 2024

BIG BANG EDGE TEST

Offline Test : **17th Nov 2024**

Online Proctored Test : **18th Nov 2024**

To register, scan the QR Code or visit ***www.fiitjee.com/BBE***

DRONACHARYA

360° DIAGNOSTIC & SCHOLARSHIP EXAM

Dronacharya 1 - Online Proctored Exam : **28th Dec 2024** Offline Exam : **29th Dec 2024**

Dronacharya 2 - Online Proctored Exam : **2nd & 7th Feb 2025** Offline Exam : **2nd Feb 2025**

To register, scan the QR Code or visit ***www.fiitjee.com/dronacharya***

For details of Admission cum Scholarship Tests after Dronacharya 2, please scan the QR Code

Excel in a Stress & Tension Free way, only with FIITJEE...

ಸೋಮವಾರ, ಸೆಪ್ಟೆಂಬರ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 258 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಳವೆಯಲ್ಲಿಯೆ ಮಕ್ಕಳಲ್ಲಿ ಓದುವ ಆಸಕ್ತಿ ಬೆಳೆಸೋದು ಹೇಗೆ?

ಆಳ-ಅಗಲ
ವಲಸೆ: ಭಾರತದಲ್ಲಿಯೇ ಅತಿ ಹೆಚ್ಚು
'ಈ ಅವಧಿಯಲ್ಲೇ ಒಂದು ರಾಷ್ಟ್ರ, ಒಂದು ಚುನಾವಣೆ' 3B
ಜಿಎಸ್‌ಟಿ: ₹1.10 ಲಕ್ಷ ಕೋಟಿ ಬಾಕಿ 8
ಎಚ್‌ಎಸ್‌ಆರ್‌ಪಿ: 3 ದಿನ ದಂಡವಿಲ್ಲ 3B
ಮನುಕುಲದ ಬೆಳಕು ಪೈಗಂಬರ್ 8

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಆಗಸ್ಟ್ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ
ಚಂದಾದಾರಿಕೆ ಕೇವಲ ₹360ರಿಂದ ಪ್ರಾರಂಭ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128
ಸ್ಕ್ಯಾನ್ ಮಾಡಿ ಚಂದಾದಾರರಾಗಿ

'ಪ್ರಾಮಾಣಿಕತೆಯ ಪ್ರಮಾಣಪತ್ರ ಸಿಗುವವರೆಗೆ ಮುಖ್ಯಮಂತ್ರಿ ಆಗಲಾರೆ'

2 ದಿನದಲ್ಲಿ ರಾಜೀನಾಮೆ: ಕೇಜ್ರಿವಾಲ್

ನವದೆಹಲಿ (ಪಿಟಿಐ): ಜನರು ತಮಗೆ 'ಪ್ರಾಮಾಣಿಕತೆಯ ಪ್ರಮಾಣಪತ್ರ' ನೀಡುವವರೆಗೂ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಅರವಿಂದ ಕೇಜ್ರಿವಾಲ್ ಶಪಥ ಮಾಡಿದ್ದಾರೆ. ಸಿ.ಎಂ ಸ್ಥಾನಕ್ಕೆ ಎರಡು ದಿನಗಳ ನಂತರ ರಾಜೀನಾಮೆ ನೀಡುವುದಾಗಿ ಭಾನುವಾರ ಘೋಷಿಸಿದರು.

ದೆಹಲಿ ವಿಧಾನಸಭೆಗೆ ಅವಧಿಗೆ ಮೊದಲೇ ಚುನಾವಣೆ ನಡೆಸಲು ಆಗ್ರಹಿಸುವುದಾಗಿ ತಿಳಿಸಿದರು. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಬಂಧಿತರಾಗಿದ್ದ ಕೇಜ್ರಿವಾಲ್ ಅವರು ಜಾಮೀನು ಪಡೆದು ಶುಕ್ರವಾರ ಜೈಲಿನಿಂದ ಬಿಡುಗಡೆ ಆಗಿದ್ದಾರೆ.

ಎಎಪಿ ಶಾಸಕರ ಸಭೆಯನ್ನು ಇನ್ನು ಎರಡು ದಿನಗಳಲ್ಲಿ ನಡೆಸಲಾಗುತ್ತದೆ. ಪಕ್ಷದ ನಾಯಕರೊಬ್ಬರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ ಎಂದು ಕೇಜ್ರಿವಾಲ್ ಪ್ರಕಟಿಸಿದರು.

'ಫೆಬ್ರುವರಿಯಲ್ಲಿ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯಬೇಕಿದೆ. ಆದರೆ, ನವೆಂಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಜೊತೆಯಲ್ಲೇ ರಾಷ್ಟ್ರ ರಾಜಧಾನಿಯಲ್ಲೂ ಚುನಾವಣೆ ನಡೆಸಬೇಕು ಎಂದು ಆಗ್ರಹಿಸುತ್ತಿದ್ದೇನೆ' ಎಂದು ಕೇಜ್ರಿವಾಲ್ ಅವರು ಪಕ್ಷದ ಕಾರ್ಯಕರ್ತರ ಸಮ್ಮುಖದಲ್ಲಿ ಹೇಳಿದರು.

9ನೇ ಪುಟ ನೋಡಿ

'ಭಾವನಾತ್ಮಕ ಆಟವಾಡುತ್ತಿದ್ದಾರೆ'

ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದು ಅನಿವಾರ್ಯವಾಗಿತ್ತು, ಆದರೆ ಅದನ್ನೇ ತಮ್ಮ ದೊಡ್ಡ ಗುಣವೆಂದು ತೋರಿಸುವ ಉದ್ದೇಶದಿಂದ ಎರಡು ದಿನಗಳ ನಂತರ ರಾಜೀನಾಮೆ ಸಲ್ಲಿಸುವುದಾಗಿ ಹೇಳಿದ್ದಾರೆ ಎಂದು ಬಿಜೆಪಿ ವ್ಯಂಗ್ಯವಾಡಿದೆ.

'ನ್ಯಾಯಾಲಯವು ಅವರನ್ನು ನಿರ್ದೋಷಿ (ಅಬಕಾರಿ ನೀತಿ ಹಗರಣದಲ್ಲಿ) ಎಂದು ಹೇಳಿಲ್ಲ; ಷರತ್ತುಬದ್ಧ ಜಾಮೀನು ನೀಡಿದೆ ಅಷ್ಟೇ. ಹೀಗಾಗಿ, ಕೇಜ್ರಿವಾಲ್ ಅವರು 'ಉತ್ಸವ ಮಂತ್ರಿ' ಆಗಿದ್ದಾರೆ. ಹೀಗಾಗಿ ಅವರು ರಾಜೀನಾಮೆಯ ನಾಟಕ ಆಡಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದರು.

ಕೇಜ್ರಿವಾಲ್ ಅವರ ಇಡೀ ಆಲೋಚನೆ, ತಮ್ಮ ಪತ್ನಿ ಸುನೀತಾ ಅವರನ್ನು ಮುಖ್ಯಮಂತ್ರಿ ಆಗಿಸುವುದು ಎಂದರು.

ಸಚಿವೆ ಆತಿಶಿ ಹೆಸರೂ ಮುಖ್ಯಮಂತ್ರಿ ಗಾದಿಗೆ ಕೇಳಿಬರುತ್ತಿದೆ.



ಜನರು ನನಗೆ ಪ್ರಾಮಾಣಿಕತೆಯ ಪ್ರಮಾಣಪತ್ರವನ್ನು ನೀಡಿದ ನಂತರವಷ್ಟೇ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವೆ. ಜೈಲಿನಿಂದ ಬಂದ ನಂತರದಲ್ಲಿ ಅಗ್ನಿಪರೀಕ್ಷೆಗೆ ಒಡ್ಡಿಕೊಳ್ಳುತ್ತಿದ್ದೇನೆ
ಅರವಿಂದ ಕೇಜ್ರಿವಾಲ್ ದೆಹಲಿ ಮುಖ್ಯಮಂತ್ರಿ

ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಕಾರ್ಯಕರ್ತರತ್ತ ಕೈ ಬೀಸಿದರು –ಪಿಟಿಐ ಚಿತ್ರ

ಯಾರು ಏನೆಂದರು?

ಇದು ರಾಜಕೀಯ ನಾಟಕದಂತೆ ಕಾಣುತ್ತಿದೆ. ಈಗಾಗಲೇ ಸುಪ್ರೀಂ ಕೋರ್ಟ್ ಅವರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಬೇಗ ಹೊಸ ಮುಖ್ಯಮಂತ್ರಿ ಆಯ್ಕೆಯಾಗಲಿ
ದೇವೇಂದ್ರ ಯಾದವ್, ದೆಹಲಿ ಕಾಂಗ್ರೆಸ್ ಘಟಕ ಅಧ್ಯಕ್ಷ

ಬಿಜೆಪಿ ಸೃಷ್ಟಿಸಿದ ವಾತಾವರಣದಲ್ಲಿ ಕೇಜ್ರಿವಾಲ್ ಅವರಿಗೆ ಕೆಲಸ ಮಾಡಲು ಆಗಲೇ ಇಲ್ಲ. ಹೀಗಾಗಿ ಅವರು ಸಿ.ಎಂ ಕುರ್ಚಿಯಿಂದ ಇಳಿದು ಜನರತ್ತ ಹೊರಟಿರುವುದು ಸರಿಯಾಗಿದೆ
ವಿವೇಕ್ ತಂಖಾ, ಕಾಂಗ್ರೆಸ್ ಸಂಸದ

ಕೇಜ್ರಿವಾಲ್ ಮೇಲಿರುವ ಆರೋಪಗಳಿಗೆ ಸಾಕ್ಷ್ಯಗಳಿಲ್ಲ. ಹೀಗಾಗಿ ಅವರು ಜನರತ್ತ ಹೋಗಲು ನಿರ್ಧರಿಸಿದ್ದಾರೆ. ಅವರಿಗೆ ಅಧಿಕಾರದ ಹಸಿವಿಲ್ಲ
ಫಾರೂಕ್ ಅಬ್ದುಲ್ಲಾ, ಅಧ್ಯಕ್ಷ, ನ್ಯಾಷನಲ್ ಕಾನ್ಫರೆನ್ಸ್

ರಾಜೀನಾಮೆ ನೀಡುವ ಕೇಜ್ರಿವಾಲ್ ನಿರ್ಧಾರ ಕ್ರಾಂತಿಕಾರಿಯಷ್ಟೇ ಅಲ್ಲದೆ ಅವರ ಪ್ರಾಮಾಣಿಕತೆ, ಜನಮುಖಿ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ
ಭಗವಂತ್ ಮಾನ್, ಪಂಜಾಬ್ ಮುಖ್ಯಮಂತ್ರಿ

ಇದು ಅನುಕಂಪ ಗಿಟ್ಟಿಸಿಕೊಳ್ಳಲು ಕೇಜ್ರಿವಾಲ್ ಹೂಡಿರುವ ನಾಟಕ. ಕಡತಗಳಿಗೆ ಸಹಿ ಹಾಕುವ ಅಧಿಕಾರವೇ ಇಲ್ಲದ ಅವರು ರಾಜೀನಾಮೆ ಯಾಕೆ ಕೊಡಬೇಕು?
ಶಾಜಿಯಾ ಇಲ್ಮಿ, ಬಿಜೆಪಿ ವಕ್ತಾರೆ

ಪೌರಕಾರ್ಮಿಕ ಮಹಿಳೆಯರಾದ ನಾಗಲಕ್ಷ್ಮಿ, ಮಂಜುಳಾ ಅವರ ಕೈಹಿಡಿದ ಸಿದ್ದರಾಮಯ್ಯ, ಲೈಂಗಿಕ ಅಲ್ಪಸಂಖ್ಯಾತೆ ಪ್ರಿಯಾಂಕಾ ಅವರ ಕೈಹಿಡಿದ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಅಂಧ ವಿದ್ಯಾರ್ಥಿಯ ಕೈ ಹಿಡಿದ, ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮದ ರಾಯಭಾರಿ ಹರೇಕಳ ಹಾಜಬ್ಬ ಮಾನವ ಸರಪಳಿ ಬೆಸೆದರು. ಸಚಿವ ಎಚ್‌.ಸಿ. ಮಹದೇವಪ್ಪ ಇದ್ದರು

'ಸರ್ವ ಸಮಾನತೆಯ ಬೆಸುಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದ ಆವರಣದಲ್ಲಿ ಒಂದೆಡೆ ಪೌರಕಾರ್ಮಿಕರು, ಇನ್ನೊಂದೆಡೆ ಐಎಎಸ್ ಅಧಿಕಾರಿಗಳು, ಸರ್ಕಾರಿ ಮತ್ತು ಖಾಸಗಿ ಶಾಲಾ ವಿದ್ಯಾರ್ಥಿಗಳು, ಲೈಂಗಿಕ ಅಲ್ಪಸಂಖ್ಯಾತರು, ಕಲಾವಿದರು, ಆಟೊ ಚಾಲಕರು, ಮುಖ್ಯಮಂತ್ರಿ ಮತ್ತು ಸಚಿವರು ಪರಸ್ಪರ ಕೈಹಿಡಿದು ಬೀದರ್‌ನಿಂದ ಚಾಮರಾಜನಗರದ ವರೆಗಿನ 2,500 ಕಿ.ಮೀ. ಉದ್ದದ ಮಾನವ ಸರಪಳಿಯನ್ನು ಬೆಸೆದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಭಾಗವಾಗಿ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ, ಎಲ್ಲ ಜಿಲ್ಲೆಗಳನ್ನು ಬೆಸೆದ ಈ ಸರಪಳಿಗೆ 22 ಲಕ್ಷಕ್ಕೂ ಹೆಚ್ಚು ಜನರು ಕೊಂಡಿಯಾದರು.

ಭದ್ರತಾ ಲೋಪ

- ವಿಧಾನಸೌಧ ವೇದಿಕೆ ಕಾರ್ಯಕ್ರಮದಲ್ಲಿ ಭದ್ರತಾ ವೈಫಲ್ಯ
- ವೇದಿಕೆಗೆ ನುಗ್ಗಿ ಸಿ.ಎಂ ಕಡೆಗೆ ಶಾಲು ಎಸೆದ ಯುವಕ
- ಯುವಕನನ್ನು ವಶಕ್ಕೆ ಪಡೆದ ಪೊಲೀಸರು

ರಾಜ್ಯದ ಎಲ್ಲ ಇಲಾಖೆಗಳ ನೌಕರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ರಾಜಕೀಯ ಪಕ್ಷಗಳ ಕಾರ್ಯಕರ್ತರು ಮೊದಲೇ ಸಿದ್ಧವಾಗಿದ್ದರು. ಬೆಳಿಗ್ಗೆ 9.57ರಿಂದ 9.59ರವರೆಗೆ ಪರಸ್ಪರ ಕೈಹಿಡಿದು, 'ವಿಶ್ವದ ಅತ್ಯಂತ ಉದ್ದದ ಮಾನವ ಸರಪಳಿ' ಎಂಬ ದಾಖಲೆ ನಿರ್ಮಿಸುವ ಯತ್ನ ಮಾಡಿದರು. 'ಜೈಹಿಂದ್, ಜೈ ಕರ್ನಾಟಕ, ಜೈ ಪ್ರಜಾಪ್ರಭುತ್ವ' ಎಂದು ಘೋಷಣೆ ಕೂಗಿ ಸಂಭ್ರಮಿಸಿದರು.

ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಂವಿಧಾನದ ಪ್ರಸ್ತಾವನೆಯ ಓದು ಮತ್ತು ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಸಿದ್ದರಾಮಯ್ಯ ಮಾತನಾಡಿ, 'ದೇಶದ ರಾಷ್ಟ್ರಪತಿಗೂ ಒಂದೇ ಮತ, ನನ್ನೊಂದಿಗೆ ನಿಂತಿರುವ ಪೌರ ಕಾರ್ಮಿಕ ಮಹಿಳೆಗೂ ಒಂದೇ ಮತ. ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಎಲ್ಲರನ್ನೂ ಸಮಾನವಾಗಿ ನೋಡುತ್ತದೆ. ಪರಸ್ಪರ ಭೇದ ಮರೆತು ನಿರ್ಮಿಸಿದ ಈ ಮಾನವ ಸರಪಳಿ ಸರ್ವ ಸಮಾನತೆ ಸಾರುತ್ತದೆ' ಎಂದರು.

ಇನ್ನೊಂದು ಸುದ್ದಿ 5

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ! ಶೀಘ್ರ ಪರಿಣಾಮಕಾರಿ
ತಯಾರಕರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM
ISO / GMP CERTIFIED
ಕುತ್ಪಾಡಿ, ಉಡುಪಿ, ಕರ್ನಾಟಕ. M: 8970977513

ಚಿನಕುರುಳಿ

ಪ್ರಕಾಶ್ ಶೆಟ್ಟಿ

ತಪ್ಪು ಮಾಡಿಲ್ಲ: ಶಾಸಕ • ಆಡಿಯೊ ಎಫ್‌ಎಸ್‌ಎಲ್‌ಗೆ ರವಾನೆ

ಮುನಿರತ್ನ ಎರಡು ದಿನ ವಶಕ್ಕೆ

ಪ್ರಜಾವಾಣಿ ವಾರ್ತೆ

ಮುನಿರತ್ನ

ಬೆಂಗಳೂರು: ಜಾತಿನಿಂದನೆ ಮತ್ತು ಘನತ್ಯಾಜ್ಯ ವಿಲೇವಾರಿ ಗುತ್ತಿಗೆದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟ ಆರೋಪದಡಿ ಬಂಧಿಸಲಾಗಿರುವ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಎರಡು ದಿನ ಪೊಲೀಸರ ವಶಕ್ಕೆ ಒಪ್ಪಿಸಿ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಗುತ್ತಿಗೆದಾರ ಚೆಲುವರಾಜು ಮತ್ತು ಬಿಬಿಎಂಪಿ ಮಾಜಿ ಸದಸ್ಯ ವೇಲು ನಾಯ್ಕರ್ ನೀಡಿದ್ದ ದೂರುಗಳನ್ನು ಆಧರಿಸಿ ಮುನಿರತ್ನ ವಿರುದ್ಧ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು. ಆಂಧ್ರ ಪ್ರದೇಶದ ಚಿತ್ತೂರಿನತ್ತ ತೆರಳುತ್ತಿದ್ದ ಅವರನ್ನು ಕೋಲಾರ ಜಿಲ್ಲೆಯ ಗಡಿಭಾಗದ ನಂಗಲಿಯಲ್ಲಿ ಶನಿವಾರ ಸಂಜೆ ವೈಯಾಲಿಕಾವಲ್ ಠಾಣೆ ಮತ್ತು ಕೋಲಾರ ಜಿಲ್ಲಾ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದು, ಬಂಧಿಸಲಾಗಿತ್ತು.

ಕೋಲಾರದಿಂದ ಕರೆತಂದ ಮುನಿರತ್ನ ಅವರನ್ನು ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆಗೆ ಒಳಪಡಿಸಲಾಯಿತು. ಬಳಿಕ ಕೆಲಕಾಲ ವಿಚಾರಣೆ ನಡೆಸಲಾಯಿತು. 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಎದುರು ಆರೋಪಿಯನ್ನು ಭಾನುವಾರ ನಸುಕಿನ ಜಾವ ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ಒಂದು ವಾರ ತಮ್ಮ ವಶಕ್ಕೆ ನೀಡುವಂತೆ ಮನವಿ ಮಾಡಿದರು. ಮುನಿರತ್ನ ಅವರನ್ನು ಎರಡು ದಿನ ಪೊಲೀಸರ ವಶಕ್ಕೆ ನೀಡಿ ನ್ಯಾಯಾಧೀಶರು ಆದೇಶ ಹೊರಡಿಸಿದರು.

ಅಶೋಕನಗರ ಠಾಣೆಯಲ್ಲಿ ವಿಚಾರಣೆ: ಮುನಿರತ್ನ ಅವರನ್ನು ಬಂಧಿಸಿರುವ ಮಾಹಿತಿ ಗೊತ್ತಾಗುತ್ತಿದ್ದಂತೆಯೇ ವೈಯಾಲಿಕಾವಲ್ ಠಾಣೆ ಎದುರು ಸೇರಿದ್ದ ಅವರ ಬೆಂಬಲಿಗರು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಠಾಣೆಗೆ ನುಗ್ಗಲೂ ಪ್ರಯತ್ನಿಸಿದ್ದರು. ಭದ್ರತಾ ದೃಷ್ಟಿಯಿಂದ ಮುನಿರತ್ನ ಅವರನ್ನು ಅಶೋಕನಗರ ಠಾಣೆಗೆ ಸ್ಥಳಾಂತರಿಸಲಾಗಿತ್ತು. ಶೇಷಾದ್ರಿಪುರ ಉಪ ವಿಭಾಗದ ಎಸಿಪಿ ಪ್ರಕಾಶ್ ನೇತೃತ್ವದ ತನಿಖಾ ತಂಡ ಅಲ್ಲಿಯೇ ಅವರನ್ನು ಒಂದೂವರೆ ಗಂಟೆ ವಿಚಾರಣೆ ನಡೆಸಿತು.

5ನೇ ಪುಟ ನೋಡಿ

ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ಶಾಸಕ ಮುನಿರತ್ನ ರಾಜೀನಾಮೆಗೆ ಆಗ್ರಹಿಸಿ ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತೆಯರು ಕೆಪಿಸಿಸಿ ಕಚೇರಿ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

'30 ಪರ್ಸೆಂಟ್ ಮುನಿರತ್ನ', 'ಮುನಿರತ್ನ' ಎಂಬ ಪೋಸ್ಟರ್‌ಗಳನ್ನು ಕಾರ್ಯಕರ್ತೆಯರು ಪ್ರದರ್ಶಿಸಿದರು.

'ಮುನಿರತ್ನ ಅವರು ದಲಿತ, ಶೋಷಿತ, ಹಿಂದುಳಿದ ಸಮುದಾಯಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಶಾಸಕರಾಗಲಿ, ಪಂಚಾಯಿತಿ ಸದಸ್ಯರೇ ಆಗಿರಲಿ ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ. ಈ ಪ್ರಕರಣದ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ನೀಡಲಾಗುವುದು' ಎಂದು ಸೌಮ್ಯಾ ರೆಡ್ಡಿ ಹೇಳಿದರು.

ವಯನಾಡ್‌ಗಾಗಿ.... ಓಣಂ ಹಬ್ಬದ ಅಂಗವಾಗಿ ನವಿ ಮುಂಬೈನ ಪನವೆಲ್ ರೈಲು ನಿಲ್ದಾಣದಲ್ಲಿ ಭಾನುವಾರ 'ಪೂಕಳಂ' ರಚಿಸಲಾಗಿತ್ತು –ಪಿಟಿಐ ಚಿತ್ರ

'ಜನಗಣತಿ ಪ್ರಕ್ರಿಯೆ ಶೀಘ್ರದಲ್ಲೇ ಆರಂಭ'

ನವದೆಹಲಿ (ಪಿಟಿಐ): 'ಜನಗಣತಿಗೆ ಕೇಂದ್ರ ಸರ್ಕಾರ ಪ್ರಕ್ರಿಯೆ ಆರಂಭಿಸಿದೆ. ಆದರೆ, ಜಾತಿ ಗಣತಿಯನ್ನು ಜೊತೆಗೆ ನಡೆಸಬೇಕೇ ಎಂಬುದನ್ನು ಇನ್ನೂ ತೀರ್ಮಾನಿಸಿಲ್ಲ' ಎಂದು ಮೂಲಗಳು ತಿಳಿಸಿವೆ.

ಜನಗಣತಿ ಕಾರ್ಯ ಶೀಘ್ರದಲ್ಲಿಯೇ ಆರಂಭವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. 1881ರಿಂದಲೂ ಭಾರತದಲ್ಲಿ ಪ್ರತಿ 10 ವರ್ಷಕ್ಕೊಮ್ಮೆ ಜನಗಣತಿ ನಡೆಸಲಾಗುತ್ತಿದೆ.

ಜನಗಣತಿಯು 2020ರ ಏಪ್ರಿಲ್ 1ರಂದೇ ಆರಂಭವಾಗಬೇಕಿತ್ತು. ಆದರೆ, ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು. ಸಂಸತ್ತು ಕಳೆದ ವರ್ಷ ಅಂಗೀಕರಿಸಿದ್ದ ಮಹಿಳಾ ಮೀಸಲು ಕಾಯ್ದೆಗೂ ಜನಗಣತಿಗೂ ಸಂಬಂಧವಿದೆ.

ಕಾಯ್ದೆಗೆ ಅಂಕಿತ ದೊರೆತ ಬಳಿಕ ನಡೆಯುವ ಮೊದಲ ಜನಗಣತಿಯ ಅಂಕಿ–ಅಂಶ ಆಧರಿಸಿ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ಕಾಯ್ದೆಯು ಜಾರಿಗೊಳ್ಳಲಿದೆ.

5ನೇ ಪುಟ ನೋಡಿ

ಎಫ್‌ಡಿಎ ಆತ್ಮಹತ್ಯೆ ಕಿರುಕುಳ ಆರೋಪ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ ಎಫ್‌ಡಿಎ ಆಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಜ್ವಲ್ (36) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತಹಶೀಲ್ದಾರ್ ಪ್ರವೀಣ್ ಹಾಗೂ ಶಿರಸ್ತೇದಾರ್ ಗುರುರಾಜ್ ಅವರ ಕಿರುಕುಳದಿಂದ ಬೇಸತ್ತ ಪತಿಯು ಸೆ. 10ರಂದು ವಿಷ ಕುಡಿದಿದ್ದರು. ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಶನಿವಾರ ರಾತ್ರಿ ಮೃತಪಟ್ಟರು' ಎಂದು ಪ್ರಜ್ವಲ್ ಅವರ ಪತ್ನಿ ಬಿ.ಜೆ. ಶ್ರುತಿ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪ್ರಜ್ವಲ್

'ಪ್ರಜ್ವಲ್ ನನ್ನ ಸಹಿ ಫೋರ್ಜರಿ ಮಾಡಿದ್ದಾರೆ' ಎಂದು ಪ್ರವೀಣ್ ಕೂಡ ಪೊಲೀಸರಿಗೆ ದೂರು ನೀಡಿದ್ದಾರೆ.

5ನೇ ಪುಟ ನೋಡಿ

ನಾಗಮಂಗಲ ಗಲಭೆ: ಎಫ್‌ಐಆರ್ ದಾಖಲು • ಕೇರಳದ ಇಬ್ಬರು ಮುಸ್ಲಿಮರು ವಶಕ್ಕೆ

ಪಿಎಫ್‌ಐ ನಂಟಿನ ತನಿಖೆ: ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಚಲುವರಾಯಸ್ವಾಮಿ

ಮಂಡ್ಯ: 'ನಾಗಮಂಗಲ ಗಲಭೆಯಲ್ಲಿ ಕೇರಳದ ಇಬ್ಬರು ಮುಸ್ಲಿಮರ ನಂಟಿನ ಬಗ್ಗೆ ತನಿಖೆ ನಡೆಸುತ್ತೇವೆ. ರಾಷ್ಟ್ರೀಯ ತನಿಖಾ ದಳದಿಂದ (ಎನ್‌ಐಎ) ತನಿಖೆ ಮಾಡಿಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಇಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕೇರಳದ ಇಬ್ಬರು ನಾಗಮಂಗಲದ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಗಲಭೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇರೆಗೆ ಅವರನ್ನು ವಶಕ್ಕೆ ಪಡೆಯಲಾಗಿದ್ದು, ಎಫ್‌ಐಆರ್ ಕೂಡ ಆಗಿದೆ' ಎಂದು ಹೇಳಿದರು.

'ಗಣಪತಿ ಮೂರ್ತಿಯನ್ನು ಆ ರಸ್ತೆಯಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಿದ್ದರಿಂದ ಸಣ್ಣ ಘರ್ಷಣೆ ಆಗಿದೆ. ಯಾರು ಮೊದಲು ಕಲ್ಲು ತೂರಿದರು ಎಂಬುದನ್ನೂ ವಿಚಾರಣೆ ಮಾಡಬೇಕಾಗುತ್ತದೆ.ಸದ್ಯಕ್ಕೆ ಹಿಂದೂ–ಮುಸ್ಲಿಮರಿಬ್ಬರೂ ಒಟ್ಟಾಗಿ ಹಬ್ಬಗಳನ್ನು ಶಾಂತಿಯುತವಾಗಿ ನಡೆಸಲು ಒಪ್ಪಿದ್ದಾರೆ. ಹಿಂದೂಗಳು ಮುಸ್ಲಿಮರ ಜೊತೆಗೂಡಿ ಸೋಮವಾರ 'ಈದ್ ಮಿಲಾದ್' ಆಚರಿಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಗಲಭೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುವ 74 ಆರೋಪಿಗಳ ಪೈಕಿ ನಿಷೇಧಿತ ಪಿಎಫ್‌ಐ ಸಂಘಟನೆ ಸದಸ್ಯರಾದ 44ನೇ ಆರೋಪಿ ಯೂಸುಫ್, 61ನೇ ಆರೋಪಿ ನಾಸೀರ್ ಎಂಬವರು ಕೇರಳದ ಮಲ್ಲಪುರ ನಿವಾಸಿಗಳು ಎನ್ನಲಾಗಿದೆ.

ಪಿಎಫ್‌ಐ ನಂಟು: ವಿಎಚ್‌ಪಿ ಆರೋಪ 'ಶಾಂತವಾಗಿದ್ದ ನಾಗಮಂಗಲಕ್ಕೆ ಕಿಚ್ಚು ಹಚ್ಚಲು ಕೇರಳದ ಪಿಎಫ್‌ಐ ಸಂಘಟನೆಯ ಮುಸ್ಲಿಂ ಯುವಕರು ಮೊದಲೇ ಯೋಜನೆ ಮಾಡಿ ತಯಾರಿ ನಡೆಸಿದ್ದರು. ಗಲಾಟೆ ನಡೆದ ದಿನ ಮೆಡಿಕಲ್ ಶಾಪ್‌ನಲ್ಲಿ 200 ಮಾಸ್ಕ್ ಖರೀದಿಸಿದ್ದಾರೆ. ಪೆಟ್ರೋಲ್ ಬಾಂಬ್ ಬಳಕೆಯಲ್ಲೂ ಕೇರಳ ಮುಸ್ಲಿಮರ ಕೈವಾಡವಿದೆ. ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್ ಸದಸ್ಯರಾದ ರಾಘವೇಂದ್ರ, ಚಿಕ್ಕಬಳ್ಳಿ ಬಾಲಕೃಷ್ಣ, ಅಜಿತ್ ಜೈನ್ ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಹಿಂದೂಗಳು ಮುಸ್ಲಿಮರು ಜೊತೆಗೂಡಿ ಇಂದು 'ಈದ್ ಮಿಲಾದ್' ಆಚರಣೆ
- ಗಲಭೆಗೆ ಪಿಎಫ್‌ಐ ನಂಟಿದೆ: ವಿಎಚ್‌ಪಿ ಆರೋಪ
- ಯಾರು ಮೊದಲು ಕಲ್ಲು ತೂರಿದರೆಂದು ವಿಚಾರಣೆ: ಜಿಲ್ಲಾ ಉಸ್ತುವಾರಿ ಸಚಿವ

ಎನ್‌ಐಎಗೆ ವಹಿಸುವ ಚಿಂತನೆ ಇಲ್ಲ: ಪಾಟೀಲ

(ಗದಗ ವರದಿ): 'ಗಲಭೆಯಲ್ಲಿ ಪಿಎಫ್‌ಐ ಪಾತ್ರ ಇದೆ' ಎಂಬ ಆರೋಪಕ್ಕೆ ಭಾನುವಾರ ಪ್ರತಿಕ್ರಿಯಿಸಿದ ಸಚಿವ ಎಚ್‌.ಕೆ.ಪಾಟೀಲ, 'ನಾಗಮಂಗಲ ಇರಲಿ, ಯಾವುದೇ ಪ್ರದೇಶ ಇರಲಿ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ. ದೊಡ್ಡ ನಟ ಇರಲಿ, ಸಣ್ಣ ನಟ ಇರಲಿ. ಯಾರೂ ಕಾನೂನಿಗೆ ಅತೀತರಲ್ಲ. ಕೋಲಾರಕ್ಕೆ ಹೋಗಿ ಶಾಸಕರನ್ನೇ ಹಿಡಿದುಕೊಂಡು ಬಂದರು. ನಮ್ಮ ಪೊಲೀಸರು ಸಮರ್ಥರಿದ್ದಾರೆ. ಈ ಪ್ರಕರಣವನ್ನು ಎನ್‌ಐಎಗೆ ವಹಿಸುವ ಯಾವುದೇ ಚಿಂತನೆ ಇಲ್ಲ' ಎಂದರು.

ನಾಗಮಂಗಲದ ಗಲಾಟೆ ವಿಷಯವನ್ನು ಪ್ರಧಾನಿ ನರೇಂದ್ರ ಮೋದಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಕುರಿತು ಮಾತನಾಡಿದ ಸಚಿವ ಸತೀಶ ಜಾರಕಿಹೊಳಿ, 'ರಾಜ್ಯದಲ್ಲಿ 60 ಸಾವಿರ ಗಣಪನ ಮೂರ್ತಿಗಳಿವೆ. ಒಂದು ಕಡೆ ಆಕಸ್ಮಿಕವಾಗಿ ಇಂಥ ಘಟನೆ ನಡೆದಿರಬಹುದು. ಪೊಲೀಸರು ಆ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುತ್ತಾರೆ. ಇವರ‍್ಯಾಕೆ ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು' ಎಂದರು.

ಪರಪ್ಪನ ಅಗ್ರಹಾರ ಜೈಲಿನ ಮೇಲೆ ಪೊಲೀಸರ ದಾಳಿ

ಮೊಬೈಲ್, ಪೆನ್‌ಡ್ರೈವ್, ಚಾಕು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಶನಿವಾರ ದಿಢೀರ್ ದಾಳಿಮಾಡಿ ಶೋಧ ನಡೆಸಿರುವ ಪೊಲೀಸರು, 15 ಮೊಬೈಲ್ ಫೋನ್, ಪೆನ್‌ಡ್ರೈವ್, ಚಾಕು, ಎಲೆಕ್ಟ್ರಿಕ್ ಸ್ಟೌ ಸೇರಿದಂತೆ ನಿಷೇಧಿತ ವಸ್ತುಗಳು ಹಾಗೂ ನಗದನ್ನು ವಶಪಡಿಸಿಕೊಂಡಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ಚಿತ್ರನಟ ದರ್ಶನ್ ಹಾಗೂ ಸಹಚರರನ್ನು ಇದೇ ಕಾರಾಗೃಹದಲ್ಲಿ ಇರಿಸಲಾಗಿತ್ತು. ಅವರಿಗೆ ವಿಶೇಷ ಆತಿಥ್ಯ ನೀಡಲಾಗಿದೆ ಎನ್ನಲಾಗಿತ್ತು. ಆ ಕುರಿತ ತನಿಖೆಯ ಭಾಗವಾಗಿ ಶನಿವಾರ ಶೋಧ ಕಾರ್ಯ ನಡೆದಿದೆ.

ಡಿಸಿಪಿ ಸಾರಾ ಫಾತಿಮಾ ಮಾರ್ಗದರ್ಶನದಲ್ಲಿ ಎಸಿಪಿ, ಇಬ್ಬರು ಇನ್‌ಸ್ಪೆಕ್ಟರ್‌ಗಳು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 30 ಸಿಬ್ಬಂದಿ ಜೈಲಿನಲ್ಲಿ ಶೋಧ ನಡೆಸಿದ್ದರು. ಈ ವೇಳೆ 15 ಮೊಬೈಲ್ ಫೋನ್, ಮೊಬೈಲ್ ಚಾರ್ಜರ್‌ಗಳು, ಇಯರ್ ಫೋನ್, ಏಳು ಎಲೆಕ್ಟ್ರಿಕ್ ಸ್ಟೌ, ಬೀಡಿ, ಸಿಗರೇಟ್, ಒಂದು ಪೆನ್ ಡ್ರೈವ್, ಐದು ಚಾಕು ಹಾಗೂ ₹32 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಸಂಪೂರ್ಣ ರಹಸ್ಯ ಕಾರ್ಯಾಚರಣೆ

ಅಗಸ್ಟ್ 24ರಂದು ಸಿಸಿಬಿ ಪೊಲೀಸರು ಪರಪ್ಪನ ಅಗ್ರಹಾರ ಕಾರಾಗೃಹದ ಮೇಲೆ ದಾಳಿಮಾಡಿದ್ದರು. ಆದರೆ, ಕಾರ್ಯಾಚರಣೆಗೂ ಮುನ್ನ ಮಾಹಿತಿ ಸೋರಿಕೆ ಆಗಿತ್ತು. ಎಚ್ಚೆತ್ತ ಕಾರಾಗೃಹದ ಅಧಿಕಾರಿಗಳು, ಸಿಬ್ಬಂದಿ, ಕೈದಿಗಳ ಬಳಿ ಇದ್ದ ನಿಷೇಧಿತ ವಸ್ತುಗಳನ್ನು ಹೊರಕ್ಕೆ ಸಾಗಿಸಿದ್ದರು. ಈ ಬಾರಿ ಅತ್ಯಂತ ರಹಸ್ಯವಾಗಿ ಕಾರ್ಯಾಚರಣೆ ನಡೆಸಿದ್ದರಿಂದ ಹಲವು ವಸ್ತುಗಳು ಸಿಕ್ಕಿವೆ.

'ದಾಳಿಯ ಬಗ್ಗೆ ಜೈಲು ಸಿಬ್ಬಂದಿಗೂ ತಿಳಿಯಬಾರದು ಎಂದು ಪರಪ್ಪನ ಅಗ್ರಹಾರ ಠಾಣೆಯಲ್ಲಿ ದಾಖಲಾಗಿದ್ದ ಮೂರು ಪ್ರಕರಣಗಳ ವಿಚಾರಣೆಗೆ ಬಂದಿರುವುದಾಗಿ ತಿಳಿಸಿದೆವು. ಬ್ಯಾರಕ್‌ನಿಂದ ಹೊರಗೆ ಬರುವಂತೆ ಎಲ್ಲ ಕೈದಿಗಳಿಗೆ ಸೂಚಿಸಲಾಯಿತು. ಬಳಿಕ ತಪಾಸಣೆ ನಡೆಸಿದಾಗ ವಸ್ತುಗಳು ಪತ್ತೆಯಾದವು. ದುಬಾರಿ ಬೆಲೆಯ ಮೊಬೈಲ್ ಫೋನ್ ಅನ್ನು ಕೈದಿಯೊಬ್ಬರು ಬಳಸುತ್ತಿರುವುದು ಗೊತ್ತಾಯಿತು' ಎಂದು ಪೊಲೀಸರು ತಿಳಿಸಿದರು.

8ನೇ ಪುಟ ನೋಡಿ

ಬಾತ್ಮೀದಾರನ ಮಾತು ನಂಬಿ ಅಮಾಯಕರನ್ನು ಜೈಲಿಗೆ ಕಳುಹಿಸಿದ್ದ ಪ್ರಕರಣ

ಪಿಎಸ್‌ಐ ಸೇರಿ ನಾಲ್ವರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾತ್ಮೀದಾರನ ಮಾತು ನಂಬಿ ಸತ್ಯಾಸತ್ಯತೆ ಪರಿಶೀಲನೆ ನಡೆಸದೆ ಮಾದಕ ವಸ್ತುಗಳ ಮಾರಾಟ ಪ್ರಕರಣದಲ್ಲಿ ಮೂವರು ಅಮಾಯಕರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದ ಪ್ರಕರಣದಲ್ಲಿ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

'ಬನಶಂಕರಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರೀಧರ್ ಗುಗ್ರಿ, ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎಸ್.ಕೆ.ರಾಜು, ಕಾನ್‌ಸ್ಟೆಬಲ್‌ಗಳಾದ ಸತೀಶ್ ಬಗಲಿ ಹಾಗೂ ತಿಮ್ಮಣ್ಣ ಪೂಜಾರ ಅವರನ್ನು ಕರ್ತವ್ಯಲೋಪದ ಆರೋಪದಲ್ಲಿ ಅಮಾನತುಗೊಳಿಸಿ, ಇಲಾಖೆ ವಿಚಾರಣೆಗೆ ಆದೇಶಿಸಲಾಗಿದೆ.

'ಪ್ರಕರಣದಲ್ಲಿ ಪೊಲೀಸರ ಪಾತ್ರ ವೇನು? ಬಾತ್ಮೀದಾರನ ಜತೆ ಶಾಮೀಲಾಗಲು ಏನು ಕಾರಣ? ಈ ಪ್ರಕರಣದಲ್ಲಿ ಯಾವ ರೀತಿ ಲಾಭ ಪಡೆದಿದ್ದಾರೆ ಎಂಬುದರ ಬಗ್ಗೆಯೂ ತನಿಖೆ ನಡೆಯುತ್ತಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಭರಮಪ್ಪ ಜಗಲಾಸರ್ ತಿಳಿಸಿದರು.

ವೈಯಕ್ತಿಕ ದ್ವೇಷದ ಕಾರಣದಿಂದ ಸುಳ್ಳು ಮಾಹಿತಿ ನೀಡಿ ಅಮಾಯಕರ ಬಂಧನಕ್ಕೆ ಸಂಚು ನಡೆಸಿದ ಆರೋಪದಡಿ ಪೊಲೀಸ್ ಬಾತ್ಮೀದಾರ ರಾಜನ್ ಹಾಗೂ ಈತನ ಸ್ನೇಹಿತೆ ಚೈತ್ರಾ ಎಂಬಾಕೆಯನ್ನು ಸುಬ್ರಹ್ಮಣ್ಯಪುರ ಉಪ ವಿಭಾಗದ ಎಸಿಪಿ ನೇತೃತ್ವದ ತಂಡ ಬಂಧಿಸಿದೆ.

ಆಗಸ್ಟ್ 9ರಂದು ಕದಿರೇನಹಳ್ಳಿಯ ಸಿಮೆಂಟ್ ರಸ್ತೆಯಲ್ಲಿ ಮಾದಕ ಪದಾರ್ಥಗಳ ಮಾರಾಟ ಮಾಡುತ್ತಿದ್ದ ಆರೋಪದಡಿ ಮೂವರು ವ್ಯಕ್ತಿಗಳನ್ನು ಬನಶಂಕರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದರು. ಅವರ ದ್ವಿಚಕ್ರ ವಾಹನದಲ್ಲಿ ಬಚ್ಚಿಡಲಾಗಿದ್ದ 400 ಗ್ರಾಂ.ನಷ್ಟು ತೂಕದ ಆಫೀಮು ಜಪ್ತಿ ಮಾಡಿದ್ದರು. ಠಾಣಾಧಿಕಾರಿ ಶ್ರೀಧರ್ ಅವರು ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ನ್ಯಾಯಾಲಯ ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಿದ್ದರಿಂದ 20 ದಿನ ಜೈಲಿನಲ್ಲಿದ್ದರು.

ಈ ಮಧ್ಯೆ ಬಂಧನಕ್ಕೆ ಒಳಗಾದ ವ್ಯಕ್ತಿಗಳ ಕುಟುಂಬಸ್ಥರು ಪೊಲೀಸರ ಬಂಧನ ಕಾರ್ಯಾಚರಣೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ಪೊಲೀಸ್ ಬಾತ್ಮೀದಾರನಾಗಿದ್ದ ರಾಜನ್ ಎಂಬಾತನ ಕೈವಾಡದ ಬಗ್ಗೆ ಅನುಮಾನ ವ್ಯಕ್ತಪಡಿಸಿ ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದರು. ಪ್ರಕರಣದ ತನಿಖೆ ನಡೆಸಿ ವರದಿ ನೀಡುವಂತೆ ಸುಬ್ರಹ್ಮಣ್ಯಪುರ ಉಪ ವಿಭಾಗದ ಎಸಿಪಿ ಗಿರೀಶ್ ಅವರಿಗೆ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಆದೇಶಿಸಿದ್ದರು.

ತನಿಖೆ ನಡೆಸಿದ್ದ ಎಸಿಪಿ ಗಿರೀಶ್, ಪ್ರಕರಣದಲ್ಲಿ ಬಾತ್ಮೀದಾರನ ಸುಳ್ಳು ಮಾಹಿತಿ ಹಾಗೂ ಪೊಲೀಸ್ ಸಿಬ್ಬಂದಿಯ ಕರ್ತವ್ಯಲೋಪ ಇರುವುದರ ಕುರಿತು ಸೆಪ್ಟೆಂಬರ್ 12ರಂದು ಡಿಸಿಪಿಗೆ ವರದಿ ಸಲ್ಲಿಸಿದ್ದರು. ಅದರನ್ವಯ ನಾಲ್ವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಸ್ನೇಹಿತೆ ಜತೆ ಸೇರಿ ಸಂಚು

'ಹಲವು ವರ್ಷಗಳಿಂದ ಪೊಲೀಸ್ ಬಾತ್ಮೀದಾರನಾಗಿದ್ದ ರಾಜನ್, ಪ್ರಕರಣದಲ್ಲಿ ಬಂಧಿತರಾಗಿದ್ದ ಮೂವರು ವ್ಯಕ್ತಿಗಳೊಂದಿಗೆ ವೈಯಕ್ತಿಕ ದ್ವೇಷ ಹೊಂದಿದ್ದ. ಮೂವರನ್ನೂ ಪ್ರಕರಣದಲ್ಲಿ ಸಿಲುಕಿಸಲು ಸಂಚು ರೂಪಿಸಿ, ತನ್ನ ಸ್ನೇಹಿತೆಯ ಮೂಲಕ ಅವರ ದ್ವಿಚಕ್ರ ವಾಹನದಲ್ಲಿ ಮಾದಕ ಪದಾರ್ಥ ಇರಿಸಿದ್ದ. ನಂತರ ಪೊಲೀಸರಿಗೆ ಮಾಹಿತಿ ನೀಡಿ ದಾಳಿ ಮಾಡಿಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಬಾತ್ಮೀದಾರ ರಾಜನ್ ಮಾಹಿತಿಯನ್ನು ಪರಿಶೀಲಿಸದೆಯೇ ಪೊಲೀಸರು ಮೂವರು ಅಮಾಯಕರನ್ನು ಬಂಧಿಸಿದ್ದರು. ಅವರು ಈಗ ಜಾಮೀನು ಪಡೆದು ಹೊರ ಬಂದಿದ್ದಾರೆ' ಎಂದು ಹೇಳಿದ್ದಾರೆ.

ಅಪರಾಧ ಸುದ್ದಿ

ಚಿನ್ನದ ಸರ, ದ್ವಿಚಕ್ರ ವಾಹನ ಕಳ್ಳನ ಬಂಧನ

ಬೆಂಗಳೂರು: ಮಹಿಳೆಯರ ಚಿನ್ನದ ಸರ ಹಾಗೂ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡು ಕೃಷ್ಣಗಿರಿಯ ರಮೇಶ್ ಅಲಿಯಾಸ್ ರಾಮು (24) ಎಂಬಾತನನ್ನು ಬಂಧಿಸಿ, ₹10 ಲಕ್ಷ ಮೌಲ್ಯದ 6 ಗ್ರಾಂ ತೂಕದ ಚಿನ್ನದ ಸರ, ನಾಲ್ಕು ದ್ವಿಚಕ್ರ ವಾಹನ ಹಾಗೂ ಒಂದು ಆಟೊ ವಶಪಡಿಸಿಕೊಳ್ಳಲಾಗಿದೆ.

ತಲಘಟ್ಟಪುರ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿ ಸುವರ್ಣ ಎಂಬುವವರು ಆ.27ರಂದು ಸಂಜೆ ಕಲ್ಯಾಣ ಮಂಟಪದ ಎದುರಿನ ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ, ದ್ವಿಚಕ್ರ ವಾಹನದಲ್ಲಿ ಬಂದು ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ.

ಘಟನಾ ಸ್ಥಳದ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ವೇಳೆ ಆರೋಪಿ ಸುಳಿವು ದೊರೆಯಿತು. ಅಂಚೆ ಪಾಳ್ಯದ ಬೃಂದಾವನ ಲೇಔಟ್‌ನಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ, ಸರಗಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಪ್ಲೊಮಾ ಪದವೀಧರನಾಗಿರುವ ಆರೋಪಿ, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ. ಮೋಜಿಗಾಗಿ ಹಣ ಮಾಡುವ ಉದ್ದೇಶದಿಂದ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದ. ಈತನ ವಿರುದ್ಧ ರಾಜರಾಜೇಶ್ವರಿನಗರ, ಕೆಂಗೇರಿ, ಚಂದ್ರಾ ಲೇಔಟ್, ಜ್ಞಾನಭಾರತಿ, ಕೋಣನಕುಂಟೆ, ರಾಜಗೋಪಾಲ ನಗರ, ಹುಳಿಮಾವು, ಮಲ್ಲೇಶ್ವರ ಸೇರಿ ವಿವಿಧ ಪೊಲೀಸ್ ಠಾಣೆಗಳಲ್ಲಿ 28 ಅಪರಾಧ ಪ್ರಕರಣಗಳು ದಾಖಲಾಗಿವೆ. ಹಲವು ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ. ಜಾಮೀನು ಪಡೆದು ಹೊರ ಬಂದ ಬಳಿಕವೂ ಕಳ್ಳತನ ಮುಂದುವರೆಸಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

₹20 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಬೆಂಗಳೂರು: ಟಿವಿ-ಡಿಶ್ ಕೇಬಲ್ ರಿಪೇರಿ ನೆಪದಲ್ಲಿ ಮನೆಗಳ ಬೀಗ ಒಡೆದು ನಗದು, ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರಿನ ಕ್ಯಾತ್ಸಂದ್ರ ನಿವಾಸಿ ನಾಗರಾಜ್ ಅಲಿಯಾಸ್ ರಿಹಾನ್ (32) ಎಂಬಾತನನ್ನು ಬಂಧಿಸಿ, ₹ 20 ಲಕ್ಷ ಮೌಲ್ಯದ 300 ಗ್ರಾಂ. ಚಿನ್ನಾಭರಣ ಹಾಗೂ ಒಂದು ಕೆ.ಜಿ. ಬೆಳ್ಳಿ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಈತ ಟಿ.ವಿ ರಿಪೇರಿ ಮಾಡುವ ನೆಪದಲ್ಲಿ ಒಂಟಿ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಯಾಡರಹಳ್ಳಿಯ ಚೇತನ್ ಸರ್ಕಲ್ ಬಳಿ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಸಂಬಂಧ ದೂರು ದಾಖಲಾಗಿತ್ತು. ಸ್ಥಳಕ್ಕೆ ಪೊಲೀಸರು, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲಿಸಿದ್ದರು. ನಾಗರಾಜ್‌ನ ಬೆರಳಚ್ಚು ಪತ್ತೆಯಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿಯನ್ನು ನೈಸ್ ರಸ್ತೆಯ ಕೊಡಿಗೆಹಳ್ಳಿ ಸೇತುವೆ ಬಳಿ ಬಂಧಿಸಲಾಯಿತು ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ನನಗೇ ಟಿಕೆಟ್: ಯೋಗೇಶ್ವರ್

ರಾಮನಗರ: 'ಚನ್ನಪಟ್ಟಣ ಉಪ ಚುನಾವಣೆ ಟಿಕೆಟ್‌ಗೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಜೆಡಿಎಸ್ ಮಧ್ಯೆ ಗೊಂದಲವಿಲ್ಲ. ನೂರಕ್ಕೆ ನೂರರಷ್ಟು ನನಗೇ ಮೈತ್ರಿ ಟಿಕೆಟ್ ಸಿಗಲಿದೆ. ಚುನಾವಣೆ ದಿನಾಂಕ ಘೋಷಣೆಯಾದ ಬಳಿಕ ವದಂತಿಗಳಿಗೆ ಉತ್ತರ ಸಿಗಲಿದೆ' ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಭವನದಲ್ಲಿ ಭಾನುವಾರ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.



'ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಮುಖರ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸುತ್ತಿದ್ದೇನೆ. ಮುಂದೆ ಹಳ್ಳಿಗಳಿಗೂ ಭೇಟಿ ನೀಡಲಿದ್ದೇನೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಆಪರೇಷನ್ ಹಸ್ತ ನಡೆಸಿದರೂ ಅದರ ಪರಿಣಾಮ ಉಪ ಚುನಾವಣೆ ಮೇಲೆ ಬೀರುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಲೋಕಸಭಾ ಚುನಾವಣೆ ಸಂದರ್ಭದಲ್ಲಿ ದುಡ್ಡು ಕೊಟ್ಟು ನಗರಸಭೆ ಸದಸ್ಯರು ಸೇರಿದಂತೆ ಕೆಲ ಮುಖಂಡರನ್ನು ಕಾಂಗ್ರೆಸ್‌ನವರು ಸೆಳೆದಿದ್ದರು. ಈಗ ಅವರೆಲ್ಲರೂ ಮಾನಸಿಕವಾಗಿ ನಮಗೆ ಬೆಂಬಲ ನೀಡುತ್ತಿದ್ದಾರೆ. ಕ್ಷೇತ್ರದಲ್ಲಿ ನಾನು ಮತ್ತು ನಿಖಿಲ್ ಪ್ರತ್ಯೇಕವಾಗಿ ಕಾರ್ಯಕರ್ತರೊಂದಿಗೆ ಸಭೆ ನಡೆಸುತ್ತಾ, ಪಕ್ಷ ಸಂಘಟನೆ ಮಾಡಿ ಚುನಾವಣೆಗೆ ಅಣಿಗೊಳಿಸುತ್ತಿದ್ದೇವೆ' ಎಂದು ತಿಳಿಸಿದರು.

ಭಾರಿ ವಾಹನ ಸಂಚಾರ ನಿಷೇಧ

ಬೆಂಗಳೂರು: ಈದ್ ಮಿಲಾದ್ ಅಂಗವಾಗಿ ಮುಸ್ಲಿಂ ಸಮುದಾಯದವರು ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಕಾರಣ ಸಂಚಾರ ದಟ್ಟಣೆ ಸುಗಮಗೊಳಿಸುವ ಉದ್ದೇಶದಿಂದ ಕನಕಪುರ ರಸ್ತೆ, ಸರ್ಜಾಪುರ ರಸ್ತೆ ಹಾಗೂ ಹೊಸೂರು ರಸ್ತೆಗಳ ಮೂಲಕ ನಗರ ಪ್ರವೇಶಿಸುವ ಭಾರಿ ವಾಹನಗಳ ಸಂಚಾರವನ್ನು ಸೋಮವಾರ ಬೆಳಿಗ್ಗೆ 7 ರಿಂದ ರಾತ್ರಿ 12 ಗಂಟೆವರೆಗೆ ನಿಷೇಧಿಸಿ ನಗರ ಸಂಚಾರ ವಿಭಾಗದ ಪೊಲೀಸರು ಆದೇಶ ಹೊರಡಿಸಿದ್ದಾರೆ.

'ಸಿ.ಎಂ, ಎಚ್‌ಡಿಕೆ ಆಸ್ತಿ ಬದಲಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಕೋಲಾರ: 'ಸಿದ್ದರಾಮಯ್ಯ ಹಾಗೂ ಎಚ್.ಡಿ.ಕುಮಾರಸ್ವಾಮಿ ತಮ್ಮ ಆಸ್ತಿಯನ್ನು ಪರಸ್ಪರ ಬದಲಾಯಿಸಿಕೊಳ್ಳಲಿ' ಎಂದು ಸಚಿವ ಬೈರತಿ ಸುರೇಶ್ ಸವಾಲು ಹಾಕಿದರು.

ಸಿದ್ದರಾಮಯ್ಯ ದಲಿತರ ನಿವೇಶನ ಕಬಳಿಕೆ ಮಾಡಿದ್ದಾರೆ ಎಂಬ ಕುಮಾರಸ್ವಾಮಿ ಹೇಳಿಕೆಗೆ ನಗರದಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಇಬ್ಬರ ಆಸ್ತಿಯನ್ನು ಹೋಲಿಕೆ ಮಾಡೋಣ. ಸಿದ್ದರಾಮಯ್ಯ ತಮ್ಮ ಎಲ್ಲಾ ಆಸ್ತಿಯನ್ನು ಕುಮಾರಸ್ವಾಮಿ ಅವರಿಗೆ ನೀಡಲಿ. ಕುಮಾರಸ್ವಾಮಿ ತಮ್ಮ ಎಲ್ಲಾ ಆಸ್ತಿಯನ್ನು ಸಿದ್ದರಾಮಯ್ಯ ಅವರಿಗೆ ನೀಡಲಿ. ಆಗ ಎಲ್ಲವೂ ಸರಿ ಹೋಗುತ್ತದೆ' ಎಂದರು.

ಬೈರತಿ ಸುರೇಶ್

'ಸಿದ್ದಾಮರಾಮಯ್ಯ 1982 ರಿಂದ ರಾಜಕಾರಣದಲ್ಲಿದ್ದಾರೆ. ಕುಮಾರಸ್ವಾಮಿ 1998ರಲ್ಲಿ ರಾಜಕೀಯಕ್ಕೆ ಬಂದರು. ಯಾರು ಎಷ್ಟು ಆಸ್ತಿ ಮಾಡಿಕೊಂಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಸಿದ್ದರಾಮಯ್ಯ ಅವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಇಡೀ ದೇಶದಲ್ಲಿ ಪ್ರಾಮಾಣಿಕ ಮುಖ್ಯಮಂತ್ರಿ ಇದ್ದರೆ ಅದು ಸಿದ್ದರಾಮಯ್ಯ ಮಾತ್ರ. ಅವರ ಬಗ್ಗೆ ಮಾತನಾಡಿದವರನ್ನು ಆ ದೇವರೇ ನೋಡಿಕೊಳ್ಳುತ್ತಾನೆ' ಎಂದು ನುಡಿದರು.

ಬಿಜೆಪಿ ಶಾಸಕ ಮುನಿರತ್ನ ಬಂಧನ ವಿಚಾರವಾಗಿ ಪ್ರತಿಕ್ರಿಯಿಸಿ, 'ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋಗಿದ್ದಕ್ಕೆ ಟಾರ್ಗೆಟ್ ಮಾಡುತ್ತಿದ್ದಾರೆ ಎನ್ನುತ್ತಿದ್ದಾರೆ. ಒಕ್ಕಲಿಗರು, ದಲಿತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಲು, ಹಣಕ್ಕೆ ಬೇಡಿಕೆ ಇಡಲು ಕಾಂಗ್ರೆಸ್ ಪಕ್ಷ ಹೇಳಿತ್ತೇ? ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿ ಹೇಳಿದ್ದರೇ? ಜಾತಿ, ಜನಾಂಗದ ಮೇಲೆ ವೈಯಕ್ತಿಕವಾಗಿ ನಿಂದನೆ ಮಾಡುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಮಾಡಿದ್ದುಣ್ಣೋ ಮಾರಾಯ ಎಂಬಂತೆ ತಪ್ಪು ಮಾಡಿದವರು ಅದರ ಫಲ ಅನುಭವಿಸಬೇಕು. ಅಸಹ್ಯಕರವಾಗಿ ಮಾತನಾಡಿರುವ ಆಡಿಯೊ ಇದೆ. ಮುನಿರತ್ನ ಮಾತನಾಡಿದ್ದು ನಿಜವೋ ಅಲ್ಲವೋ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ದೃಢವಾಗಲಿದೆ' ಎಂದರು.

ನಾಗಮಂಗಲ ಗಲಾಟೆ ವಿಚಾರವನ್ನು ಹರಿಯಾಣ ಚುನಾವಣೆಯಲ್ಲಿ ಪ್ರಧಾನಿ ಮೋದಿ ಪ್ರಸ್ತಾಪಿಸಿರುವ ಕುರಿತು ಪ್ರತಿಕ್ರಿಯಿಸಿ, 'ನಾಗಮಂಗಲ ಪ್ರಕರಣ ಅತಿ ಸೂಕ್ಷ್ಮ ವಿಚಾರವಾಗಿದ್ದು, ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಹಿಂದೂ ಆಗಲಿ ಮುಸ್ಲಿಂ ಆಗಲಿ ಸೌಹಾರ್ದಯುತವಾಗಿರಬೇಕು. ಕ್ಷುಲ್ಲಕ ಕಾರಣಗಳಿಗೆ ಜಗಳವಾಡುವುದು ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಜವಾಬ್ದಾರಿ ಅರಿತು ಮಾತನಾಡಬೇಕು. ರಾಜಕಾರಣಕ್ಕೆ ಈ ವಿಚಾರ ಬಳಸಿಕೊಳ್ಳಬಾರದು, ಉರಿಯುವ ಬೆಂಕಿಗೆ ತುಪ್ಪ ಸುರಿಯಬಾರದು' ಎಂದು ಹೇಳಿದರು.

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 21/SBC/24
ದಿನಾಂಕ 04.09.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ವಿಭಾಗ: ಡಿಎಸ್‌ಡಿಸಿ ರೈಲುಗಳು ಚಲಿಸುವಂತಾಗಲು ಆರ್‌ಓಬಿಗಳ ಪುನರ್‌ನಿರ್ಮಾಣಕ್ಕೆ ಹಾಗೂ ಎಲ್‌ಸಿಗಳನ್ನು ನಿರ್ಮೂಲನೆ ಮಾಡಿ ಆರ್‌ಓಬಿ / ಆರ್‌ಯುಬಿಗಳ ನಿರ್ಮಾಣ ಕಾರ್ಯಗಳಿಗೆ ಸಂಬಂಧಿಸಿದಂತೆ ಡಿಪಿಆರ್ ಅನ್ನು ತಯಾರಿಸುವುದು ಮತ್ತು ಸಲ್ಲಿಸುವುದು (26 ನಂ.)	ರೂ. 93,40,827/-
2	ಸಹಾಯಕ ವಿಭಾಗೀಯ ಇಂಜಿನಿಯರ್ / ಬ್ರಿಡ್ಜ್‌ಗಳ ವಿಭಾಗ: ಬೆಂಗಳೂರು ವಿಭಾಗದ ವರಿಷ್ಠ ವಿಭಾಗೀಯ ಇಂಜಿನಿಯರ್ / ಬ್ರಿಡ್ಜ್‌ಗಳು / ಉತ್ತರ / ಕೆಎಸ್‌ಆರ್ ಬೆಂಗಳೂರು ವ್ಯಾಪ್ತಿಗೆ ಬರುವ ಸ್ಟೀಲ್ ಗಿರ್ಡರ್ ಬ್ರಿಡ್ಜ್‌ಗಳು ಮತ್ತು ರೋಡ್ ಓವರ್ ಬ್ರಿಡ್ಜ್‌ಗಳ ನಿರ್ವಹಣಾ ಕಾರ್ಯಗಳು. ನಿರ್ವಹಣೆಯ ಅವಧಿ 01 ತಿಂಗಳು.	ರೂ. 71,45,536/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.09.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ
PUB/417/AAMO/PRB/SWR/2024-25 ಬೆಂಗಳೂರು

South Western Railway - SWR | @SWRRLY | SWRRLY

'ದ ಎಡ್ಜ್' ಸ್ಕೈ ಡೆಕ್ ವೀಕ್ಷಿಸಿದ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿಗರ ಆಕರ್ಷಣೆಗಾಗಿ ಬೆಂಗಳೂರಿನಲ್ಲಿ ಸ್ಕೈ ಡೆಕ್ ನಿರ್ಮಿಸಲು ಯೋಜನೆ ರೂಪಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಅಮೆರಿಕ ಪ್ರವಾಸದ ವೇಳೆ ನ್ಯೂಯಾರ್ಕ್ ನಗರದ ಹಡ್ಸನ್ ಯಾರ್ಡ್ಸ್‌ನಲ್ಲಿರುವ 'ದ ಎಡ್ಜ್' ಸ್ಕೈ ಡೆಕ್‌ಗೆ ಭೇಟಿ ನೀಡಿ ಅದರ ವಾಸ್ತುಶಿಲ್ಪ, ವಿನ್ಯಾಸವನ್ನು ವೀಕ್ಷಿಸಿದರು.

ಹಡ್ಸನ್ ಯಾರ್ಡ್ಸ್ 30 ವೆಸ್ಟರ್ನ್ ಹೆಮಿಸ್ಫರ್‌ನಲ್ಲಿರುವ ಕಟ್ಟಡದ 100ನೇ ಮಹಡಿಯಲ್ಲಿ 7,500 ಚದರ ಅಡಿಯ ಈ ಡೆಕ್ ಅನ್ನು ಪತ್ನಿ ಉಷಾ ಜೊತೆ ಶಿವಕುಮಾರ್ ಅವರು ವೀಕ್ಷಿಸಿದರು. ಈ ಡೆಕ್ ಫ್ಲೋರ್‌ನಿಂದ ಹಿಡಿದು ಸೀಲಿಂಗ್‌ವರೆಗೂ ಪಾರದರ್ಶಕ ಗಾಜಿನಿಂದ ಕೂಡಿದ್ದು, ಇದು ನ್ಯೂಯಾರ್ಕ್ ನಗರದ ವಿಹಂಗಮ ನೋಟಕ್ಕೆ ವೇದಿಕೆಯಾಗಿದೆ.

ಬೆಂಗಳೂರಿನ ಸ್ಕೈ ಡೆಕ್ ನಿರ್ಮಾಣ ವಿಚಾರವಾಗಿ ಶಿವಕುಮಾರ್ ಅವರು ಖ್ಯಾತ ವಾಸ್ತುಶಿಲ್ಪ ವಿನ್ಯಾಸಗಾರ ಬಾಬು ಕೀಲಾರ ಜೊತೆ ಚರ್ಚಿಸಿದರು. ಶಿವಕುಮಾರ್ ಅವರು ಕೀಲಾರ ಅವರ ಜತೆ ಹಡ್ಸನ್ ಯಾರ್ಡ್ ಸೇರಿದಂತೆ ಹಲವು ಸ್ಕೈ ಡೆಕ್ ಗಗನಚುಂಬಿ ಕಟ್ಟಡಗಳನ್ನೂ ಪರಿಶೀಲಿಸಿದರು.

ನ್ಯೂಯಾರ್ಕಿನ ವಿಶ್ವ ವಾಣಿಜ್ಯ ಕಟ್ಟಡ, ಚೀನಾದ ಶಾಂಘೈ ಟವರ್, ದುಬೈನ ಬುರ್ಜ್ ಖಲೀಫಾದ ವಿನ್ಯಾಸ ಮಾಡಿರುವ ವಾಸ್ತುಶಿಲ್ಪ ವಿನ್ಯಾಸಗಾರ ಕೆನ್ನೆತ್ ಡ್ರಕರ್ ಅವರ ಜತೆಗೂ ಶಿವಕುಮಾರ್ ಚರ್ಚೆ ನಡೆಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನ್ಯೂಯಾರ್ಕ್‌ನ ಹಡ್ಸನ್ ಯಾರ್ಡ್ಸ್‌ನಲ್ಲಿರುವ 'ದ ಎಡ್ಜ್' ಸ್ಕೈ ಡೆಕ್‌ನ್ನು ವೀಕ್ಷಿಸಿದರು

'ಟೀಕೆಗೆ ಅಭಿವೃದ್ಧಿ ಮೂಲಕ ಉತ್ತರ'

ಕೆಂಗೇರಿ: ಕ್ಷೇತ್ರದ ಅಭಿವೃದ್ಧಿಗೆ ಕೈ ಜೋಡಿಸದೆ ಕೇವಲ ತೇಜೋವಧೆಯಲ್ಲಿ ತೊಡಗಿದವರಿಗೆ ಅಭಿವೃದ್ಧಿ ಮೂಲಕ ಉತ್ತರ ನೀಡಲಾಗುವುದು ಎಂದು ಯಶವಂತಪುರ ಕ್ಷೇತ್ರ ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯ ಮಲ್ಲಸಂದ್ರ ಗ್ರಾಮದ ಶ್ರೀರಾಮ್ ಸಿಂಫೋನಿ ಅಪಾರ್ಟ್‌ಮೆಂಟ್‌ನ 23 ಆಸ್ತಿ ಮಾಲೀಕರಿಗೆ 'ಬಾಗಿಲಿಗೆ ಬಂತು ಸರ್ಕಾರ; ಸೇವೆಗೆ ಇರಲಿ ಸಹಕಾರ' ಯೋಜನೆಯಡಿ ಖಾತೆ ವಿತರಿಸಿ ಅವರು ಮಾತನಾಡಿದರು.

110 ಹಳ್ಳಿ ವ್ಯಾಪ್ತಿಯ ಯೋಜನೆಯ ಕಾರ್ಯಗಳು ಮಲ್ಲಸಂದ್ರ ಗ್ರಾಮದಲ್ಲೂ ಚಾಲ್ತಿಯಲ್ಲಿದ್ದು, ಕಾವೇರಿ ಕುಡಿಯುವ ನೀರು ಪೈಪ್ ಅಳವಡಿಕೆ ಮುಗಿದಿದೆ. ಯುಜಿಡಿ ಹಾಗೂ ವೈಟ್ ಟ್ಯಾಪಿಂಗ್ ಕಾಮಗಾರಿಗೆ ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಇದೇ ವೇಳೆ ಸಕಾಲದಲ್ಲಿ ಅರ್ಜಿ ಸಲ್ಲಿಸಿ ನಿಗದಿತ ಹಣ ಪಾವತಿ ಮಾಡಿ ಖಾತೆ ಪಡೆದಿದ್ದರೂ ಬಿಬಿಎಂಪಿ ದಾಖಲಾತಿಯಲ್ಲಿ ಖಾತೆಯೇ ನಮೂದಾಗಿಲ್ಲ. ಅಧಿಕಾರಿಗಳು ಹಣ ಪಡೆದು ನಕಲಿ ದಾಖಲೆ ನೀಡಿದ್ದಾರೆ ಎಂದು ಸ್ಥಳೀಯರೊಬ್ಬರು ದೂರಿದರು. ಪ್ರತಿಕ್ರಿಯೆ ನೀಡಿದ ಸ್ಥಳೀಯ ಕಂದಾಯ ಅಧಿಕಾರಿ, ಅವ್ಯವಹಾರಕ್ಕೆ ಅಧಿಕಾರಿಗಳು ಮಾತ್ರ ಜವಾಬ್ದಾರರಲ್ಲ. ಎರಡು ಕೈ ಸೇರಿದರಷ್ಟೇ ಚಪ್ಪಾಳೆ. ಅಕ್ರಮಕ್ಕೆ ಆಸ್ತಿ ಮಾಲೀಕರೂ ಹೊಣೆ ಎಂದರು.

ಕಂದಾಯ ಡಿಸಿ ಅಬ್ದುಲ್ ರಬ್, ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ, ಮುಖಂಡರಾದ ವಾಜರಹಳ್ಳಿ ಶಶಿಕುಮಾರ್ ಇದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
PROPERTY NOT FOR SALE

This is to inform the general public that schedule property, here in below belongs to Late. **P.S. Ugrappa, after his death that legal heirs namely Late. Shamanna, Late Lakshmamma, Late. Narayanappa, Devadas, Late. Jayamma Late. Muthamma, P.U.Ambujamma, Late. P.U. Balachandradas, Late. PU. Sunandhamma, P.U. Chandramma, P.U. Rangalakshmamma, P.U. Chakrapani, PU. Shankupani, PU Vimala, Late. P.U. Kumaraswamy, P.U. Saroja.** The family tree have been registered in Revenue Department of Karnataka, RD 0038930355025. We are the absolute owners of the property mentioned below in the schedule here under. We have not given any person/s any right or authority to deal with the schedule properties, any person/s dealing with any other person/s apart from us shall do so at their own risk and consequences. we are not responsible for the same. The schedule property are not for sale at present.

SCHEDULE PROPERTY

All that piece and parcel of Property No: 1-1-11 (Assessment No. 3443/1253) Old S.S.K Choultry Road, Pavagada Town, Pavagada Taluk, Tumkur District-561202. Measuring of the **East to West**:13.716027 mtrs & **North to South**: 33.832868 mtrs. **Total measurement 1522.476 mtrs** with building measuring **392.97969** sqmtrs and bounded on;
East : Hotel Swagath,
West : Sri Vishwanath Building & Road,
North : Old S.S.K. Choultry Road,
South : Bellary Road.

B.S.P.S Associates, Advocates #207, Swiss Complex, Race Course Road, Bangalore Mobile No. 9739011764

BUSINESS

Business Offers

Finance

BANGALORE BASED DSA provides Mortgage, Home Loan, balance transfer. Low interest. Above 1 cr. 8867627879

JOB OPPORTUNITIES

General

SUPERVISORS WITH 5+ years experience & basic computer skills required for a Manufacturing firm at Peenya. Suitable candidates contact : 080- 26603729. Email: anvesh@mahendraperfumery.com

Hospital & Medical Jobs

WANTED NURSING Staff and Receptionist Contact: Chaitanya Hospital,no 80/117, P&T Colony, R.T.Nagar, Bangalore-32 Contact: 9900520357

REAL ESTATE SELLING

Flat

Sadashiva Nagar

FLAT FOR Sale 4 BHKServant Room 3370sft, BagamaneTriumph,13SadashivaNagarSankey Road coveredparking for Two cars.Contact: 6281741101

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

ANNOUNCEMENT

I, **Sneha P**, D/O: **Prakash M**, aged about 31 Years, Residing at "Snehashree", 5th Cross, Ashoka Nagar, VTC: Tumkur, District: Tumkur, State: Karnataka, Pin Code: 572102 have got married with **Sri Souvik Chatterjee, S/O Sri Avijit Chatterjee** vide **Marriage Certificate No: TMK-HM437-2021-2022, CD No: TMKM66 dated on 16 September 2021. As per Affidavit No: 737 Page 68, Vol-01 dated 09-09-2024**, I am changing my name and address as below: New Name: **Sneha P Chatterjee**, W/O **Souvik Chatterjee**, and New Address: No: 06, 10th Cross, Swarna Layout, Basavanapura Main Road, Krishnarajapuram, District: Bangalore, State : Karnataka, Pin Code: 560036. This will be used for all purposes. vide affidavit dated: 9.9.2024 before Notary G. Rajendra, Bengaluru.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

CONNECT

You Have Problem? Solutions for all problems from
FAMOUS ASTROLOGER
BABA MUSA KHAN
10 Years Same Location
Fees after work
9740748819 Open Challenge
Family Dispute, Job, Enemies, Love Affair, Child Problem, Second Wife Problem, Delay in Marriage, Love Marriage, Relation Issue, foreign tour, Etc
For Urgent Solutions Meet Once
Adugodi, Koramangala 8th Blk, Nr Narayan School

How To Profit From
Market Moves
Through Trading?
DYNAMIC SYSTEM & DYNAMIC LIVE
Spend Less Than 1 MINUTE per HOUR for Futures & Options Market Trades.
FREE Seminar on Advance Revolutionary-2024 DYNAMIC SUPER POWER TRADING
For: Beginners, Day Traders, Investors, Retired people, Housewives and Working Professionals.
Today, Monday 16th Sep @ 6:30pm
Tomorrow, Tuesday 17th Sep @ 6:30pm
Venue: Manpho Bell Hotel & Convention Center
88, Next to City Railways Station, Bangalore - 560023
"You can attend any one seminar"
Email: enquiry@dynamiclive.in Website: http://dynamiclive.in
*All Stock Market basis Investments are subject to market risk

ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 14ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

'ಪ್ರಸಕ್ತ ಸಾಲಿನಲ್ಲಿ ಗರಿಷ್ಠ ಠೇವಣಿ ಸಂಗ್ರಹ'

ಪ್ರಜಾವಾಣಿ ವಾರ್ತೆ

ಯಲಹಂಕ: ಹುಣಸಮಾರನಹಳ್ಳಿಯ ಸರ್ಕಾರಿ ಶಾಲೆಯ ಆವರಣದಲ್ಲಿ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 2023-24ನೇ ಸಾಲಿನ 14ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಆರ್.ರವಿಚಂದ್ರ, ಸಹಕಾರಿಯಲ್ಲಿ ನೂತನವಾಗಿ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗಾಗಿ ವಿಶೇಷ ಸಾಲ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಶಿಕ್ಷಣ ಸಾಲ ಮತ್ತಿತರ ಸೌಲಭ್ಯಗಳನ್ನು ಆರಂಭಿಸಲಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮಹಿಳಾ ಸಬಲೀಕರಣ, ಯುವಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಆಕರ್ಷಿಸಲು ಸದಸ್ಯತ್ವ ನೋಂದಣಿ ಅಭಿಯಾನ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

'ಪ್ರಸಕ್ತ ಸಾಲಿನಲ್ಲಿ ಸಂಘದಲ್ಲಿ ಗರಿಷ್ಠ ಪ್ರಮಾಣದಲ್ಲಿ ಠೇವಣಿಗಳ ಸಂಗ್ರಹವಾಗಿದೆ. ಸಾಲ ವಿತರಣೆ ಮತ್ತು ವಸೂಲಾತಿಯಲ್ಲಿಯೂ ಗಮನಾರ್ಹ ಸಾಧನೆ ಮಾಡಲಾಗಿದೆ' ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಘದ ಉಪಾಧ್ಯಕ್ಷೆ ಎ.ಎಂ. ಸುಜಾತ, ನಿರ್ದೇಶಕರಾದ ಬಿ.ಆರ್.ಬೈರೇಗೌಡ, ಲತಾರಾಣಿ, ಎ.ಸಣ್ಣವೀರಣ್ಣ, ಪಿ.ಶಿವಕುಮಾರ್, ಕೆ.ಪಿ. ರವಿಕುಮಾರ್, ವಿ.ಚಂದ್ರಮೋಹನ್, ಎಚ್. ಜಿ.ಸರಸ್ವತಿ, ಮಂಗಳ, ಕೆ.ಜೆ. ಶ್ವೇತಾ, ಕೆ.ಸಿ.ನಾರಾಯಣಗೌಡ, ಎಂ.ಚಂದ್ರಶೇಖರಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ.ಎಸ್. ವೆಂಕಟಾಚಲಪತಿ ಉಪಸ್ಥಿತರಿದ್ದರು.

Ministry of Micro, Small & Medium Enterprises
IDEMI ISO 9001:2015 AS 9100:2016
Organised by IDEMI Mumbai Ministry of MSME Govt. of India
Government Certificate course on
CYBER SECURITY & ETHICAL HACKING
Course duration : 2 days
Course time-10.30 AM to 5 PM
Course Date-21,22 Sept.2024
venue -IDEMI EXTENSION CENTRE Bangaluru
c/o MSME DEVELOPMENT INSTITUTE ,WEST OF CHORD RD, INDUSTRIAL ESTATE, RAJAJINAGAR, BENGALURU, KARNATAKA - 560010
After successful completion, certificate will be issued
Email id:training@idemi.org http://.idemi.org Ph. (022) 2405 0301/2/3/4
For Registration Scan QR Code
Contents : Cyber crime & terrorism, Type of attacks, Goal of Security & computer Forensic, Social Media, Mobile Hacking, Cyber Hacking, Digital Forensic, Data Recovery.
Fees:4000+18% GST (include lunch & tea)
Fees:2500+18% GST (include lunch & tea)
For Student 50 % Discount
QR code for Registration
Contact-9019870803,9403566219,8007765693,9481236511
Documents required : 2 passport photos, Adhar card xerox, Education proof xerox

ನಗರದಲ್ಲಿ ಇಂದು

2024–25ನೇ ಸಾಲಿನ ಪದವಿಪೂರ್ವ ಕಾರ್ಯಕ್ರಮಗಳಿಗೆ ಚಾಲನೆ ಹಾಗೂ ಎಂಜಿನಿಯರ್ ದಿನ ಆಚರಣೆ: ಮುಖ್ಯ ಅತಿಥಿ: ಕೆ.ಸಿ. ರಾಮಮೂರ್ತಿ, ಗೌರವ ಅತಿಥಿಗಳು: ಸಿ.ಆರ್. ಪಾರ್ಥಸಾರಥಿ, ವದೀಶ್ ಬುಡ್ರಮನೆ, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಬಾಗಲೂರು ಮುಖ್ಯ ರಸ್ತೆ, ಬೆಳಿಗ್ಗೆ 10

30ನೇ ಸಂಸ್ಥಾಪನ ದಿನ: ಮುಖ್ಯ ಅತಿಥಿ: ಥಾವರಚಂದ್ ಗೆಹಲೋತ್, ಗೌರವ ಅತಿಥಿ: ಎಚ್.ಆರ್. ನಾಗೇಂದ್ರ ಗುರೂಜಿ ವಿಶೇಷ ಉಪನ್ಯಾಸ: ಎಂ.ಕೆ. ಶ್ರೀಧರ್, ಆಯೋಜನೆ: ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್), ಸ್ಥಳ: ನ್ಯಾಕ್ ಕ್ಯಾಂಪಸ್, ನಾಗರಬಾವಿ, ಬೆಳಿಗ್ಗೆ 11.30

ಯಕ್ಷಗಾನ ತಾಳಮದ್ದಳೆ: ಯಕ್ಷದುರ್ಗ ಮಹಿಳಾ ಕಲಾ ಬಳಗ, ಆಯೋಜನೆ: 62ನೇ ಬೆಂಗಳೂರು ಗಣೇಶೋತ್ಸವ ಸಮಿತಿ, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಬೆಳಿಗ್ಗೆ 11.30

ಡಿ.ವಿ. ಗುರುಪ್ರಸಾದ್ ಅವರ 'ಬಿ.ಎಸ್ಸಿ ಫೇಲ್, ಐಪಿಎಸ್ ಪಾಸ್!' ಹಾಗೂ ಡಾ.ಸಿ.ಆರ್. ಚಂದ್ರಶೇಖರ್, ಡಾ.ಎನ್. ಸೋಮೇಶ್ವರ ಅವರ 'ಮನಸ್ಸು' ಪುಸ್ತಕ ಬಿಡುಗಡೆ: ಮಾಧವ್ ಪ್ರಸಾದ್ ಎನ್.ಎಸ್., ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಸಪ್ನ ಬುಕ್ ಹೌಸ್, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, # 20, ಲ್ಯಾವೆಲ್ಲೆ ರಸ್ತೆ, ಸಂಜೆ 7

ಗುರುಪ್ರಸಾದ್

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

‘ನಾಡಿನ ಯೋಜಿತ ಅಭಿವೃದ್ಧಿಗೆ ಸರ್ ಎಂ.ವಿಶ್ವೇಶ್ವರಯ್ಯ ಪ್ರಸಿದ್ಧ’

ಪ್ರಜಾವಾಣಿ ವಾರ್ತೆ

ನಗರದಲ್ಲಿ ಭಾನುವಾರ ಎಂ.ಎನ್. ಸತೀಶ್ ಕುಮಾರ್ ಮತ್ತು ದಯಾನಂದ ಮೂರ್ತಿ ಅವರಿಗೆ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು, ಇತಿಹಾಸಕಾರ ಗಜಾನನ ಶರ್ಮ, ಗೌರವ ಕೋಶಾಧ್ಯಕ್ಷ ಬಿ.ಎಂ ಪಟೇಲ್ ಪಾಂಡು, ಗೌರವ ಕಾರ್ಯದರ್ಶಿ ನೇ.ಭ ರಾಮಲಿಂಗಶೆಟ್ಟಿ, ಶಾಸನ ತಜ್ಞ ಎಂ.ಜಿ ನಾಗರಾಜ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಮಂಡ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಂಚಾಲಕಿ ಮೀರಾ ಶಿವಲಿಂಗಯ್ಯ ಮತ್ತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಅಧ್ಯಕ್ಷ ರಮೇಶಚಂದ್ರ ಲಹೋಟಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಅಭಿವೃದ್ಧಿ ಎನ್ನುವುದು ಅರ್ಬುದ ರೋಗವಲ್ಲ. ಯೋಜನೆಯಿಲ್ಲದೇ ಅಭಿವೃದ್ಧಿ ಮಾಡುವುದಲ್ಲ. ನಾಡಿಗೆ ದೂರದೃಷ್ಟಿಯ ಯೋಜಿತ ಅಭಿವೃದ್ಧಿ ತಂದವರು ಸರ್ ಎಂ.ವಿಶ್ವೇಶ್ವರಯ್ಯನವರು’ ಎಂದು ಇತಿಹಾಸಕಾರ ಗಜಾನನ ಶರ್ಮಾ ತಿಳಿಸಿದರು.

82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರದರ್ಶನಗಳ ಅನಾವರಣ, ಸರ್ ಎಂ.ವಿ. ಜನ್ಮ ದಿನಾಚರಣೆ, ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಭಾರತದ ಪುನರ್ ನಿರ್ಮಾಣ ಹೇಗೆ ಎಂಬುದನ್ನು ಅವರು 1921ರಲ್ಲಿಯೇ ಬರೆದಿದ್ದರು. 1933ರಲ್ಲಿ ಪ್ಲಾನ್ಡ್ ಎಕಾನಮಿ ಆಫ್ ಇಂಡಿಯಾ ಎಂಬ ಕೃತಿ ಬರೆದಿದ್ದರು. ಪಂಚವಾರ್ಷಿಕ ಯೋಜನೆ, ದಶವಾರ್ಷಿಕ ಯೋಜನೆಗಳನ್ನು ಅದರಲ್ಲಿ ವಿವರಿಸಿದ್ದರು. ಅದೇ ಮುಂದೆ ಯೋಜನಾ ಆಯೋಗದ(ಪ್ಲಾನಿಂಗ್ ಕಮಿಷನ್) ರಚನೆಗೆ ಕಾರಣವಾಯಿತು ಎಂದು ಹೇಳಿದರು.

ಸಮಯಪಾಲನೆ, ಶ್ರದ್ಧೆ, ಕಾರ್ಯೋತ್ಸಾಹ ಮತ್ತು ದೇಶಪ್ರೇಮಕ್ಕೆ ಹೆಸರಾಗಿದ್ದ ವಿಶ್ವೇಶ್ವರಯ್ಯ ಅವರಿಗೆ ತಾನು ಒಪ್ಪದೇ ಇರುವುದನ್ನು ನೇರವಾಗಿ ಹೇಳುವ ಪ್ರಾಮಾಣಿಕತೆ ಇತ್ತು. 1918ರಲ್ಲಿ ಮಿಲ್ಲರ್ ಸಮಿತಿಯ ವರದಿಯನ್ನು ಅವರು ಒಪ್ಪದೇ ಇದ್ದಾಗ ರಾಜೀನಾಮೆ ನೀಡಬೇಕಾದ ಸನ್ನಿವೇಶ ಬಂದರೂ ತನ್ನ ನಂಬಿಕೆ, ಬದ್ಧತೆಯಿಂದ ಹಿಂದೆ ಸರಿದಿರಲಿಲ್ಲ ಎಂದು ವಿವರಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ರಮೇಶಚಂದ್ರ ಲಹೋಟಿ ಮಾತನಾಡಿ, ‘ಹೊಸ ಬರಹಗಾರರ ಒಂದು ಅತ್ಯುತ್ತಮ ಕವನ ಸಂಕಲನ ಮತ್ತು ಒಂದು ಗದ್ಯ ಕೃತಿಗೆ ತಲಾ ₹ 25 ಸಾವಿರ ಮೊತ್ತದ ಪ್ರಶಸ್ತಿ ನೀಡಲು ಕನ್ನಡ ಸಾಹಿತ್ಯ ಪರಿಷತ್ತಿಗೆ ವರ್ಷಕ್ಕೆ ₹50 ಸಾವಿರದಂತೆ ಐದು ವರ್ಷ ಕೊಡುತ್ತೇನೆ’ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, ‘ಕನ್ನಡದ ನೆಲ, ವಿಜ್ಞಾನ, ತಂತ್ರಜ್ಞಾನಗಳ ತವರೂರಾಗಿದೆ. ಇದಕ್ಕೆ ವಿಶ್ವೇಶ್ವರಯ್ಯ ಅವರ ಅಗಾಧ ಪರಿಶ್ರಮ, ದೂರದೃಷ್ಟಿ, ಸಮಾಜಮುಖಿ ಯೋಜನೆಗಳ ಬುನಾದಿಯೇ ಕಾರಣ. ಬೆಂಗಳೂರಿನ ಜನರು ಒಂದು ಲೋಟ ನೀರು ಕುಡಿಯಬೇಕಿದ್ದರೂ ವಿಶ್ವೇಶ್ವರಯ್ಯ ಅವರನ್ನು ನೆನಪು ಮಾಡಿಕೊಳ್ಳಬೇಕು’ ಎಂದು ಹೇಳಿದರು.

2024ನೇ ಸಾಲಿನ ‘ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿ’ಯನ್ನು ಎಂ.ಎನ್. ಸತೀಶ್ ಕುಮಾರ್ ಅವರಿಗೆ ಹಾಗೂ ‘ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ’ಯನ್ನು ದಯಾನಂದ ಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು.

‘ಜನರೇ ಪೋಷಿಸುತ್ತಿರುವ ಕಲೆ ಯಕ್ಷಗಾನ’

ಪ್ರಜಾವಾಣಿ ವಾರ್ತೆ

ನರಹಳ್ಳಿ ಬಾಲಸುಬ್ರಹ್ಮಣ್ಯ

ಬೆಂಗಳೂರು: ‘ಸರ್ಕಾರದ ನೆರವಿಲ್ಲದೆ ಜನರೇ ಪೋಷಿಸಿ, ಪ್ರೋತ್ಸಾಹಿಸುತ್ತಿರುವ ಕಲಾ ಪ್ರಕಾರ ಯಕ್ಷಗಾನ’ ಎಂದು ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ಇಲ್ಲಿನ ಯಕ್ಷವಾಹಿನಿ ಪ್ರತಿಷ್ಠಾನ ಮತ್ತು ಹೆಗ್ಗೋಡಿನ ಯಕ್ಷ ದುರ್ಗ ಕಲಾ ಬಳಗ ಜಂಟಿಯಾಗಿ ಹಮ್ಮಿಕೊಂಡಿದ್ದ ‘ಮೋದಾಳಿ ಪರಿಣಯ’ ಯಕ್ಷಗಾನ ತಾಳಮದ್ದಳೆ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ತಾಳಮದ್ದಳೆಯು ಪಿ. ಚಂದ್ರಿಕಾ ಅವರ ‘ಮೋದಾಳಿ’ ನಾಟಕ ಆಧರಿಸಿದೆ.

‘ಸಮಗ್ರ ಕರ್ನಾಟಕದ ಕಲೆಯೊಂದಿದ್ದರೆ ಅದು ಯಕ್ಷಗಾನ ಮಾತ್ರ. ಈ ಕಲೆಯು ಉತ್ತರ ಮತ್ತು ದಕ್ಷಿಣ ಕರ್ನಾಟಕಕ್ಕೆ ಸೀಮಿತವಾಗದೆ, ಅಖಂಡ ಕರ್ನಾಟಕದ ಕಲೆಯಾಗಿದೆ. ಭಾಷಾ, ವೇಷ, ಶೈಲಿ, ಕಥನ ಎಲ್ಲ ರೀತಿಯಲ್ಲಿಯೂ ತನ್ನ ದೇಸೀತನವನ್ನು ಉಳಿಸಿಕೊಂಡು, ಆಧುನಿಕ ಪರಿವೇಷದಲ್ಲಿಯೂ ತನ್ನ ಅನನ್ಯತೆಯನ್ನು ಈ ಕಲೆ ಉಳಿಸಿಕೊಂಡಿದೆ. ಇದು ಕೇವಲ ಕಲೆ ಮಾತ್ರವಾಗಿರದೆ, ಸಮುದಾಯ ಶಿಕ್ಷಣಕ್ಕೂ ನೆರವಾಗುವುದರಿಂದ ಸರ್ಕಾರ ಆದ್ಯತೆ ನೀಡಿ ಪ್ರೋತ್ಸಾಹಿಸಬೇಕು’ ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಲೇಖಕಿ ಪಿ.ಚಂದ್ರಿಕಾ ಮಾತನಾಡಿ, ‘ನನ್ನ ನಾಟಕದ ಕಥೆಯ ಧಾರೆ ತಾಳಮದ್ದಳೆಯಲ್ಲಿಯೂ ಹಾಗೇ ಇರುವುದು ಸಂತೋಷವನ್ನುಂಟು ಮಾಡಿದೆ’ ಎಂದರು.

ಕೃತಿ ಆರ್. ಪುರಪ್ಪೇಮನೆ ಅವರ ರಚನೆ, ನಿರ್ದೇಶನ ಹಾಗೂ ಭಾಗವತಿಕೆಯ ‘ಮೋದಾಳಿ ಪರಿಣಯ’ ಯಕ್ಷಗಾನ ತಾಳಮದ್ದಳೆಯ ಮುಮ್ಮೇಳದಲ್ಲಿ ಜಯಶ್ರೀ ಶರ್ಮ, ಪ್ರಶಾಂತಿ ರಾವ್, ಜಯಶ್ರೀ ಸಾಗರ, ನಿರ್ಮಲಾ ಕೃಷ್ಣಮೂರ್ತಿ, ರೂಪಜ ರಾವ್, ಅಕ್ಷತಾ ಹುಂಚದಕಟ್ಟೆ ಪ್ರದರ್ಶನ ನೀಡಿದರು. ಮದ್ದಳೆ-ಚಂಡೆಯಲ್ಲಿ ಕುಶ ಎಂ.ಆರ್., ಶ್ರೀನಿವಾಸ್ ಪುರಪ್ಪೇಮನೆ ಸಾಥ್ ನೀಡಿದರು.

ಆರೋಗ್ಯ ಸೇವೆ ಶ್ಲಾಘನೀಯ ನ್ಯಾ. ಸಂತೋಷ್ ಹೆಗ್ಡೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ‘ಉತ್ತಮ ಆರೋಗ್ಯಕ್ಕಾಗಿ ಹಲವರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವುದು ಮೆಚ್ಚುವಂತಹ ಕಾರ್ಯ’ ಎಂದು ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

ಸೋಂಪುರ ಹೋಬಳಿ ಹನುಮಂತಪುರ ಗ್ರಾಮದ ಹೊರವಲಯದಲ್ಲಿ ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಮೋದಿ ನಗರದ ಸರ್ವಿಸ್ ಫೌಂಡೇಶನ್ ಟ್ರಸ್ಟ್ ನೂತನವಾಗಿ ನಿರ್ಮಿಸಿರುವ ಲಯನ್ಸ್ ಆರೋಗ್ಯ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

’ಡಾ.ಸುನೀಲ್ ಗೌಡ ಮತ್ತು ತಂಡದವರು ಈ ಆಸ್ಪತ್ರೆ ಮೂಲಕ ಪ್ರತಿ ಶನಿವಾರ ಮತ್ತು ಭಾನುವಾರದಂದು ಗ್ರಾಮೀಣ ಜನತೆಗೆ ಉಚಿತ ಆರೋಗ್ಯ ಸೇವೆ ನೀಡಲು ಮುಂದಾಗಿರುವ ಅರ್ಥಪೂರ್ಣವಾಗಿದೆ’ ಎಂದರು.

‘ಲಯನ್ಸ್ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಮಂಜುಳಾ ಸುರೇಶ್ ಕುಟುಂಬ ಜಮೀನು ದಾನ ನೀಡುವ ಮೂಲಕ ಆರೋಗ್ಯ ಸೇವೆಗೆ ಮುನ್ನುಡಿ ಬರೆದಿದ್ದಾರೆ. ಸಾಮಾಜಿಕವಾಗಿ ಇದೊಂದು ಉತ್ತಮ ಬೆಳವಣಿಗೆ’ ಎಂದು ಶ್ಲಾಘಿಸಿದರು.

ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ ಜಿಲ್ಲಾ ಗವರ್ನರ್ ಎನ್. ಮೋಹನ್ ಕುಮಾರ್, ಲಯನ್ಸ್ ಕ್ಲಬ್ ಆಫ್ ಬೆಂಗಳೂರಿನ ಮೋದಿನಗರ ಸೇವಾ ಸಂಸ್ಥೆಯ ಚೇರ್ಮನ್ ಎಚ್.ಎನ್.ಶಿವನಂಜಯ್ಯ, ಪ್ರಾಂತೀಯ ಅಧ್ಯಕ್ಷ ಎಸ್. ಮನೋಜ್ ಕುಮಾರ್, ಕಾರ್ಯದರ್ಶಿ ಸೀತಾರಾಮುಡು ಚಿತ್ತುರಿ, ಖಜಾಂಚಿ ಕೆ.ನರಸಣ್ಣ, ಯೂರಾಲಜಿಸ್ಟ್ ಡಾ.ಸುನೀಲ್ ಗೌಡ, ಮಂಜುಳಾ ಸುರೇಶ್, ಹನುಮಯ್ಯ, ಬಿ.ಕೇಶವ ಮೂರ್ತಿ, ಎಸ್.ಕೃಷ್ಣಮೂರ್ತಿ, ಎಚ್. ಸುರೇಶ್ ಭಾಗವಹಿಸಿದ್ದರು.

ದಾಸರಹಳ್ಳಿ: ರಸ್ತೆ ಗುಂಡಿ ಮುಚ್ಚುವ ಕೆಲಸ ಪರಿಶೀಲನೆ

ದಾಸರಹಳ್ಳಿ ವಲಯದ ಸುಬ್ರತೊ ಮುಖರ್ಜಿ ರಸ್ತೆಯ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ವಲಯ ಆಯುಕ್ತ ಗಿರೀಶ್, ವಲಯ ಜಂಟಿ ಆಯುಕ್ತೆ ಪಲ್ಲವಿ, ಮುಖ್ಯ ಎಂಜಿನಿಯರ್ ರವಿ, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ವಲಯದ ಸುಬ್ರತೊ ಮುಖರ್ಜಿ ರಸ್ತೆಯ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ವಲಯ ಆಯುಕ್ತ ಗಿರೀಶ್ ಪರಿಶೀಲಿಸಿದರು.

ದಾಸರಹಳ್ಳಿ ವಲಯದಲ್ಲಿ ಒಂದು ವಿಧಾನಸಭಾ ಕ್ಷೇತ್ರ ಮಾತ್ರ ಬರಲಿದ್ದು, 11 ವಾರ್ಡ್‌ಗಳಿವೆ. ಪಾಲಿಕೆ ವ್ಯಾಪ್ತಿಯಲ್ಲಿ ಅತ್ಯಂತ ಚಿಕ್ಕದಾದ ವಲಯ ಇದು. ಕೇವಲ 27.82 ಚದರ ಕಿಲೋಮೀಟರ್ ವ್ಯಾಪ್ತಿ ಇರುವ ಈ ವಲಯದಲ್ಲಿ 4,432 ರಸ್ತೆಗಳಿವೆ. ಅವುಗಳ ಒಟ್ಟು ಉದ್ದ 607.53 ಕಿ.ಮೀ. ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ' ಎಂದು ಗಿರೀಶ್ ತಿಳಿಸಿದರು.

ವಲಯದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಸುಮಾರು 20 ಲೋಡ್ ಡಾಂಬರಿನ ಅವಶ್ಯಕತೆಯಿದೆ. ‘ರಸ್ತೆ ಗುಂಡಿ ಗಮನ’ ತಂತ್ರಾಂಶದಲ್ಲಿ ಬರುವ ದೂರುಗಳು ಹಾಗೂ ಎಂಜಿನಿಯರ್‌ಗಳು ಗುರುತಿಸುವ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಆರ್ಟಿರಿಯಲ್ ಹಾಗೂ ಸಬ್ ಆರ್ಟಿರಿಯಲ್ ಸೇರಿ ಒಟ್ಟು 46.62 ಕಿ.ಮೀ ಉದ್ದದ 19 ಪ್ರಮುಖ ರಸ್ತೆಗಳಿವೆ. ಬಹುತೇಕ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ವಿವಿಧ ಇಲಾಖೆಗಳು ರಸ್ತೆ ಕತ್ತರಿಸಿದ ಭಾಗವನ್ನು ಆಯಾ ಇಲಾಖೆಗಳಿಂದ ಮುಚ್ಚಿಸಿ ದುರಸ್ತಿ ಪಡಿಸಲಾಗುತ್ತಿದೆ ಎಂದು ಹೇಳಿದರು.

ವಲಯ ಜಂಟಿ ಆಯುಕ್ತರಾದ ಪಲ್ಲವಿ, ಮುಖ್ಯ ಎಂಜಿನಿಯರ್ ರವಿ, ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

‘ಸಂವಹನದ ಚಲನಶೀಲತೆ ಹೆಚ್ಚಿಸಿದ ಡಿಜಿಟಲ್ ಮಾಧ್ಯಮ’

ಜೈನ್ ವಿಶ್ವವಿದ್ಯಾಲಯದಲ್ಲಿ ನಡೆದ ‘ಸಾಹಿತ್ಯ ಸಮಾಜ, ಜಾಗತಿಕ ಮಾಧ್ಯಮದ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನ’ದಲ್ಲಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ, ಯುನಿವರ್ಸಿಟಿ ಆಫ್ ನಾರ್ಥ್ ಟೆಕ್ಸಾಸ್‌ನ ಭಗವಾನ್ ಆದಿನಾಥ ಪೀಠದ ಮುಖ್ಯಸ್ಥ ಜಾರ್ಜ್ ಆಲ್ಫ್ರೆಡ್ ಜೇಮ್ಸ್, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನುಮ್ ಅವರನ್ನು ಸನ್ಮಾನಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಮಾಧ್ಯಮವು ಭಾರತದ ಸಂವಹನದ ಚಲನಶೀಲತೆ ಹೆಚ್ಚಿಸಿದೆ ಎಂದು ಕೊಪ್ಪಳ ವಿ.ವಿ ಕುಲಪತಿ ಬಿ.ಕೆ. ರವಿ ತಿಳಿಸಿದರು.

ಜೈನ್ ವಿಶ್ವವಿದ್ಯಾಲಯದಲ್ಲಿ ನಡೆದ ಎರಡು ದಿನಗಳ ‘ಸಾಹಿತ್ಯ ಸಮಾಜ, ಜಾಗತಿಕ ಮಾಧ್ಯಮದ ಎರಡನೇ ಅಂತರ ರಾಷ್ಟ್ರೀಯ ಸಮ್ಮೇಳನ’ದಲ್ಲಿ ಮಾತನಾಡಿದರು.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಸಾಹಿತ್ಯ ಹಾಗೂ ಪತ್ರಿಕೋದ್ಯಮವು ತನ್ನದೇ ಆದ ಛಾಪು ಮೂಡಿಸಿವೆ. ಆಡಳಿತ ವರ್ಗಗಳೊಂದಿಗೆ ಜನ ಸಾಮಾನ್ಯರನ್ನು ಜೋಡಿಸುವ ಕೊಂಡಿಯಾಗಿ ಮಾಧ್ಯಮ ಮಾರ್ಪಾಡುಗೊಂಡಿದೆ ಎಂದು ವಿಶ್ಲೇಷಿಸಿದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನುಮ್ ಮಾತನಾಡಿ, ‘ಸಮಾಜದ ಧ್ವನಿಯಾಗಿರುವ ಮಾಧ್ಯಮದಲ್ಲಿ ಪ್ರತಿಯೊಬ್ಬರ ದೃಷ್ಟಿಕೋನ ವಿಭಿನ್ನವಾಗಿರುತ್ತದೆ. ಮಾಧ್ಯಮದ ಮೇಲೆ ಜಾಗತೀಕರಣದ ಪ್ರಭಾವವೂ ಇದೆ’ ಎಂದು ಹೇಳಿದರು.

ಯುನಿವರ್ಸಿಟಿ ಆಫ್ ನಾರ್ಥ್ ಟೆಕ್ಸಾಸ್‌ನ ಭಗವಾನ್ ಆದಿನಾಥ ಪೀಠದ ಮುಖ್ಯಸ್ಥ ಜಾರ್ಜ್ ಆಲ್ಫ್ರೆಡ್ ಜೇಮ್ಸ್ ಮಾತನಾಡಿ, ‘ಪರಿಸರಕ್ಕೆ ಸಂಬಂಧಿಸಿದ ವಿಚಾರ ಬಂದಾಗ ಚಿಪ್ಕೊ ಚಳವಳಿಯನ್ನು ಅಮೆರಿಕದಲ್ಲಿ ಪ್ರಸ್ತಾಪಿಸುತ್ತಾರೆ. ಅದೇ ಸಮಯದಲ್ಲಿ ಭಾರತದಲ್ಲಿ ಚಿಪ್ಕೊ ಚಳವಳಿಯನ್ನು ಜನರು ಮರೆತುಬಿಟ್ಟಿದ್ದಾರೆ. ಇಲ್ಲಿ ಪರಿಸರದ ಕಾಳಜಿ ಕಡಿಮೆಯಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಜೈನ್ ವಿಶ್ವವಿದ್ಯಾಲಯದ ಸಹ ಕುಲಪತಿ ದಿನೇಶ್ ನೀಲಕಂಠ ಮಾತನಾಡಿ, ‘ಸಮಾಜದಲ್ಲಿ ಸಾರ್ವಜನಿಕ ಪ್ರಜ್ಞೆಯನ್ನು ರೂಪಿಸುವಲ್ಲಿ ಸಾಹಿತ್ಯ ಮತ್ತು ಮಾಧ್ಯಮ ಪ್ರಮುಖ ಪಾತ್ರ ವಹಿಸುತ್ತಿವೆ. ನಾವು ನಮ್ಮನ್ನು ಮತ್ತು ಇತರರನ್ನು ಹೇಗೆ ಗ್ರಹಿಸಬೇಕು ಎಂದೂ ಹೇಳಿಕೊಡುತ್ತಿವೆ. ನಮ್ಮ ತಿಳಿವಳಿಕೆಯನ್ನು ವಿಸ್ತರಿಸುತ್ತಿವೆ’ ಎಂದು ಹೇಳಿದರು.

ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ರವೀಂದ್ರ ಭಂಡಾರಿ, ವಿಚಾರ ಸಂಕಿರಣದ ಸಂಘಟಕರಾದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಭಾರ್ಗವಿ ಡಿ. ಹೆಮ್ಮಿಗೆ, ಜೈನ್ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದ ಮುಖ್ಯಸ್ಥೆ ಶ್ರದ್ಧಾ ಕನ್ವರ್, ಭಾಷಾ ವಿಭಾಗದ ಮುಖ್ಯಸ್ಥೆ ರಜನಿ ಜಯರಾಮ್, ಸಂಪನ್ಮೂಲ ವ್ಯಕ್ತಿ ಶ್ಯಾಮಲಿ ಬ್ಯಾನರ್ಜಿ, ವಿವಿಧ ತಜ್ಞರು ಭಾಗವಹಿಸಿದ್ದರು.

ಸಾಗಾಣಿಕೆ ವೆಚ್ಚದ ಹೆಚ್ಚಳದಿಂದ ವಿದೇಶಗಳಿಗೆ ಹೂವು ರವಾನೆಗೆ ರೈತರ ಹಿಂದೇಟು

ಕೆಐಎ ಮೂಲಕ ಹೂವಿನ ರಫ್ತು ಕುಸಿತ

• ಸ್ನೇಹಾ ರಮೇಶ್

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಮೂಲಕ ವಿದೇಶಗಳಿಗೆ ಹೂವುಗಳ ರಫ್ತಿನ ಪ್ರಮಾಣ 2017-18ರಿಂದ 2023-24ರ ಅವಧಿಯಲ್ಲಿ ಶೇಕಡ 20ರಷ್ಟು ಕುಸಿತ ಕಂಡಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಹೂವು ಬೆಳೆಗಾರರಿಗೆ ಇದರಿಂದ ನಷ್ಟವಾಗುತ್ತಿದೆ.

ದೇಶದಲ್ಲಿ ಹೂವು ರಫ್ತಿನಲ್ಲಿ ತೊಡಗಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯದಿಂದ ರಫ್ತಾಗುವ ಹೂವುಗಳ ಪೈಕಿ ಶೇ 95ರಷ್ಟು ಕೆಐಎ ಮೂಲಕವೇ ವಿದೇಶಗಳಿಗೆ ರವಾನೆಯಾಗುತ್ತವೆ. ಉತ್ಪಾದನಾ ವೆಚ್ಚದಲ್ಲಿನ ಹೆಚ್ಚಳವೂ ಸೇರಿದಂತೆ ವಿವಿಧ ಕಾರಣಗಳಿಂದ ಈಗ ಹೂವುಗಳ ರಫ್ತು ಕುಸಿಯುತ್ತಿದೆ.

ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಹೂವುಗಳ ರಫ್ತಿನ ಪ್ರಮಾಣ ಕುಸಿಯಿತು. ಆದರೆ, ಕೋವಿಡ್ ನಂತರದ ದಿನಗಳಲ್ಲಿ ಚೇತರಿಕೆ ಕಾಣಲಿಲ್ಲ. ಈಗಲೂ ಹೂವುಗಳ ರಫ್ತಿನ ವಹಿವಾಟು ಕೋವಿಡ್ ಪೂರ್ವ ಅವಧಿಗೆ ಸರಿಸಮನಾಗಿ ಏರಿಕೆಯಾಗಿಲ್ಲ. ಹೂವುಗಳ ಸಾಗಾಣಿಕೆ ವೆಚ್ಚದಲ್ಲಿನ ಏರಿಕೆ ಮತ್ತು ರಫ್ತು ವಹಿವಾಟಿಗೆ ಕೃಷಿ ಮತ್ತು ಸಂಸ್ಕರಿತ ಆಹಾರ ಪದಾರ್ಥಗಳ ರಫ್ತು ಪ್ರಾಧಿಕಾರದಿಂದ (ಅಪೇಡಾ) ಪ್ರೋತ್ಸಾಹ ಇಲ್ಲದಿರುವುದೇ ಈ ಸಮಸ್ಯೆಗೆ ಕಾರಣ ಎಂದು ದೂರುತ್ತಾರೆ ಹೂವು ಬೆಳೆಗಾರರು.

'ಎರಡು- ಮೂರು ವರ್ಷಗಳ ಅವಧಿಯಲ್ಲಿ ವಿಮಾನ ಸರಕು ಸಾಗಣೆ ವೆಚ್ಚ ದುಪ್ಪಟ್ಟಾಗಿದೆ. ಈ ದರ ನಿಯಂತ್ರಣಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಈ ಕಾರಣದಿಂದ ಹಲವು ಬೆಳೆಗಾರರು ಹೂವುಗಳನ್ನು ರಫ್ತು ಮಾಡುವುದನ್ನೇ ಸ್ಥಗಿತಗೊಳಿಸಿದ್ದಾರೆ' ಎನ್ನುತ್ತಾರೆ ದಕ್ಷಿಣ ಭಾರತ ಹೂವು ಬೆಳೆಗಾರರ ಸಂಘದ ಅಧ್ಯಕ್ಷ ಅರವಿಂದ್ ಟಿ.ಎಂ.

ವಿಮಾನದಲ್ಲಿ ಸರಕು ಸಾಗಣೆ ವೆಚ್ಚದ ಮೇಲೆ ಶೇ 18ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಲಾಗುತ್ತಿದೆ. ಇದು ಹೂವುಗಳ ರಫ್ತಿನ ವೆಚ್ಚ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ಹೇಳುತ್ತಾರೆ ಅವರು.

ಹೂವುಗಳ ರಫ್ತು ಕೈಬಿಟ್ಟ ಹೆಚ್ಚಿನ ಬೆಳೆಗಾರರು, ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದರೆ, 'ಇಲ್ಲಿಯೇ ಹೂವುಗಳನ್ನು ಮಾರುವುದರಿಂದ ಅವರಿಗೆ ಲಾಭ ದೊರೆಯುತ್ತಿಲ್ಲ. ಜಮೀನಿನಲ್ಲಿನ ಮಣ್ಣಿನ ಫಲವತ್ತತೆಯೂ ಕಡಿಮೆಯಾಗುತ್ತಿರುವುದರಿಂದ ವರ್ಷಗಳು ಕಳೆದಂತೆ ಇಳುವರಿಯೂ ಕುಸಿಯುತ್ತಿದೆ. ಹೂವುಗಳನ್ನು ರಫ್ತು ಮಾಡುತ್ತಿದ್ದುದರಿಂದ ಹೆಚ್ಚು ಆದಾಯ ಸಿಗುತ್ತಿತ್ತು. ಇದು ಜೀವನಕ್ಕೆ ಆಧಾರವಾಗಿತ್ತು. ಸ್ಥಳೀಯ ಮಾರುಕಟ್ಟೆಯಲ್ಲಿ ಹೂವು ಮಾರಾಟದಿಂದ ಹೆಚ್ಚಿನ ಆದಾಯ ಸಿಗುತ್ತಿಲ್ಲ. ಇದರಿಂದಾಗಿ ಆರ್ಥಿಕ ಸಂಕಷ್ಟ ಎದುರಾಗಿದೆ' ಎನ್ನುತ್ತಾರೆ 30 ವರ್ಷಗಳಿಂದ ಹೂವು ಬೆಳೆದು ಮಾರುತ್ತಿರುವ ದೊಡ್ಡಬಳ್ಳಾಪುರದ ದೇವಯ್ಯ.

ಸಾಗಾಣಿಕೆ ವೆಚ್ಚದ ಸಹಾಯಧನ ಸ್ಥಗಿತ

ಹೂವುಗಳನ್ನು ರಫ್ತು ಮಾಡುವ ಕೃಷಿಕರಿಗೆ ಹಿಂದೆ ಅಪೇಡಾದಿಂದ ಸಾಗಾಣಿಕೆ ವೆಚ್ಚದಲ್ಲಿ ಸಹಾಯಧನ ನೀಡಲಾಗುತ್ತಿತ್ತು. ಅದನ್ನು ಅಪೇಡಾ ಹಿಂತೆಗೆದುಕೊಂಡಿದೆ. ಈ ಕಾರಣದಿಂದಾಗಿಯೇ ಹೂವುಗಳ ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಎಂದು ದಕ್ಷಿಣ ಭಾರತ ಹೂವು ಬೆಳೆಗಾರರ ಸಂಘದ ಅಧ್ಯಕ್ಷ ಅರವಿಂದ್ ಟಿ.ಎಂ. ದೂರುತ್ತಾರೆ.

ಸಾಗಾಣಿಕೆ ವೆಚ್ಚದಲ್ಲಿನ ಏರಿಕೆ ಕಾರಣದಿಂದಾಗಿಯೇ ಹೂವುಗಳ ರಫ್ತಿನ ಪ್ರಮಾಣ ಕುಸಿದಿದೆ ಎಂದು ಒಪ್ಪಿಕೊಳ್ಳುವ ಅಪೇಡಾದ ಅಧಿಕಾರಿಗಳು, 'ಸಾಗಾಣಿಕೆ ವೆಚ್ಚದ ಸಹಾಯಧನ ಯೋಜನೆಯನ್ನು ಕೇಂದ್ರ ಸರ್ಕಾರ ಕೈಬಿಟ್ಟಿದೆ. ಈ ಕುರಿತು ನಾಗರಿಕ ವಿಮಾನಯಾನ ಸಚಿವಾಲಯದ ಜತೆ ಚರ್ಚೆಗೆ ಪ್ರಯತ್ನಿಸಲಾಗುತ್ತಿದೆ. ಬೇರೆ ಯೋಜನೆಗಳ ಅಡಿಯಲ್ಲಿ ಅನುಕೂಲ ಪಡೆಯಲು ರೈತರು ಪ್ರಯತ್ನಿಸಬೇಕು' ಎಂದು ಸಲಹೆ ನೀಡುತ್ತಾರೆ.

'ವಿಮಾನ ಸಾಗಾಣಿಕೆ ವೆಚ್ಚದ ಸಹಾಯಧನ ಸ್ಥಗಿತಗೊಳಿಸುವ ನಿರ್ಧಾರ ಕೈಗೊಂಡಿರುವುದು ಕೇಂದ್ರ ಸರ್ಕಾರ. ಆದರೆ, ಅದೇ ಮಾದರಿಯಲ್ಲಿ ರೈತರಿಗೆ ತಮ್ಮ ಉತ್ಪನ್ನಗಳ ಸಾಗಾಣಿಕೆ ಮತ್ತು ಮಾರಾಟಕ್ಕೆ ಸಹಾಯಧನ ನೀಡುವ ಬೇರೊಂದು ಯೋಜನೆ ಇದೆ. ರೈತರು ಆ ಯೋಜನೆಯ ಅನುಕೂಲ ಪಡೆಯಬೇಕು' ಎಂದು ಅಪೇಡಾದ ಹಿರಿಯ ಅಧಿಕಾರಿಯೊಬ್ಬರು ಸಲಹೆ ನೀಡಿದರು.

ಸುದ್ದಿ 2 ನಿಮಿಷ

'ಮಹಿಳಾ ಪ್ರಾತಿನಿಧ್ಯ, ಮೀಸಲಾತಿ ಹೆಚ್ಚಾಗಬೇಕು'

ಬೆಂಗಳೂರು: 'ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಮೀಸಲಾತಿ ಎರಡೂ ಹೆಚ್ಚಾಗಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಉಸ್ತುವಾರಿ ಶಿಲ್ಪಿ ಅರೋರ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ಭಾನುವಾರ ಚಾಲನೆ ನೀಡಿದ ಅವರು, 'ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ' ಎಂದರು.

'ಮಹಿಳೆಯರ ಹಕ್ಕುಗಳಿಗಾಗಿ ಮಹಿಳಾ ಕಾಂಗ್ರೆಸ್ ಹೋರಾಡುತ್ತಿದೆ. 'ನಾರಿ ನ್ಯಾಯ' ಹೆಸರಿನಲ್ಲಿ ಮಹಿಳೆಯರ ಸಂಘಟನೆ ಮಾಡಲಾಗಿದೆ. ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವುದು ನಮ್ಮ ಗುರಿ' ಎಂದರು.

ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಅವರು, 'ನಿರ್ಣಾಯಕ ಸ್ಥಾನದಲ್ಲಿರುವ ಮಹಿಳೆಗೆ ಇನ್ನೂ ಶೇ 50 ರಷ್ಟು ಮೀಸಲಾತಿ ಸೌಲಭ್ಯ ಸಿಕ್ಕಿಲ್ಲ. 30 ವರ್ಷಗಳ ಹೋರಾಟಕ್ಕೆ ಇನ್ನೂ ಫಲ ಸಿಕ್ಕಿಲ್ಲ' ಎಂದರು.

ಮಾಜಿ ಸಚಿವೆ ಮೋಟಮ್ಮ, 'ನರೇಂದ್ರ ಮೋದಿ ಅವರು ಕೇವಲ ಮಾತಿನಲ್ಲಿ ಬೇಟಿ ಬಚಾವೊ ಬೇಟಿ ಪಡಾವೊ ಎನ್ನುತ್ತಾರೆ. ಹೆಣ್ಣು ಮಕ್ಕಳ ರಕ್ಷಣೆಯನ್ನು ಬಿಜೆಪಿ ಮಾಡಿಲ್ಲ' ಎಂದರು.

ಮಹಿಳಾ ಕಾಂಗ್ರೆಸ್ ಉಸ್ತುವಾರಿ ನಾರಾಯಣಸ್ವಾಮಿ, 'ಹೆಚ್ಚು ಹೆಚ್ಚು ಮಹಿಳಾ ಸದಸ್ಯರನ್ನು ನೋಂದಣಿ ಮಾಡಿಸಿದರೆ ತಳಮಟ್ಟದಲ್ಲಿ ಪಕ್ಷದ ಬಲ ಹೆಚ್ಚುತ್ತದೆ. ಅದರ ಮೂಲಕ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಕೈಯನ್ನು ಬಲಪಡಿಸಬೇಕು' ಎಂದು ಪಕ್ಷದ ಕಾರ್ಯಕರ್ತೆಯರಿಗೆ ಮನವಿ ಮಾಡಿದರು.

ಮಾಜಿ ಮೇಯರ್ ಪದ್ಮಾವತಿ, ಕುಸುಮ ಹನುಮಂತರಾಯಪ್ಪ, ಕೆಪಿಸಿಸಿ ಉಪಾಧ್ಯಕ್ಷೆ ಅಕ್ಕೈ ಪದ್ಮಶಾಲಿ, ಕಾರ್ಯದರ್ಶಿ ರುಕ್ಮಿಣಿ ಸಾಹುಕಾರ್ ಇದ್ದರು.

ಮಾನವ ಸರಪಳಿಗಾಗಿ ಗೂಡ್ಸ್ ವಾಹನದಲ್ಲಿ ಮಕ್ಕಳ ಸಾಗಣೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ತಾಲ್ಲೂಕಿನ ವಿವಿಧೆಡೆ ಮಾನವ ಸರಪಳಿ ರಚಿಸಲು ವಿದ್ಯಾರ್ಥಿಗಳನ್ನು ಗೂಡ್ಸ್ ವಾಹನಗಳಲ್ಲಿ ಸಾಗಿಸಲಾಯಿತು.

'ತಾಲ್ಲೂಕಿನ ಬಳ್ಳೇಕೆರೆ, ಹುಲಿಕೆರೆ ಇತರ ಶಾಲೆಗಳ ವಿದ್ಯಾರ್ಥಿಗಳನ್ನು ತರಕಾರಿ, ಇತರ ಸರಕು ಸರಂಜಾಮು ಸಾಗಿಸುವ ವಾಹನಗಳಲ್ಲಿ ಕರೆತರಲಾಗಿತ್ತು. 10 ಮಂದಿ ನಿಲ್ಲಬಹುದಾದ ಗೂಡ್ಸ್ ವಾಹನದಲ್ಲಿ ದುಪ್ಪಟ್ಟು ವಿದ್ಯಾರ್ಥಿಗಳನ್ನು ತುಂಬಲಾಗಿತ್ತು. ಬಳ್ಳೇಕೆರೆಯಿಂದ ವಿದ್ಯಾರ್ಥಿಗಳನ್ನು ಕರೆತಂದ ವಾಹನದಲ್ಲಿ ಮಿಸುಕಾಡಲೂ ಜಾಗ ಇರಲಿಲ್ಲ. ಇಂತಹ ವಾಹನಗಳಲ್ಲಿ ಬಾಲಕಿಯರು 15ರಿಂದ 20 ಕಿ.ಮೀ. ದೂರದಿಂದ ನಿಂತುಕೊಂಡೇ ಬಂದಿದ್ದರು' ಎಂದು ಸ್ಥಳೀಯರು ದೂರಿದರು.

ಗಣೇಶೋತ್ಸವ: ಮೂರ್ತಿಗಳ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಗಳ ಶೋಭಾಯಾತ್ರೆ ಮತ್ತು ವಿಸರ್ಜನೆ ಭಾನುವಾರ ಅಧಿಕ ಸಂಖ್ಯೆಯಲ್ಲಿ ನಡೆಯಿತು.

ಗಣೇಶ ಹಬ್ಬ ಆರಂಭವಾದಲ್ಲಿಂದ ಇಲ್ಲಿವರೆಗೆ ಪುಲಕೇಶಿ ನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಹಲಸೂರು ಕರೆ ಕಲ್ಯಾಣಿಯಲ್ಲಿ ಸುಮಾರು 40 ಸಾವಿರ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡಲಾಗಿದ್ದು, 9ನೇ ದಿನ ಬೃಹತ್ ವಿಗ್ರಹಗಳ ಶೋಭಾಯಾತ್ರೆ ಮತ್ತು ವಿಸರ್ಜನೆ ನಡೆದಿದೆ.

ದಂಡು ಪ್ರದೇಶ ಸಾರ್ವಜನಿಕ ಗಣೇಶೋತ್ಸವ ಸಮಿತಿ ಆಯೋಜಿಸಿದ್ದ 251 ಬೃಹತ್ ಗಣೇಶ ಮೂರ್ತಿಗಳ ಸಾಮೂಹಿಕ ಮೆರವಣಿಗೆ ಮತ್ತು ವಿಸರ್ಜನಾ ಕಾರ್ಯಕ್ರಮ ನಡೆಯಿತು. ವಿವಿಧ ಸಂಘಟನೆಗಳು ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಗಳನ್ನು ತಿಮ್ಮಯ್ಯ ರಸ್ತೆಯ ಮೂಲಕ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಕೆನ್ಸಿಂಗ್‌ಟನ್-ಮರ್ಫಿ ರಸ್ತೆ ಜಂಕ್ಷನ್ ಕಡೆಯಿಂದ ಎಂ.ಇ.ಜಿ ಮೂಲಕ-ಹಲಸೂರು ಕೆರೆ ಕಡೆಗೆ ಕೆನ್ಸಿಂಗ್‌ಟನ್ ರಸ್ತೆಯಲ್ಲಿ ದ್ವಿಮುಖ ಸಂಚಾರ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು. ಎಂಇಜಿ ಕಡೆಯಿಂದ ಕೆನ್ಸಿಂಗ್‌ಟನ್-ಮರ್ಫಿ ರಸ್ತೆ ಜಂಕ್ಷನ್ ಕಡೆಗೆ ಏಕಮುಖ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು. ಎಲ್ಲ ವಿಗ್ರಹಗಳನ್ನು ವ್ಯವಸ್ಥಿತವಾಗಿ ವಿಸರ್ಜನೆ ಮಾಡಲಾಯಿತು ಎಂದು ಬಿಬಿಎಂಪಿ ಪೂರ್ವ ವಲಯದ ಮುಖ್ಯ ಎಂಜಿನಿಯರ್ ಸುಗುಣಾ ತಿಳಿಸಿದರು.

ಮಹದೇವಪುರ ವಲಯದಲ್ಲಿ 14 ಕಲ್ಯಾಣಿಗಳು, ಯಲಹಂಕದ 10 ಕಲ್ಯಾಣಿಗಳು, ಆರ್.ಆರ್. ನಗರದ ಏಳು, ಬೊಮ್ಮನಹಳ್ಳಿಯಲ್ಲಿ ಐದು, ದಕ್ಷಿಣದಲ್ಲಿ ಎರಡು, ಪಶ್ಚಿಮ ಹಾಗೂ ದಾಸರಹಳ್ಳಿ ವಲಯದ ತಲಾ ಒಂದು ಕಲ್ಯಾಣಿಗಳಲ್ಲಿ ಕೂಡ ಭಾನುವಾರ ಭಾರಿ ಸಂಖ್ಯೆಯಲ್ಲಿ ಗಣಪತಿ ಮೂರ್ತಿ ವಿಸರ್ಜನೆ ನಡೆದಿದೆ.

(1) ಸಾರ್ವಜನಿಕ ಗಣೇಶೋತ್ಸವ ಸಮಿತಿ (ದಂಡು ಪ್ರದೇಶ) ಆಯೋಜಿಸಿದ್ದ 251 ಬೃಹತ್ ಗಣೇಶ ಮೂರ್ತಿಗಳ ವಿಸರ್ಜನಾ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳು ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಗಳ ಮೆರವಣಿಗೆಯು ತಿಮ್ಮಯ್ಯ ರಸ್ತೆಯ ಮೂಲಕ ಸಾಗಿತು —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

(2) ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಶಾಸಕ ಎಸ್. ಮುನಿರಾಜು ಅವರು ಬಿಜೆಪಿ ಮುಖಂಡ ಚಿಕ್ಕಸಂದ್ರ ಮೋಹನ್ ಕುಮಾರ್ ಜಿ. ಅವರಿಗೆ ಲಡ್ಡು ಹಸ್ತಾಂತರಿಸಿದರು

ಕಲಾತಂಡಗಳ ಮೆರುಗು

ಪೀಣ್ಯ ದಾಸರಹಳ್ಳಿ: ಇಲ್ಲಿನ ಬಾಗಲಗುಂಟೆ ಎಂಇಐ ಆಟದ ಮೈದಾನದಲ್ಲಿ ದಾಸರಹಳ್ಳಿಯ ಸಾಮೂಹಿಕ ಗಣೇಶೋತ್ಸವ ಸಮಿತಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಭಾನುವಾರ ಸಂಜೆ ಸಂಭ್ರಮದ ಮೆರವಣಿಗೆಯೊಂದಿಗೆ ಚೊಕ್ಕಸಂದ್ರ ಕೆರೆ ಸಮೀಪವಿರುವ ಕಲ್ಯಾಣಿಯಲ್ಲಿ ವಿಸರ್ಜಿಸಲಾಯಿತು.

ಮೆರವಣಿಗೆಯಲ್ಲಿ 75ಕ್ಕೂ ಹೆಚ್ಚು ಗಣೇಶ ಮೂರ್ತಿಗಳು ಇದ್ದವು. ಪಂಜಾಬ್, ಗುಜರಾತ್, ಮುಂಬೈ, ಕೇರಳ ಕರ್ನಾಟಕ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಯುವಕರು, ಮಹಿಳೆಯರು, ಭಕ್ತಾದಿಗಳು ಕಲಾತಂಡಗಳ ವಾದ್ಯ ಸಂಗೀತಕ್ಕೆ ಹೆಜ್ಜೆ ಹಾಕಿದರು.

ಎಂ.ಇ.ಐ ಆಟದ ಮೈದಾನದಿಂದ ಆರಂಭವಾದ ಮೆರವಣಿಗೆ ಬಾಗಲಗುಂಟೆ ಮಾರಮ್ಮನ ದೇವಸ್ಥಾನ, ಹೆಸರಘಟ್ಟ ಮುಖ್ಯ ರಸ್ತೆ, ಮಲ್ಲಸಂದ್ರದ ಪೈಪ್ ಲೈನ್, ಸೆಲೆಕ್ಷನ್‌ನಿಂದ ದಾಸರಹಳ್ಳಿ ರಾಷ್ಟ್ರೀಯ ಹೆದ್ದಾರಿ ಮೂಲಕ ಚೊಕ್ಕಸಂದ್ರದತ್ತ ಸಾಗಿತು.ಇದಕ್ಕೂ ಮುನ್ನ ನಡೆದ ಕಾರ್ಯ-ಕ್ರಮದಲ್ಲಿ ಗಣೇಶನ ಪ್ರಸಾದ 25 ಕೆ.ಜಿ. ಲಡ್ಡುವನ್ನು ಬಿಜೆಪಿ ಮುಖಂಡ ಚಿಕ್ಕಸಂದ್ರದ ಮೋಹನ್ ಕುಮಾರ್ ಜಿ. ಅವರು ₹4.50 ಲಕ್ಷಕ್ಕೆ ಹರಾಜಿನಲ್ಲಿ ಖರೀದಿಸಿದರು. ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿ ವತಿಯಿಂದ ಬಾಗಲಗುಂಟೆ ಎಂಇಐ ಆಟದ ಮೈದಾನದಲ್ಲಿ 14 ಅಡಿ ಎತ್ತರದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು.

ಹೆದ್ದಾರಿಯಲ್ಲಿ ವಾಹನ ದಟ್ಟಣೆ ಸವಾರರ ಪರದಾಟ

ತುಮಕೂರು: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಣೆ ಪ್ರಯುಕ್ತ ಭಾನುವಾರ ರಾಷ್ಟ್ರೀಯ ಹೆದ್ದಾರಿ 48ರ ಒಂದು ಬದಿಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ಇದರಿಂದ ಹೆದ್ದಾರಿಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

ಮುಂಜಾಗ್ರತಾ ಕ್ರಮವಾಗಿ ಹೆದ್ದಾರಿಯ ಎಡ ಬದಿಯಲ್ಲಿ ವಾಹನ ಸಂಚಾರ ನಿಷೇಧಿಸಲಾಗಿತ್ತು. ಬೆಂಗಳೂರಿನಿಂದ ಚಿತ್ರದುರ್ಗದ ಕಡೆಗೆ ಹೋಗುವ ಹಾಗೂ ಚಿತ್ರದುರ್ಗದಿಂದ ಬೆಂಗಳೂರಿನತ್ತ ತೆರಳುವ ವಾಹನಗಳು ಒಂದೇ ರಸ್ತೆಯಲ್ಲಿ (ಹೆದ್ದಾರಿಯ ಬಲ ಭಾಗದಲ್ಲಿ) ಸಂಚರಿಸಿದ ಕಾರಣ ವಾಹನಗಳ ಓಡಾಟಕ್ಕೆ ಸಮಸ್ಯೆಯಾಯಿತು.

ತಾಲ್ಲೂಕಿನ ಸೀಬಿ ಗ್ರಾಮದಿಂದ ಸೋರೆಕುಂಟೆ ಕ್ರಾಸ್‌ವರೆಗೆ ಸುಮಾರು 5 ಕಿಲೊ ಮೀಟರ್ ವ್ಯಾಪ್ತಿಯಲ್ಲಿ ನೂರಾರು ವಾಹನಗಳು ನಿಂತಿದ್ದವು. ನೆಲಹಾಳ್, ಸೀಬಿ ಬಳಿ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಯಲ್ಲಿ ನೂರಾರು ವಾಹನ ಗಂಟೆ ಗಟ್ಟಲೆ ನಿಂತಲ್ಲಿಯೇ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಎರಡೂ ಬದಿಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ನೀಡಿದ ನಂತರ ವಾಹನ ದಟ್ಟಣೆ ಕೊಂಚ ಕಡಿಮೆಯಾಯಿತು.

ಬೆಂಗಳೂರಿನಿಂದ ಬೇರೆಡೆ ತೆರಳುವವರು, ಬೇರೆ ಬೇರೆ ಜಿಲ್ಲೆಗಳಿಂದ ಬೆಂಗಳೂರಿಗೆ ಹೋಗುವವರು ಸಂಕಷ್ಟ ಅನುಭವಿಸಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

'ರಸ್ತೆ ಗುಂಡಿ ಮುಚ್ಚಿ'

ಹೆಮ್ಮಿಗೆಪುರದ ಮುಖ್ಯರಸ್ತೆಯಿಂದ ನೈಸ್ ರಸ್ತೆ ಸಂಪರ್ಕಿಸುವ ರಸ್ತೆಯು ಗುಂಡಿಗಳಿಂದ ಕೂಡಿದ್ದು, ಇಲ್ಲಿ ಸಂಚರಿಸುವುದು ತುಂಬಾ ಕಷ್ಟ. ವಾಹನಗಳು ಗುಂಡಿ ತಪ್ಪಿಸಲು ಬ್ರೇಕ್ ಹಾಕುವುದರಿಂದ ಹಿಂಬದಿ ಸವಾರರು ವಾಹನಕ್ಕೆ ಗುದ್ದಿ, ಅಪಘಾತಗಳು ಸಂಭವಿಸಿದ ಉದಾಹರಣೆಗಳಿವೆ. ಈ ಮಾರ್ಗದಲ್ಲಿ ವಾಹನ ಚಾಲನೆ ಮಾಡುವುದು ದುಸ್ತರವಾಗಿದೆ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಓಡಾಡುವುದು ಕಷ್ಟ. ಮಳೆ ಬಂದರೆ ನೀರು ತುಂಬಿಕೊಂಡ ಗುಂಡಿಗಳನ್ನು ಗುರುತಿಸುವುದೇ ಕಷ್ಟ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಚನ್ನಿಗಪ್ಪ, ಹೆಮ್ಮಿಗೆಪುರ

'ಪ್ರತಿಮೆ ಬಳಿ ಕಸದ ರಾಶಿ'

ರಾಜಾಜಿನಗರದ ರಾಮಮಂದಿರ ರಸ್ತೆಯಲ್ಲಿರುವ ರಾಜ್‌ಕುಮಾರ್ ಪ್ರತಿಮೆ ಬಳಿ ಕಸದ ರಾಶಿ ಹಾಕಲಾಗಿದೆ. ಪ್ರತಿಮೆ ಇರಿಸಲಾಗಿರುವ ಕಲ್ಲಿನ ಕಟ್ಟೆಯ ಮೇಲೆ ಭುವನೇಶ್ವರಿಯನ್ನು ಚಿತ್ರಿಸಲಾಗಿದೆ. ಇದರ ಬುಡದಲ್ಲಿಯೇ ಕಸವನ್ನು ಎಸೆಯಲಾಗುತ್ತಿದ್ದು, ಇದರ ವಿಲೇವಾರಿ ನಡೆಯುತ್ತಿಲ್ಲ. ಕಸ ಕೊಳೆತು ನಾರುತಿದ್ದು, ಹಸಿ ಕಸವನ್ನೂ ಅಲ್ಲಿಯೇ ಎಸೆಯಲಾಗುತ್ತಿದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಪ್ರತಿಮೆ ಬಳಿಯ ಕಸದ ರಾಶಿಯನ್ನು ತೆರವುಗೊಳಿಸಿ, ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ವಿಜಯ್ ಕುಮಾರ್
ಕನ್ನಡ ಪರ ಹೋರಾಟಗಾರ

'ಶಾಲಾ ಕಾಂಪೌಂಡ್ ಸುತ್ತ ಕಸದ ರಾಶಿ'

ಬಸವನಗುಡಿ ವಿಧಾನಸಭಾ ಕ್ಷೇತ್ರದ ಹನುಮಂತನಗರದಲ್ಲಿರುವ ಭಾರತ ಮಾತಾ ಶಾಲೆಯ ಕಾಂಪೌಂಡ್‌ನ ಸುತ್ತ ವಿವಿಧೆಡೆ ಹಲವು ದಿನಗಳಿಂದ ಕಸದ ರಾಶಿ ಕೊಳೆತು ನಾರುತ್ತಿದೆ. ಇದರಿಂದ ಅಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ಈ ಕಾಂಪೌಂಡ್‌ಗೆ ಹೊಂದಿಕೊಂಡಿರುವ ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಗಾಳಿ ಬೀಸಿದಾಗ, ಈ ಕಸ ರಸ್ತೆಗಳಿಗೂ ಹರಡಿಕೊಳ್ಳುತ್ತದೆ. ಮಳೆ ಬಂದಲ್ಲಿ ಇನ್ನಷ್ಟು ಸಮಸ್ಯೆಯಾಗುತ್ತದೆ. ಕಸದಿಂದಾಗಿ ಶಾಲಾ ವಾತಾವರಣವೂ ಹದಗೆಡುತ್ತಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕೈಗೊಳ್ಳಬೇಕು.

ಕೆ.ಎಸ್. ನಾಗರಾಜ್
ಹನುಮಂತನಗರ

'ರಸ್ತೆ ಗುಂಡಿಯಿಂದ ಸಂಚಾರ ದುಸ್ತರ'

ಬನಶಂಕರಿ ಟಿಟಿಎಂಸಿ ನಿಲ್ದಾಣದ ಸುತ್ತಮುತ್ತಲಿನ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿವೆ. ಅಲ್ಲಲ್ಲಿ ಡಾಂಬರ್ ಕಿತ್ತು ಹೋಗಿದ್ದು, ವಾಹನ ಸವಾರರು ಸಂಚರಿಸುವುದು ಕಷ್ಟವಾಗಿದೆ. ಅಲ್ಲಲ್ಲಿ ಮಾರುದ್ದದ ಗುಂಡಿಗಳು ಕಂಡು ಬರುತ್ತವೆ. ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಬೈಕ್ ಸವಾರರು ಈ ರಸ್ತೆಯಲ್ಲಿ ಹೋಗುವಾಗ ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಾದ ದುಸ್ಥಿತಿ ಇದೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಹೀಗೆ ಬಿಟ್ಟರೆ ಭಾರಿ ಅವಘಡ ಸಂಭವಿಸುವ ಸಾಧ್ಯತೆಯಿದೆ. ಆದ್ದರಿಂದ ಆದಷ್ಟು ಬೇಗ ರಸ್ತೆ ದುರಸ್ತಿ ಮಾಡಿಸಬೇಕು.

ಧ್ರುವ, ಸ್ಥಳೀಯ ನಿವಾಸಿ

'ಚನ್ನಾರೆಡ್ಡಿ ಪಾಟೀಲ ಬಂಧನ ಏಕಿಲ್ಲ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ನಿಂದನೆ ಆರೋಪದಡಿ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಆದರೆ, ಇದೇ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ ಅವರನ್ನು ತಿಂಗಳಾದರೂ ಏಕೆ ಬಂಧಿಸಿಲ್ಲ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಭಾನುವಾರ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸುತ್ತಿದೆ. ಚನ್ನಾರೆಡ್ಡಿ ಪಾಟೀಲ ವಿರುದ್ಧ ಒಂದು ತಿಂಗಳ ಜಾತಿನಿಂದನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಅವರು ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಸರ್ಕಾರಿ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದಾರೆ. ಇದು ನಿಮ್ಮ ಪ್ರಜಾಪ್ರಭುತ್ವವೇ? ಇದು ನಿಮ್ಮ ಜಾತ್ಯತೀತತೆಯೆ? ಇದು ನಿಮ್ಮ ಸಂವಿಧಾನವೇ ಸಿದ್ದರಾಮಯ್ಯನವರೆ' ಎಂದು ಕೇಳಿದರು.

ಎನ್. ರವಿಕುಮಾರ್

'ಪ್ರಜಾಪ್ರಭುತ್ವ ದಿನದ ಹೆಸರಿನಲ್ಲಿ ಬೀದರ್‌ನಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ರಚಿಸಿದ್ದೀರಿ. ಕರ್ನಾಟಕದಲ್ಲಿ ಸಂವಿಧಾನ ಜಾರಿ ಮಾಡುತ್ತಿದ್ದೀರಾ? ಪ್ರಜಾಪ್ರಭುತ್ವ ಇದೆಯೆ? ಚನ್ನಾರೆಡ್ಡಿ ಪಾಟೀಲರನ್ನು ಬಂಧಿಸದಿರಲು ಕಾರಣವೇನು' ಎಂದು ಪ್ರಶ್ನಿಸಿದರು.

'ನಾಗಮಂಗಲದಲ್ಲಿ ಗಣಪತಿ ಮೂರ್ತಿ ವಿಸರ್ಜನೆಗೆ ಮೆರವಣಿಗೆಯಲ್ಲಿ ಹೊರಟಿದ್ದ ಹಿಂದೂ ಧರ್ಮೀಯರ ಮೇಲೆ ಕಲ್ಲು ತೂರಾಟ, ಗಣೇಶನ ವಿಗ್ರಹದ ಮೇಲೆ ಚಪ್ಪಲಿ ಎಸೆಯಲಾಗಿದೆ. ಹಿಂದೂಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆದರೆ, ಕಲ್ಲು ತೂರಿದವರು, ಅಂಗಡಿಗಳಿಗೆ ಬೆಂಕಿ ಹಚ್ಚಿದವರನ್ನು ರಕ್ಷಿಸಲಾಗುತ್ತಿದೆ. ಹಿಂದೂಗಳಿಗೆ ಒಂದು ನೀತಿ, ಮುಸ್ಲಿಮರಿಗೆ ಒಂದು ನೀತಿ ಅನುಸರಿಸಲಾಗುತ್ತಿದೆ' ಎಂದು ಟೀಕಿಸಿದರು.

'ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಇದ್ದ ವೇದಿಕೆಗೆ ಯುವಕನೊಬ್ಬ ನುಗ್ಗಿದ್ದಾನೆ. ವಿಧಾನಸೌಧದಲ್ಲೇ ಭದ್ರತಾ ವೈಫಲ್ಯವಾಗಿದೆ. ಗುಪ್ತಚರ ಇಲಾಖೆ, ಪೊಲೀಸರು ಏನು ಮಾಡುತ್ತಿದ್ದಾರೆ' ಎಂದು ಕೇಳಿದರು.

ಶಾಸಕ ಸ್ಥಾನದಿಂದ ವಜಾಗೊಳಿಸಿ: ಧರ್ಮಸೇನ

ಬೆಂಗಳೂರು: 'ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ತಕ್ಷಣ ವಜಾಗೊಳಿಸಬೇಕು. ಅವರನ್ನು ಈ ರಾಜ್ಯದಿಂದ ಗಡಿಪಾರು ಮಾಡಬೇಕು' ಎಂದ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್. ಧರ್ಮಸೇನ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಾತಿ ನಿಂದನೆ ಮಾಡಿದ, ಲಂಚಕ್ಕೆ ಬೇಡಿಕೆ ಇಟ್ಟ ಇಂಥವರು ನಮ್ಮ ಸಮಾಜಕ್ಕೆ ಬೇಕಿಲ್ಲ. ನೊಂದು ಬೆಂದಿರುವ ಜನರನ್ನು ಜಾತಿ ಹೆಸರಲ್ಲಿ ನಿಂದಿಸುವುದು ಎಷ್ಟು ಸರಿ? ಇಂತಹವರಿಗೆ ತಕ್ಕ ಪಾಠ ಕಲಿಸಬೇಕು' ಎಂದರು.

'ಮುನಿರತ್ನ ವಿರುದ್ಧ ಕೆಪಿಸಿಸಿ ಎಸ್‌ಸಿ ವಿಭಾಗದಿಂದ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಜೊತೆಗೆ, ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಮುನಿರತ್ನ ವಿರುದ್ಧ ದೂರು ದಾಖಲಿಸುತ್ತೇವೆ' ಎಂದರು.

ಸನ್ಮಾನ ವಿಜಯ ವಾಣಿಜ್ಯ ಅಲುಮಿನಿ ಸಂಘ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹಳೆ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಪ್ರೊ.ಎಂ.ಕೆ.ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಪರಮೇಶ್ವರನ್, ಉಪಾಧ್ಯಕ್ಷರಾದ ಪ್ರವೀಣ್ ರಾಂಕ, ರಾಕೇಶ್ ಅಗರ್ವಾಲ್, ಶಾಂತೇರಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೇಲ್ಸೇತುವೆ ಕಾಮಗಾರಿ ಅವಘಡ ಗಾಯಗೊಂಡಿದ್ದ ಎಎಸ್‌ಐ ಸಾವು

ಹುಬ್ಬಳ್ಳಿ: ಇಲ್ಲಿನ ಹಳೇ ಕೋರ್ಟ್ ವೃತ್ತದ ಬಳಿ ನಡೆಯುತ್ತಿರುವ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವೇಳೆ ತಲೆಯ ಮೇಲೆ ಕಬ್ಬಿಣದ ರಾಡ್ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಉಪನಗರ ಠಾಣೆಯ ಎಎಸ್‌ಐ ನಾಬಿರಾಜ ದಯಣ್ಣವರ (59) ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಗಿನ ಜಾವ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಸತ್ತೂರಿನ ರಾಜಾಜಿನಗರ ನಿವಾಸಿಯಾದ ಎಎಸ್‌ಐ ನಾಬಿರಾಜ ಅವರು ಸೆ.10ರಂದು ಕರ್ತವ್ಯಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ತಲೆಯ ಮೇಲೆ ಕಬ್ಬಿಣದ ರಾಡ್ ಬಿದ್ದಿತ್ತು. ತಕ್ಷಣ ನಗರದ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಅಂದು ರಾತ್ರಿಯೇ ಕೆಎಂಸಿ–ಐಆರ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ನಾಬಿರಾಜ ಅವರ ಕಣ್ಣುಗಳನ್ನು ದಾನ ಮಾಡಲಾಗಿದೆ. ಅವಘಡಕ್ಕೆ ಸಂಬಂಧಿಸಿ ಮೇಲ್ಸೇತುವೆ ಗುತ್ತಿಗೆ ಪಡೆದ ಜಂಡು ಕಂಪನಿಯ ಮೂವರು ವ್ಯವಸ್ಥಾಪಕರು ಸೇರಿ 19 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ದೆಹಲಿ: ನಕಲಿ ವೀಸಾ ಗ್ಯಾಂಗ್ ಸೆರೆ

ನವದೆಹಲಿ (ಪಿಟಿಐ): ದೆಹಲಿ ಪೊಲೀಸರು ಭಾನುವಾರ ಏಳು ಜನರನ್ನು ಬಂಧಿಸಿದ್ದಾರೆ. ಪಶ್ಚಿಮ ಬಂಗಾಳದ ತಿಲಕ್ ನಗರ ಪ್ರದೇಶದಲ್ಲಿ ಕಾರ್ಯಚರಣೆ ನಡೆಸುತ್ತಿರುವ ನಕಲಿ ವೀಸಾ ಗ್ಯಾಂಗ್ ಅನ್ನು ಭೇದಿಸಿರುವುದಾಗಿ ತಿಳಿಸಿದೆ.

ಪ್ರಮುಖ ಆರೋಪಿ ಮನೆಯಿಂದ ಹದಿನಾಲ್ಕು ನೇಪಾಳಿ ಮತ್ತು ಎರಡು ಭಾರತೀಯ ಪಾಸ್‌ಪೋರ್ಟ್‌ಗಳೊಂದಿಗೆ ನಕಲಿ ವೀಸಾವನ್ನು ತಯಾರಿಸಲು ಬಳಸುವ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಆರೋಪಿಗಳನ್ನು ತಿಲಕ್ ನಗರದ ಮನೋಜ್ ಮೋಂಗಾ (51), ಶಿವ ಗೌತಮ್ (42), ನವೀನ್ ರಾಣಾ (25), ಬಲ್ಬೀರ್ ಸಿಂಗ್ (65), ಜಸ್ವಿಂದರ್ ಸಿಂಗ್ (55), ಆಶಿಫ್ ಅಲಿ (27) ಮತ್ತು ಒಬ್ಬ ಪ್ರಯಾಣಿಕ ಸಂದೀಪ್ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ತಿಂಗಳ 15 ದಿನಗಳಲ್ಲಿ 1,101 ಪ್ರಕರಣ ದೃಢ

ನಗರದಲ್ಲಿ ಡೆಂಗಿ ಪ್ರಕರಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಳೆದ ಎರಡು ತಿಂಗಳು ಕಾಡಿದ್ದ ಡೆಂಗಿ ಪ್ರಕರಣಗಳು ಈಗ ಇಳಿಕೆಯತ್ತ ಸಾಗಿವೆ. ಈ ತಿಂಗಳು 15 ದಿನಗಳಲ್ಲಿ 1,101 ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ ಡೆಂಗಿ ಜ್ವರಕ್ಕೆ ನಗರದ ಹಲವರು ಬಳಲಿದ್ದು, ಆರೋಗ್ಯ ಇಲಾಖೆ ಪ್ರಕಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ಈವರೆಗೆ 12,558 ಮಂದಿ ಡೆಂಗಿ ಪೀಡಿತರಾಗಿದ್ದಾರೆ. ಅವರಲ್ಲಿ ಬಹುತೇಕರು ಚೇತರಿಸಿಕೊಂಡಿದ್ದು, ಮೂವರು ಜ್ವರದ ತೀವ್ರತೆಗೆ ಮೃತಪಟ್ಟಿದ್ದಾರೆ. ಮರಣ ಹೊಂದಿದ ಕೆಲವರಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದರೂ, ಆ ಪ್ರಕರಣಗಳ 'ಸಾವಿನ ಲೆಕ್ಕಗಳ ವರದಿ'ಯಲ್ಲಿ (ಡೆತ್ ಆಡಿಟ್) ಅನ್ಯ ಕಾಯಿಲೆಗಳು ಕಾರಣವೆಂದು ಉಲ್ಲೇಖಿಸಿದ್ದರಿಂದ ಡೆಂಗಿ ಮರಣವೆಂದು ಪರಿಗಣಿಸಿಲ್ಲ.

ಈವರೆಗೆ...
- 12,558 ಮಂದಿ ಡೆಂಗಿ ಪೀಡಿತರು
- ಡೆಂಗಿಯಿಂದ ಮೂವರು ಸಾವು
- ಒಂದೇ ತಿಂಗಳಲ್ಲಿ 6,781 ಪ್ರಕರಣ

ಜೂನ್ ಅಂತ್ಯದವರೆಗೂ ನಿಯಂತ್ರಣದಲ್ಲಿದ್ದ ಪ್ರಕರಣ (1,563), ಜುಲೈನಲ್ಲಿ ಬಿಸಿಲು–ಮಳೆಯ ವಾತಾವರಣದಿಂದ ದಿಢೀರ್ ಏರಿಕೆಯಾಗಿತ್ತು. ಒಂದೇ ತಿಂಗಳಲ್ಲಿ 6,781 ಪ್ರಕರಣಗಳು ವರದಿಯಾಗಿದ್ದವು. ಹಾಟ್ ಸ್ಪಾಟ್ ಗುರುತಿಸುವಿಕೆ, ಫಾಗಿಂಗ್, ಜ್ವರ ಪರೀಕ್ಷೆ, ಲಾರ್ವಾ ಸಮೀಕ್ಷೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ಆಗಸ್ಟ್‌ನಲ್ಲಿ ಪ್ರಕರಣಗಳ ಸಂಖ್ಯೆ ತಕ್ಕ ಮಟ್ಟಿಗೆ ಹತೋಟಿಗೆ ಬಂದಿದ್ದವು. ಅಷ್ಟಾಗಿಯೂ ಮೂರು ಸಾವಿರಕ್ಕೂ ಅಧಿಕ ಮಂದಿ ಡೆಂಗಿ ಪೀಡಿತರಾಗಿದ್ದರು. ಕಳೆದ ತಿಂಗಳು 200ರ ಗಡಿಯ ಆಸುಪಾಸಿನಲ್ಲಿದ್ದ ದೈನಂದಿನ ಡೆಂಗಿ ಪ್ರಕರಣ, ಈಗ 50ರ ಆಸುಪಾಸಿನಲ್ಲಿದೆ. ಡೆಂಗಿ ಪೀಡಿತರಲ್ಲಿ ಸದ್ಯ 21 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ.

ಡೆಂಗಿ ಪ್ರಕರಣಗಳು ಏರಿಕೆಯಾದಾಗ ಇಲ್ಲಿನ ಕೆ.ಸಿ.ಜನರಲ್ ಆಸ್ಪತ್ರೆ, ಸರ್. ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಹಾಗೂ ಜಯನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಲಾ 25 ಹಾಸಿಗೆಗಳನ್ನು, ಯಲಹಂಕ ತಾಲ್ಲೂಕು ಆಸ್ಪತ್ರೆ ಮತ್ತು ಕೆ.ಆರ್.ಪುರ ತಾಲ್ಲೂಕು ಆಸ್ಪತ್ರೆಯಲ್ಲಿ ತಲಾ 10 ಹಾಸಿಗೆಗಳನ್ನು ಡೆಂಗಿ ಪೀಡಿತರ ಚಿಕಿತ್ಸೆಗೆ ಮೀಸಲಿರಿಸಲಾಗಿತ್ತು. ಈಗ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗುತ್ತಿರುವ ಡೆಂಗಿ ಪೀಡಿತರ ಸಂಖ್ಯೆ ಇಳಿಕೆಯಾಗಿರುವುದರಿಂದ ಅನ್ಯ ಕಾಯಿಲೆಗೆ ಒಳಗಾದವರಿಗೆ ಮೊದಲಿನಂತೆ ಬಳಸಿಕೊಳ್ಳಲಾಗುತ್ತಿದೆ.

'ಪ್ರಕರಣಗಳು ಕಡಿಮೆಯಾದರೂ ಡೆಂಗಿ ಜ್ವರ ನಿಯಂತ್ರಣಕ್ಕೆ ಬಂದಿದೆ ಎನ್ನಲು ಸಾಧ್ಯವಿಲ್ಲ. ಬಿಸಿಲು–ಮಳೆಯ ವಾತಾವರಣದಿಂದ ಪ್ರಕರಣಗಳ ಏರಿಳಿತವಾಗುತ್ತದೆ. ಅಕ್ಟೋಬರ್ ಅಂತ್ಯದವರೆಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಡೆಂಗಿಯನ್ನು ಕಡೆಗಣಿಸಬಾರದು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ನುಸುಳುಕೋರರಿಗೆ ಜೆಎಂಎಂ ನೆರವು: ಮೋದಿ

'ಪರಿವರ್ತನ್ ಮಹಾರ್ಯಾಲಿ'ಯಲ್ಲಿ ಪ್ರಧಾನಿ ಆರೋಪ

ಜೆಮ್‌ಶೆಡ್‌ಪುರದಲ್ಲಿ ಭಾನುವಾರ ನಡೆದ ಬೃಹತ್ ರ್‍ಯಾಲಿ ವೇಳೆ ಅಭಿಮಾನಿಗಳತ್ತ ಪ್ರಧಾನಿ ನರೇಂದ್ರ ಮೋದಿ ಕೈಬೀಸಿದರು —ಪಿಟಿಐ ಚಿತ್ರ

ಜೆಮ್‌ಶೆಡ್‌ಪುರ, (ಜಾರ್ಖಂಡ್) (ಪಿಟಿಐ): 'ಮತಬ್ಯಾಂಕ್ ರಾಜಕಾರಣಕ್ಕಾಗಿ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಜೆಎಂಎಂ ನೇತೃತ್ವದ ಸರ್ಕಾರವು ಬಾಂಗ್ಲಾದೇಶ ಹಾಗೂ ರೋಹಿಂಗ್ಯಾ ನುಸುಳುಕೋರರನ್ನು ರಕ್ಷಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಬಿಜೆಪಿಯಿಂದ ಇಲ್ಲಿನ ಗೋಪಾಲ್ ಮೈದಾನದಲ್ಲಿ ಆಯೋಜಿಸಿದ್ದ 'ಪರಿವರ್ತನ್ ಮಹಾರ್ಯಾಲಿ' ಉದ್ದೇಶಿಸಿ ಮಾತನಾಡಿದ ಅವರು, 'ನೆರೆರಾಷ್ಟ್ರಗಳಿಂದ ಬರುತ್ತಿರುವ ನುಸುಳುಕೋರರು ಜಾರ್ಖಂಡ್ ಪಾಲಿಗೆ ದೊಡ್ಡ ಆತಂಕ ತಂದೊಡ್ಡುತ್ತಿದ್ದು, ಸಂಥಾಲ್ ಪರಗಣ, ಕೊಲ್ಹಾನ್ ಪ್ರಾಂತ್ಯದಲ್ಲಿ ಭೌಗೋಳಿಕ ಚಿತ್ರಣವನ್ನೇ ಬದಲಾಯಿಸುತ್ತಿದ್ದಾರೆ. ರಾಜ್ಯದ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಕುಸಿತವಾಗುತ್ತಿದೆ. ನುಸುಳುಕೋರರು ಪಂಚಾಯತ್ ವ್ಯವಸ್ಥೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದು, ಜನರ ಭೂಮಿ ಕಸಿದುಕೊಂಡು, ರಾಜ್ಯದ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ಕಿಡಿಕಾರಿದರು.

'ನುಸುಳುಕೋರರಿಗೆ ಜೆಎಂಎಂ ಪಕ್ಷವು ನೆರವು ನೀಡುತ್ತಿದೆ. ಹೀಗಾಗಿಯೇ ಅವರು ಇಲ್ಲಿ ಪ್ರಭಾವಿಗಳಾಗುತ್ತಿದ್ದಾರೆ. ಜೆಎಂಎಂ, ಆರ್‌ಜೆಡಿ ಹಾಗೂ ಕಾಂಗ್ರೆಸ್ ಪಕ್ಷಗಳು 'ಜಾರ್ಖಂಡ್ ಜನರ ಪಾಲಿಗೆ ಅತಿ ದೊಡ್ಡ ಶತ್ರುಗಳಾಗಿದ್ದಾರೆ' ಎಂದು ಆರೋಪಿಸಿದ ಪ್ರಧಾನಿ ಮೋದಿ, ಅಧಿಕಾರದ ಹಪಾಹಪಿಯಿಂದ, ಮತ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ' ಎಂದು ದೂರಿದರು.

> **ಜೆಎಂಎಂ ನೇತೃತ್ವದ ಸರ್ಕಾರವು ಬಿಜೆಪಿ ನಾಯಕರನ್ನು ಗುರಿಯಾಗಿರಿಸಿಕೊಂಡು, ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುತ್ತಿದೆ**
> **ನರೇಂದ್ರ ಮೋದಿ,** ಪ್ರಧಾನಿ

'ಈ ವರ್ಷಾಂತ್ಯದಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆಯಲ್ಲಿ ಪಕ್ಷವು ಗೆಲುವು ಸಾಧಿಸಲಿದ್ದು, ಅಬಕಾರಿ ಕಾನ್‌ಸ್ಟೆಬಲ್ ನೇಮಕಾತಿ ವೇಳೆ ಮೃತಪಟ್ಟ ಅಭ್ಯರ್ಥಿಗಳ ಸಾವಿನ ಕುರಿತಂತೆ ತನಿಖೆ ನಡೆಸಲಿದೆ' ಎಂದು ತಿಳಿಸಿದರು.

ರಸ್ತೆ ಮಾರ್ಗದಲ್ಲಿ ಪ್ರಯಾಣ: ಪ್ರಧಾನಿ ಅವರು ರಾಂಚಿಯಿಂದ ಜೆಮ್‌ಶೆಡ್‌ಪುರಕ್ಕೆ ಹೆಲಿಕಾಪ್ಟರ್ ಮೂಲಕ ತೆರಳಲು ವ್ಯವಸ್ಥೆಯಾಗಿತ್ತು. ಪ್ರತಿಕೂಲ ಹವಾಮಾನದಿಂದ ಹೆಲಿಕಾಪ್ಟರ್ ಹಾರಲು ಸಾಧ್ಯವಾಗದ ಕಾರಣ, ರಸ್ತೆಮಾರ್ಗದಲ್ಲಿಯೇ ಅಲ್ಲಿಗೆ ತೆರಳಿದರು.

ಮಹಾರಾಷ್ಟ್ರ ಚುನಾವಣೆ: 'ಗೆಲ್ಲಬಲ್ಲ ಅಭ್ಯರ್ಥಿಯ ಆಯ್ಕೆ ಸೂತ್ರ'ವು ಸಿದ್ಧವಾಗಲಿದೆ ಎಂದ ಸಿ.ಎಂ

ಸೀಟು ಹಂಚಿಕೆ ಶೀಘ್ರ ಅಂತಿಮ: ಶಿಂದೆ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ, 'ಮಹಾಯುತಿ' ಮೈತ್ರಿಕೂಟ ದಲ್ಲಿ ಸೀಟು ಹಂಚಿಕೆ ಬಿಕ್ಕಟ್ಟು ಮುಂದುವರಿದಿದೆ.

'8ರಿಂದ 10 ದಿನದ ಒಳಗಾಗಿ, 'ಗೌರವಯುತ' ಹಾಗೂ 'ಗೆಲ್ಲಬಲ್ಲ ಅಭ್ಯರ್ಥಿಯ ಆಯ್ಕೆ ಸೂತ್ರ'ವು ಅಂತಿಮಗೊಳ್ಳಲಿದೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ತಿಳಿಸಿದರು.

ಮುಖ್ಯಮಂತ್ರಿಯವರ ಅಧಿಕೃತ ನಿವಾಸ 'ವರ್ಷಾ'ದಲ್ಲಿ ಭಾನುವಾರ ಆಯೋಜಿಸಿದ್ದ 'ಗಣೇಶೋತ್ಸವ'ದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ಈ ವಿಷಯ ತಿಳಿಸಿದರು.

'ಸೀಟು ಹಂಚಿಕೆ ಮಾತುಕತೆಯು ಚರ್ಚೆಯ ಹಂತದಲ್ಲಿದೆ. ಆದಷ್ಟು ಬೇಗ ಒಪ್ಪಂದ ಅಂತಿಮಗೊಳ್ಳಲಿದ್ದು, ಎಲ್ಲರಿಗೂ ತಿಳಿಯಲಿದೆ' ಎಂದರು.

'ನಾನೂ ಸಿ.ಎಂ ಆಕಾಂಕ್ಷಿ'

ಅಂಬಾಲಾ: 'ಹರಿಯಾಣದಲ್ಲಿ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಮುಖ್ಯಮಂತ್ರಿ ಸ್ಥಾನಕ್ಕೆ ನಾನು ಕೂಡ ಆಕಾಂಕ್ಷಿಯಾಗಿದ್ದೇನೆ' ಎಂದು ಬಿಜೆಪಿಯ ಹಿರಿಯ ಮುಖಂಡ ಹಾಗೂ ಮಾಜಿ ಸಚಿವ ಅನಿಲ್ ವಿಜ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ನಯಾಬ್ ಸಿಂಗ್ ಸೈನಿ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಪಕ್ಷವು ಈಗಾಗಲೇ ಸ್ಪಷ್ಟಪಡಿಸಿದೆ. ಸಚಿವ ಧರ್ಮೇಂದ್ರ ಪ್ರಧಾನ್ ಕೂಡ ಅನಿಲ್ ವಿಜ್ ಅವರ ಅಭಿಪ್ರಾಯಕ್ಕೆ ಅಸಮ್ಮತಿ ಸೂಚಿಸಿದ್ದಾರೆ.

'2 ದಿನಗಳಲ್ಲಿ ಪ್ರಣಾಳಿಕೆ'

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯನ್ನು ಎರಡು ದಿನಗಳಲ್ಲಿ ಬಿಡುಗಡೆ ಮಾಡಲಿದೆ ಎಂದು ಹಿರಿಯ ನಾಯಕ ಭರತ್ ಸಿಂಗ್ ಸೋಲಂಕಿ ಭಾನುವಾರ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸ್-ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಭಯೋತ್ಪಾದನೆಯನ್ನು ತೊಡೆದುಹಾಕಲು, ಕಾಶ್ಮೀರಿ ಪಂಡಿತರ ಮರಳುವಿಕೆ ಮತ್ತು ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸ್ಥಳೀಯ ಯುವಕರಿಗೆ ಉದ್ಯೋಗವನ್ನು ಸೃಷ್ಟಿಸಲು ಬಿಜೆಪಿ ವಿಫಲವಾಗಿದೆ ಎಂದು ಹೇಳಿದರು.

'ನಮ್ಮ ಪ್ರಣಾಳಿಕೆಯು 'ಜುಮ್ಲಾ'ಗಳನ್ನು ಆಧರಿಸಿರುವುದಿಲ್ಲ ಮತ್ತು ಅದರ ಅನುಷ್ಠಾನವನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ ಎಂದು ಸೋಲಂಕಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಮೋದಿ ಜನರ ದಾರಿ ತಪ್ಪಿಸುತ್ತಿದ್ದಾರೆ'

ಫಾರೂಕ್ ಅಬ್ದುಲ್ಲಾ

ಪ್ರಜಾ ಮತ ಜನತಂತ್ರದ ಹಬ್ಬ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಭಯೋತ್ಪಾದನೆ ಹೆಚ್ಚಲಿದೆ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಜನರ ಹಾದಿ ತಪ್ಪಿಸುತ್ತಿದ್ದಾರೆ' ಎಂದು ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರು ಕಿಡಿಕಾರಿದರು.

ಭಾನುವಾರ ಒಮರ್ ಅಬ್ದುಲ್ಲಾ ಪರ ಮತಯಾಚನೆ ಬಳಿಕ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, '370 ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದು ಮಾಡಿದ ನಂತರ ಕಳೆದ ಐದು ವರ್ಷಗಳಿಂದ ಅವರದ್ದೇ ಸರ್ಕಾರ ಆಡಳಿತ ನಡೆಸುತ್ತಿದೆ. ಭಯೋತ್ಪಾದನೆಗೆ 370ನೇ ವಿಧಿ ಕಾರಣ ಎಂದು ಪದೇ ಪದೇ ಹೇಳುತ್ತಿದ್ದರು. ಈಗ 370 ನೇ ವಿಧಿ ಅಸ್ತಿತ್ವದಲ್ಲಿ ಇಲ್ಲ. ಹಾಗಿದ್ದರೆ ಭಯೋತ್ಪಾದನೆಯ ಮೂಲ ಎಲ್ಲಿದೆ' ಎಂದು ಪ್ರಶ್ನಿಸಿದರು.

'ನಾಗರಿಕರು ಮತ್ತು ಸೈನಿಕರನ್ನು ಬಲಿಪಡೆಯುತ್ತಿರುವ ಬಂದೂಕುಗಳು ಎಲ್ಲಿಂದ ಬರುತ್ತಿವೆ? ಇಲ್ಲಿ ನಮ್ಮ ಸರ್ಕಾರ ಇಲ್ಲ. ಇದಕ್ಕೆ ಅವರೇ ಉತ್ತರ ನೀಡಬೇಕು' ಎಂದು ವಾಗ್ದಾಳಿ ನಡೆಸಿದರು. 'ಇನ್ನೊಬ್ಬರ ವಿರುದ್ಧ ಬೆರಳು ತೋರಿಸುವ ಮುನ್ನ, ಮೂರು ಬೆರಳುಗಳು ತಮ್ಮತ್ತಲೇ ತಿರುಗಿರುತ್ತವೆ ಎಂದು ಅವರಿಗೆ ತಿಳಿದಿರಲಿ. ನಾನು ಅಥವಾ ಎನ್‌ಸಿ ಪ್ರತ್ಯೇಕತಾವಾದಿಗಳನ್ನು ಹುಟ್ಟುಹಾಕಲಿಲ್ಲ. ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುವವರು ಮತ್ತು ಜನಮತದ ಬಗ್ಗೆ ಮಾತನಾಡುತ್ತಿದ್ದವರು ಈಗ ಅವರ ಕ್ಯಾಂಪ್‌ನಲ್ಲಿದ್ದಾರೆ' ಎಂದರು.

ಶೇಖ್ ಅಬ್ದುಲ್ಲಾ ರಶೀದ್ ಅವರ ಟೀಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಇದಕ್ಕೂ ಮುನ್ನ ಏಕೆ ರಶೀದ್ ಬಿಡುಗಡೆಯಾಗಲಿಲ್ಲ, ಈಗಲೇ ಏಕೆ? ಮುಸ್ಲಿಮರ ಮಧ್ಯೆ ಒಡಕುಂಟುಮಾಡಲು ಮತ್ತು ಅವರ ಧ್ವನಿಯನ್ನು ಹತ್ತಿಕ್ಕಲು ಬಿಡುಗಡೆ ಮಾಡಲಾಗಿದೆ. ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಪರ ಇದ್ದಾರೆ' ಎಂದರು.

ಎಐಪಿ- ಜೆಇಐ ಮೈತ್ರಿ

ಶ್ರೀನಗರ (ಪಿಟಿಐ): ಮಹತ್ವದ ರಾಜಕೀಯ ಬೆಳವಣಿಗೆಯೊಂದರಲ್ಲಿ, ಲೋಕಸಭಾ ಸದಸ್ಯ ಶೇಖ್ ಅಬ್ದುಲ್ ರಶೀದ್ ನೇತೃತ್ವದ ಅವಾಮಿ ಇತ್ತೆಹಾದ್ ಪಕ್ಷ (ಎಐಪಿ) ಮತ್ತು ಜಮಾತ್-ಎ-ಇಸ್ಲಾಮಿ (ಜೆಇಐ)ನ ಮಾಜಿ ಸದಸ್ಯರು ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗಾಗಿ ಮೈತ್ರಿ ಮಾಡಿಕೊಂಡಿದ್ದಾರೆ.

'ಉಭಯ ಪಕ್ಷಗಳ ಜಂಟಿ ಸಭೆ ಭಾನುವಾರ ನಡೆಯಿತು. ಎಐಪಿ ನಿಯೋಗದ ನೇತೃತ್ವವನ್ನು ಇದರ ವರಿಷ್ಠ ಮತ್ತು ಮುಖ್ಯ ವಕ್ತಾರ ಇನಾಮ್ ಉನ್ ನಬಿ, ಜೆಇಐ ನಿಯೋಗದ ನೇತೃತ್ವವನ್ನು ಗುಲಾಮ್ ಖಾದಿರ್ ವಾನಿ ವಹಿಸಿದ್ದರು. ಜೆಇಐನ ಪ್ರಮುಖ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು' ಎಂದು ಎಐಪಿ ಹೇಳಿಕೆಯಲ್ಲಿ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ಜಮಾತ್-ಎ-ಇಸ್ಲಾಮಿಗೆ 2019 ರಲ್ಲಿ ಕೇಂದ್ರ ಗೃಹ ಸಚಿವಾಲಯವು ನಿಷೇಧ ಹೇರಿತ್ತು. ಈ ವರ್ಷದ ಫೆಬ್ರುವರಿಯಲ್ಲಿ ನಿಷೇಧವನ್ನು ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಲಾಗಿದೆ. ಜಮಾತ್‌ನ ಹಲವಾರು ಪ್ರಭಾವಿ ನಾಯಕರು ಪಕ್ಷೇತರ ಅಭ್ಯರ್ಥಿಗಳಾಗಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

'ಜನರನ್ನು ಪ್ರತಿನಿಧಿಸಿ ಸ್ಪರ್ಧೆ': 'ಅವಾಮಿ ಇತ್ತೆಹಾದ್ ಪಕ್ಷವು ಅಧಿಕಾರಕ್ಕಾಗಿ ಅಲ್ಲ, ಜಮ್ಮು ಮತ್ತು ಕಾಶ್ಮೀರದ ಜನರನ್ನು ಪ್ರತಿನಿಧಿಸಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿದೆ' ಎಂದು ಸಂಸದ ಅಬ್ದುಲ್ ರಶೀದ್ ಹೇಳಿದರು.

ಪಿಟಿಐನೊಂದಿಗೆ ಸಂದರ್ಶನದಲ್ಲಿ ಮಾತನಾಡಿದ 'ಎಂಜಿನಿಯರ್ ರಶೀದ್' ಅವರು, 'ಕಾಶ್ಮೀರದ ಜನರು ಭಾರತದ ಶತ್ರುಗಳೂ ಅಲ್ಲ ಅಥವಾ ಪಾಕಿಸ್ತಾನದ ಏಜೆಂಟ್‌ಗಳೂ ಅಲ್ಲ' ಎಂದು ಹೇಳಿದರು.

ಭಲ್ಲಾ ಸಹೋದರ ಸೇರಿ ಹಲವರು ಬಿಜೆಪಿಗೆ

ಜಮ್ಮು (ಪಿಟಿಐ): ಜಮ್ಮುವಿನ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರಾದ ರಾಮನ್ ಭಲ್ಲಾ ಅವರ ಸಹೋದರ ಸೇರಿದಂತೆ ಅನೇಕರು ಭಾನುವಾರ ಬಿಜೆಪಿ ಸೇರ್ಪಡೆಗೊಂಡರು.

ಭಲ್ಲಾ ಅವರ ಸಹೋದರ ವಿನೋದ್ ಸೇರಿದಂತೆ ಬ್ಲಾಕ್ ಅಭಿವೃದ್ಧಿ ಸಮಿತಿಯ ಮಾಜಿ ಅಧ್ಯಕ್ಷ ದಿಲೀಪ್ ಕುಮಾರ್ ಹಾಗೂ ಅನೇಕ ಕಾಂಗ್ರೆಸ್ ಮುಖಂಡರನ್ನು ಕೇಂದ್ರ ಸಚಿವ ಜಿ. ಕೃಷ್ಣನ್ ರೆಡ್ಡಿ, ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ಘಟಕದ ಅಧ್ಯಕ್ಷ ಸತ್ ಶರ್ಮಾ ಹಾಗೂ ಇತರ ನಾಯಕರು ಸ್ವಾಗತಿಸಿದರು ಎಂದು ಪಕ್ಷದ ವಕ್ತಾರರು ತಿಳಿಸಿದರು.

'ಆರ್.ಎಸ್. ಪುರ– ಜಮ್ಮು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಭಲ್ಲಾ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಬಿಜೆಪಿ ಸೇರಿದ ಎಲ್ಲರೂ ಇದೇ ಪ್ರದೇಶಕ್ಕೆ ಸೇರಿದವರು. ಹೀಗಾಗಿ ಈ ಸೇರ್ಪಡೆಯು ಬಿಜೆಪಿಗೆ ಬಲ ನೀಡಿದೆ' ಎಂದು ಕೃಷ್ಣನ್ ರೆಡ್ಡಿ ತಿಳಿಸಿದರು.

'ನೀವು ಪ್ರಧಾನಿಯಾದರೆ ಬೆಂಬಲ'

ಮುಂಬೈ: 'ನೀವು ಪ್ರಧಾನಿ ಆಗುವುದಾದರೆ ನಿಮಗೇ ಬೆಂಬಲ ನೀಡುತ್ತೇವೆ ಎಂದು ರಾಜಕೀಯ ನಾಯಕರೊಬ್ಬರು ಭರವಸೆ ನೀಡಿದ್ದರು. ಆದರೆ ನಾನು ಆ ಪ್ರಸ್ತಾವವನ್ನು ನಿರಾಕರಿಸಿದ್ದೆ' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನಾಗ್ಪುರದಲ್ಲಿ ನಡೆದ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, 'ಆದರೆ ಆ ಪ್ರಸ್ತಾಪ ಇಟ್ಟ ನಾಯಕರು ಯಾರು ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. 'ಒಂದು ಸಿದ್ಧಾಂತವನ್ನು ನಂಬಿರುವ, ಅದಕ್ಕೆ ನಿಷ್ಠನಾಗಿರುವ ವ್ಯಕ್ತಿ ನಾನು. ಪಕ್ಷವು ನನಗೆ ಎಲ್ಲವನ್ನೂ ನೀಡಿದೆ ಎಂದು ಉತ್ತರಿಸಿದ್ದೆ' ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

ಅದಾನಿ ಗ್ರೂಪ್‌ಗೆ ಬಿಡ್– ಯೋಜಿತ ಒಪ್ಪಂದ: ಕಾಂಗ್ರೆಸ್

ನವದೆಹಲಿ (ಪಿಟಿಐ): ಮಹಾರಾಷ್ಟ್ರಕ್ಕೆ 6,600 ಮೆಗಾವಾಟ್‌ನಷ್ಟು ನವೀಕರಿಸಬಹುದಾದ ಮತ್ತು ಶಾಖೋತ್ಪನ್ನ ವಿದ್ಯುತ್ ಸರಬರಾಜು ಮಾಡುವ ಹರಾಜನ್ನು ಅದಾನಿ ಸಮೂಹ ಗೆದ್ದಿದೆ. ಇದು ಮಹಾಯುತಿ ಸರ್ಕಾರದ 'ಯೋಜಿತ ಒಪ್ಪಂದ' ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಜೆಎಸ್‌ಡಬ್ಲ್ಯು ಎನರ್ಜಿ ಮತ್ತು ಟೊರೆಂಟ್ ಪವರ್ ಕಂಪನಿಗಳನ್ನು ಹರಾಜಿನಲ್ಲಿ ಹಿಂದಿಕ್ಕಿ, ಪ್ರತಿ ಯೂನಿಟ್‌ಗೆ ₹4.08 ರಂತೆ ಮಹಾರಾಷ್ಟ್ರಕ್ಕೆ ದೀರ್ಘಾವಧಿಗೆ ವಿದ್ಯುತ್ ಪೂರೈಸುವ ಅವಕಾಶವನ್ನು ಅದಾನಿ ಸಮೂಹ ಪಡೆದುಕೊಂಡ ಬೆನ್ನಲ್ಲೇ ಕಾಂಗ್ರೆಸ್ ಈ ಆರೋಪ ಮಾಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಮಹಾರಾಷ್ಟ್ರದಲ್ಲಿ ಮಹಾಯುತಿ ಸರ್ಕಾರವು ಹೀನಾಯ ಸೋಲಿನ ಭೀತಿಯಲ್ಲಿದ್ದು, ಅವರು ತಮ್ಮ ಅಧಿಕಾರದ ಕಡೆ ದಿನಗಳಲ್ಲೂ ಇದನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಇದು ನಿಸ್ಸಂದೇಹವಾಗಿ ಮತ್ತೊಂದು ಮೋದಾನಿ ಉದ್ಯಮ' ಎಂದು ಹೇಳಿದ್ದಾರೆ. 'ಈ ಯೋಜಿತ ಒಪ್ಪಂದದ ಆಘಾತಕಾರಿ ವಿವರಗಳು ಶೀಘ್ರದಲ್ಲೇ ಹೊರಬರಲಿವೆ' ಎಂದು 'ಎಕ್ಸ್'ನಲ್ಲಿ ಹೇಳಿದರು.

ಘೋಷ್, ಮಂಡಲ್ ಕೋರ್ಟ್‌ಗೆ ಹಾಜರು

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಮತ್ತು ತಾಲಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಅಭಿಜಿತ್ ಮಂಡಲ್ ಅವರನ್ನು ಸಿಬಿಐ ಅಧಿಕಾರಿಗಳು ಭಾನುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರಿಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಮಂಡಲ್ ಅವರನ್ನು ಸಾಕ್ಷ್ಯ ತಿರುಚಿದ ಮತ್ತು ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ ಆರೋಪದ ಅಡಿಯಲ್ಲಿ ಬಂಧಿಸಲಾಗಿದೆ.

ಜನರಿಂದ ಪ್ರತಿಭಟನೆ: ಸಿಬಿಐ ಅಧಿಕಾರಿಗಳು ಮೊಂಡಲ್ ಅವರನ್ನು ವೈದ್ಯಕೀಯ ತಪಾಸಣೆಗೆ ಕರೆದೊಯ್ಯುತ್ತಿದ್ದ ಸಂದರ್ಭದಲ್ಲಿ ಹಲವಾರು ಮಂದಿ ಸಾರ್ವಜನಿಕರು ಸಿಬಿಐ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಶಾಸಕ ಶಾಮನೂರು ಪುನರಾಯ್ಕೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ, ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಮೂರನೇ ಬಾರಿಗೆ ಆಯ್ಕೆ ಯಾಗಿದ್ದಾರೆ.

ಮಹಾಸಭಾಕ್ಕೆ ಭಾನುವಾರ (ಸೆ.15) ಚುನಾವಣೆ ನಿಗದಿಯಾಗಿತ್ತು. ಶಾಮನೂರು ಶಿವಶಂಕರಪ್ಪ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ್ದು ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ ಎಂದು ಚುನಾವಣಾಧಿಕಾರಿ ಎಂ.ಬಿ. ದ್ಯಾಬೇರಿ ಅವರು ಭಾನುವಾರ ಘೋಷಿಸಿದರು.

93 ವರ್ಷದ ಶಾಮನೂರು ಅವರು ಅತಿ ಹಿರಿಯ ಶಾಸಕರೂ ಆಗಿದ್ದಾರೆ. 2012ರಲ್ಲಿ ಮಹಾಸಭಾದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಆಗ ಆಡಳಿತದ ಅವಧಿ 6 ವರ್ಷ ಆಗಿತ್ತು. 2019ರ ನಂತರ ಅವಧಿಯನ್ನು 5 ವರ್ಷಕ್ಕೆ ಇಳಿಸಲಾಯಿತು. 2019ರಲ್ಲಿ ಶಾಮನೂರು ಶಿವಶಂಕರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದರು.

ಕಾರವಾರ: ಸೌಹಾರ್ದ ಸಮಿತಿಗೆ ಮುಸ್ಲಿಂ ಸಮುದಾಯದವರೇ ಅಧ್ಯಕ್ಷ

'ಗಣೇಶ' ವಿಸರ್ಜನೆ: ಮುಸ್ಲಿಮರ ಸಾಥ್

● ಗಣಪತಿ ಹೆಗಡೆ



ಕಾರವಾರದ ಕೋಣೆವಾಡಾದಲ್ಲಿ ಅಂಬೇಡ್ಕರ್ ಸಮುದಾಯ ಭವನದ ಎದುರು ಭಾನುವಾರ ಗಣೇಶೋತ್ಸವ ಆಚರಣೆ ಬಳಿಕ ಮೂರ್ತಿಯನ್ನು ವಿಸರ್ಜನೆಗೆ ಕೊಂಡೊಯ್ಯುವ ಮೊದಲು ಹಿಂದೂ, ಮುಸ್ಲಿಂ ಯುವಕರು ಸೇರಿ ಮೂರ್ತಿಯೊಂದಿಗೆ ಫೋಟೊ ತೆಗೆಸಿಕೊಂಡರು —ಪ್ರಜಾವಾಣಿ ಚಿತ್ರ

ಕಾರವಾರ: ಇಲ್ಲಿನ ಕೋಣೆವಾಡಾದಲ್ಲಿ ಭಾನುವಾರ ನಡೆದ ಗಣೇಶ ಮೂರ್ತಿ ವಿಸರ್ಜನೆ ವೇಳೆ ಮೂರ್ತಿಯನ್ನು ಕೊಂಡೊಯ್ಯಲು ಮುಸ್ಲಿಂ ಯುವಕರು ಹೆಗಲು ನೀಡಿದರು. 'ಜೈ ಗಣೇಶ' ಘೋಷಣೆಯನ್ನೂ ಮೊಳಗಿಸಿದರು.

ಸತತ 24 ವರ್ಷಗಳಿಂದ ಗಣೇಶೋತ್ಸವ ಆಚರಿಸಿಕೊಂಡು ಬರುತ್ತಿರುವ ಗಣೇಶೋತ್ಸವ ಸಮಿತಿಗೆ ಮುಸ್ಲಿಂ ಸಮುದಾಯಕ್ಕೆ ಸೇರಿದ ನಜೀರ್ ರಾಣೆಬೆನ್ನೂರ ಅಧ್ಯಕ್ಷರಾಗಿದ್ದರೆ, ಬಾಬು ಶೇಖ್ ಸಂಚಾಲಕರಾಗಿದ್ದಾರೆ. ಹಿಂದೂ–ಮುಸ್ಲಿಂ ಸಮುದಾಯದವರು ಸದಸ್ಯರಾಗಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷವೂ ಗಣೇಶ ಚತುರ್ಥಿ ಹಬ್ಬದ ಆಚರಣೆಯಲ್ಲಿ ಹಿಂದೂ ಸಮುದಾಯದವರೊಂದಿಗೆ ಮುಸ್ಲಿಂ ಸಮುದಾಯದ ಜನರು ಸಂಭ್ರಮದಿಂದ ಪಾಲ್ಗೊಂಡಿದ್ದರು.

ಮೂರ್ತಿಯನ್ನು ಮೆರವಣಿಗೆ ಮೂಲಕ ಕೊಂಡೊಯ್ಯುವ ಮೊದಲು ಮಂಟಪದಿಂದ ತೆರೆದ ವಾಹನದವರೆಗೆ ಹಿಂದೂ, ಮುಸ್ಲಿಂ ಯುವಕರು ಸೇರಿ ಹೆಗಲ ಮೇಲೆ ಹೊತ್ತು ತಂದರು. ಮೆರವಣಿಗೆಯಲ್ಲಿಯೂ ಎರಡೂ ಸಮುದಾಯದವರೂ ಒಟ್ಟಾಗಿ ಪಾಲ್ಗೊಂಡರು. ಸಮೀಪದ ಜಾಮಿಯಾ ಮದೀನಾ ಮಸೀದಿ ಎದುರು ಮೆರವಣಿಗೆಯಲ್ಲಿ ಸಾಗುತ್ತಿದ್ದವರಿಗೆ ಮುಸ್ಲಿಂ ಸಮುದಾಯದವರು ಪಾನಕ, ಸಿಹಿತಿನಿಸು ವಿತರಿಸಿದರು.

> **ಮುಸ್ಲಿಂ ಸಮುದಾಯದವರು ಗಣೇಶೋತ್ಸವ ಆಚರಣೆ ಜವಾಬ್ದಾರಿ ನಿಭಾಯಿಸುತ್ತಾರೆ. ನಾವು ಈದ್ ಮಿಲಾದ್ ಆಚರಣೆಯ ಸಿದ್ಧತೆಯ ಜವಾಬ್ದಾರಿ ಹೊರುತ್ತೇವೆ**
> **ನಾಗರಾಜ ಬಾಬನಿ**
> ಈದ್ ಮಿಲಾದ್ ಆಚರಣೆ ಸಮಿತಿ ಅಧ್ಯಕ್ಷ

> **ಗಣೇಶೋತ್ಸವವನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ಆಚರಿಸುತ್ತ ಬಂದಿದ್ದೇವೆ. ಮುಸ್ಲಿಂ, ಹಿಂದೂ ಸಮುದಾಯದ ಜನರು ಭೇದವಿಲ್ಲದೆ ಪಾಲ್ಗೊಳ್ಳುತ್ತಾರೆ**
> **ನಜೀರ್,** ರಾಣೆಬೆನ್ನೂರ ಗಣೇಶೋತ್ಸವ ಸಮಿತಿ ಅಧ್ಯಕ್ಷ

ಕೋಣೆವಾಡಾದಲ್ಲಿ ಹಿಂದೂ, ಮುಸ್ಲಿಂ ಸಮುದಾಯದ ಜನರು ವಾಸವಿದ್ದು, ಬಹುತೇಕ ಮಂದಿ ಕೂಲಿ, ಸಣ್ಣಪುಟ್ಟ ವ್ಯಾಪಾರ ನಡೆಸುತ್ತ ಜೀವನ ಸಾಗಿಸುತ್ತಿದ್ದಾರೆ.

'ಧರ್ಮದ ಭೇದವಿಲ್ಲದೆ ಗಣೇಶೋತ್ಸವ ದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಸಮಿತಿಗೆ ಮುಸ್ಲಿಂ ಸಮುದಾಯದವರೇ ಅಧ್ಯಕ್ಷರಾಗಿದ್ದಾರೆ. ಈದ್ ಮಿಲಾದ್ ಆಚರಣೆ ಸಮಿತಿಗೆ ಹಿಂದೂ ಸಮುದಾಯದ ನಾಗರಾಜ್ ಬಾಬನಿ ಎಂಬುವವರು ಅಧ್ಯಕ್ಷರಾಗಿದ್ದಾರೆ. ಸೋಮವಾರ ನಡೆಯುವ ಈದ್ ಮಿಲಾದ್‌ನಲ್ಲಿ ಹಿಂದೂ ಸಮುದಾಯದವರೂ ಪಾಲ್ಗೊಳ್ಳುತ್ತಾರೆ' ಎಂದು ಕೋಣೆವಾಡಾ ಗಣೇಶೋತ್ಸವ ಸಮಿತಿ ಸಂಚಾಲಕ ಬಾಬು ಶೇಖ್ ತಿಳಿಸಿದರು.

'ಈ ಅವಧಿಯಲ್ಲೇ ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆ ಜಾರಿ'



ನವದೆಹಲಿ (ಪಿಟಿಐ): ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ಅವಧಿಯಲ್ಲೇ 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ತನ್ನ ಈ ನಿರ್ಧಾರಕ್ಕೆ ಎಲ್ಲ ಪಕ್ಷಗಳೂ ಬೆಂಬಲ ನೀಡಬಹುದು ಎಂಬ ವಿಶ್ವಾಸವನ್ನೂ ಎನ್‌ಡಿಎ ಸರ್ಕಾರ ಹೊಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರದ ಮೂರನೇ ಅವಧಿಯು 100 ದಿನಗಳನ್ನು ಪೂರ್ಣಗೊಳಿಸಿದ್ದು, ಆಡಳಿತಾರೂಢ ಮೈತ್ರಿಕೂಟದ ಒಗ್ಗಟ್ಟು ಉಳಿದ ಅವಧಿಯವರೆಗೆ ಮುಂದುವರಿಯುತ್ತದೆ ಎಂದು ಮೂಲಗಳು ತಿಳಿಸಿವೆ.

'ಖಂಡಿತವಾಗಿಯೂ ಈ ಅಧಿಕಾರಾವಧಿಯಲ್ಲಿಯೇ ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆ ಸಾಕಾರಗೊಳ್ಳಲಿದೆ' ಎಂದು ಮೂಲವೊಂದು ಹೇಳಿದೆ.

ಸ್ವಾತಂತ್ರ್ಯದ ದಿನ ರಾಷ್ಟ್ರದ ಜನತೆ ಉದ್ದೇಶಿಸಿ ಮಾಡಿದ್ದ ತಮ್ಮ ಭಾಷಣದಲ್ಲಿ, ಪ್ರಧಾನಿಯವರು 'ಒಂದು ರಾಷ್ಟ್ರ, ಒಂದು ಚುನಾವಣೆ' ಜಾರಿ ಬಗ್ಗೆ ಒತ್ತಿ ಹೇಳಿದ್ದರು.

'ಆಗಾಗ್ಗೆ ಎದುರಾಗುವ ಚುನಾವಣೆಗಳು ದೇಶದ ಪ್ರಗತಿಗೆ ಅಡ್ಡಿಯಾಗುತ್ತಿವೆ. ರಾಷ್ಟ್ರದ ಸಂಪನ್ಮೂಲಗಳು ಜನಸಾಮಾನ್ಯರ ಕಲ್ಯಾಣಕ್ಕೆ ಬಳಸಲು, 'ಒಂದು ರಾಷ್ಟ್ರ, ಒಂದು ಚುನಾವಣೆ' ಕನಸನ್ನು ನನಸಾಗಿಸಲು ಎಲ್ಲರೂ ಕೈಜೋಡಿಸಬೇಕು' ಎಂದು ವಿನಂತಿಸಿದ್ದರು.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಉನ್ನತ ಮಟ್ಟದ ಸಮಿತಿಯು ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಿ, ನಂತರದ 100 ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಬಗ್ಗೆ ಇದೇ ವರ್ಷದ ಮಾರ್ಚ್‌ನಲ್ಲಿ ಶಿಫಾರಸು ಮಾಡಿದೆ.

ಕಾನೂನು ಆಯೋಗವು 2029ರಿಂದ ಲೋಕಸಭೆ, ವಿಧಾನಸಭೆಗಳು, ಪುರಸಭೆಗಳು ಮತ್ತು ಪಂಚಾಯಿತಿಗಳಂತಹ ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಶಿಫಾರಸು ಮಾಡುವ ಸಾಧ್ಯತೆಯಿದೆ.

ಕೆರೆಯಲ್ಲಿ ಮುಳುಗಿ ಮೂವರು ಸಾವು

ಪ್ರಜಾವಾಣಿ ವಾರ್ತೆ

ತುರುವೇಕೆರೆ (ತುಮಕೂರು): ತಾಲ್ಲೂಕಿನ ದಂಡಿನಶಿವರ ಹೋಬಳಿ ಮಾರಸಂದ್ರ ಸಮೀಪದ ರಂಗನಹಟ್ಟಿ ಕಟ್ಟೆಯಲ್ಲಿ ಭಾನುವಾರ ಗಣಪತಿ ವಿಸರ್ಜನೆ ವೇಳೆ ಅಪ್ಪ, ಮಗ ಹಾಗೂ ಮತ್ತೊಬ್ಬ ಯುವಕ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ರಂಗನಹಟ್ಟಿ ಗ್ರಾಮದ ರೇವಣ್ಣ (50) ಅವರ ಮಗ ಶರತ್ (26) ಹಾಗೂ ದಯಾನಂದ್(22) ಎಂಬುವರು ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಸಾರ್ವಜನಿಕ ಗಣೇಶನನ್ನು ವಿಸರ್ಜಿಸಲು ಭಾನುವಾರ ಮಧ್ಯಾಹ್ನ ಮೂರು ಗಂಟೆಗೆ ರಂಗನಕಟ್ಟೆಗೆ ತೆರಳಿದ್ದರು.

ಮೂರ್ತಿಯನ್ನು ಹಿಡಿದು ಶರತ್ ಮತ್ತು ದಯಾನಂದ್ ನೀರಿಗೆ ಇಳಿದಿದ್ದರು. ಕೆಸರಿನಲ್ಲಿ ಕಾಲು ಹೂತುಕೊಂಡು ಈಜಲು ಸಾಧ್ಯವಾಗದೆ ದಡದಲ್ಲಿದ್ದವರನ್ನು ಸಹಾಯಕ್ಕೆ ಕೂಗಿಕೊಂಡಿದ್ದಾರೆ.

ಮಗ ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡ ರೇವಣ್ಣ ನೀರಿಗೆ ಧುಮಿಕಿದ್ದಾರೆ. ಅವರಿಗೂ ಈಜಲು ಸಾಧ್ಯವಾಗದೆ ಮುಳುಗಿ ಮೃತಪಟ್ಟಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಸಂಜೆ ಶವಗಳನ್ನು ಹೊರತೆಗೆದಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ಎಚ್‌ಎಸ್‌ಆರ್‌ಪಿ: 3 ದಿನ ದಂಡವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಕೆಗೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ಬುಧವಾರ (ಸೆಪ್ಟೆಂಬರ್ 18) ವಿಚಾರಣೆ ನಡೆಯಲಿದ್ದು, ಅಲ್ಲಿಯವರೆಗೆ ದಂಡ ವಿಧಿಸದಿರಲು ಸಾರಿಗೆ ಇಲಾಖೆಯು ನಿರ್ಧರಿಸಿದೆ.

ಎಚ್‌ಎಸ್‌ಆರ್‌ಪಿ ಅಳವಡಿಸಲು ಸಮಯ ವಿಸ್ತರಿಸಲು ಕೋರಿ ಬಿಎನ್‌ಡಿ ಎನರ್ಜಿ ಪ್ರೈವೆಟ್ ಲಿಮಿಟೆಡ್ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅವಧಿ ವಿಸ್ತರಿಸಲು ಸೂಚಿಸಿದ್ದ ಹೈಕೋರ್ಟ್ ವಿಚಾರಣೆ ಮುಂದೂಡಿತ್ತು. ಅದರಂತೆ ಸೆ.15ರವರೆಗೆ ಅವಧಿ ವಿಸ್ತರಿಸಲಾಗಿತ್ತು.

'ಮೂರು ತಿಂಗಳ ಗಡುವು ಈಗ ಮುಗಿದಿದೆ. ಸೆ.18ಕ್ಕೆ ಹೈಕೋರ್ಟ್ ನೀಡುವ ಆದೇಶ ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಅಲ್ಲಿಯವರೆಗೆ ಬಲವಂತದ ಕ್ರಮ ಇರುವುದಿಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ತಪಾಸಣೆ ಮಾಡಿದರೆ ಹೆಚ್ಚಳ ಸಾಧ್ಯತೆ

2019ರ ಏಪ್ರಿಲ್ 1ರ ನಂತರದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಇದೆ. ಅದಕ್ಕಿಂತ ಹಿಂದಿನ ವಾಹನಗಳಿಗೆ ಅಳವಡಿಸಬೇಕು. ಇಲ್ಲಿವರೆಗೆ 52 ಲಕ್ಷ ವಾಹನಗಳಿಗೆ ಅಳವಡಿಸಲಾಗಿದೆ. 1.48 ಕೋಟಿ ವಾಹನಗಳಿಗೆ ಅಳವಡಿಕೆಯಾಗಿಲ್ಲ. ಒಮ್ಮೆ ತಪಾಸಣೆ ಆರಂಭಿಸಿದರೆ ಅಳವಡಿಸುವವರ ಪ್ರಮಾಣ ಹೆಚ್ಚಳವಾಗಲಿದೆ ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ. 'ಬೆಂಗಳೂರು ನಗರಕ್ಕಿಂತಲೂ ಉಳಿದ ಜಿಲ್ಲೆಗಳಲ್ಲಿ ಎಚ್‌ಎಸ್‌ಆರ್‌ಪಿ ಅಳವಡಿಸಿದವರ ಪ್ರಮಾಣ ಬಹಳ ಕಡಿಮೆ ಇದೆ' ಎಂದು ಹೇಳಿದ್ದಾರೆ.

ಉತ್ತರ ಕರ್ನಾಟಕದ 'ಏಕೈಕ ಗಣಪತಿ ಜಾತ್ರೆ' ಎಂದೇ ಪ್ರಸಿದ್ಧವಾದ ಗಣೇಶನ ರಥೋತ್ಸವ ಧಾರವಾಡ ಜಿಲ್ಲೆ ನವಲಗುಂದದಲ್ಲಿ ಭಾನುವಾರ ಸಾವಿರಾರು ಭಕ್ತರ ಮಧ್ಯೆ ಸಡಗರದಿಂದ ನಡೆಯಿತು

22 ತೊಲ ಬಂಗಾರ ದರೋಡೆ

ಪ್ರಜಾವಾಣಿ ವಾರ್ತೆ

ರಾಯಚೂರು: ಇಲ್ಲಿನ ಲಕ್ಷ್ಮೀ ನರಸಿಂಹ ಬಡಾವಣೆಯಲ್ಲಿ ಭಾನುವಾರ ಬೆಳಗಿನ ಜಾವ ಮನೆ ಬಾಗಿಲು ಮುರಿದು ಒಳ ನುಗ್ಗಿದ ದರೋಡೆಕೋರರು ಮನೆ ಮಾಲೀಕರನ್ನು ಕಟ್ಟಿಹಾಕಿ 22 ತೊಲ ಬಂಗಾರ, 2 ಕೆ.ಜಿ ಬೆಳ್ಳಿ ಹಾಗೂ ₹2 ಲಕ್ಷ ನಗದು ದೋಚಿ ಪರಾರಿಯಾಗಿದ್ದಾರೆ.

ಕಪ್ಪು ಬಣ್ಣದ ಬಟ್ಟೆ ಧರಿಸಿದ ದರೋಡೆಕೋರರ ಗ್ಯಾಂಗ್ ಮನೆಗೆ ನುಗ್ಗುವ ಮುಂಚೆ ಬಡಾವಣೆಯ ಅಕ್ಕಪಕ್ಕದ ಮನೆಗಳಿಗೆ ಹೊರಗೆ ಬೀಗ ಹಾಕಿದ್ದಾರೆ. ಸುತ್ತಮುತ್ತಲಿನ ಬೀದಿ ದೀಪಗಳನ್ನು ಆಫ್ ಮಾಡಿದ್ದಾರೆ. ನಂತರ ಬಸನಗೌಡ ಅವರ ಮನೆಗೆ ನುಗ್ಗಿ ಮನೆಯವರನ್ನು ಕಟ್ಟಿ ಹಾಕಿ ಚಾಕು ತೋರಿಸಿದ್ದಾರೆ. ಜೀವ ಬೆದರಿಕೆ ಹಾಕಿ ದರೋಡೆ ಮಾಡಿದ್ದಾರೆ. ಕಳ್ಳರ ಚಲನವಲನದ ದೃಶ್ಯಗಳು ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ದರೋಡೆ ಮಾಹಿತಿ ತಿಳಿ ಯುತ್ತಿದ್ದಂತೆಯೇ ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪಶ್ಚಿಮ ಪೊಲೀಸ್ ಠಾಣೆ ಪೊಲೀಸರು ಶೋಧಕಾರ್ಯ ನಡೆಸಿದ್ದಾರೆ.

ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಸ್ಥಳಕ್ಕೆ ಬಂದು ಪರಿಶೀಲಿಸಿದರು.

ಪ್ಯಾಲೆಸ್ಟೀನ್ ಬಾವುಟ ಹಿಡಿದು ಓಡಾಟ

ಯುವಕರ ಬಂಧನಕ್ಕೆ ಬಜರಂಗದಳ, ಬಿಜೆಪಿ ಕಾರ್ಯಕರ್ತರ ಒತ್ತಾಯ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಪ್ಯಾಲೆಸ್ಟೀನ್ ಬಾವುಟ ಹಿಡಿದು ಎರಡು ಬೈಕ್‌ನಲ್ಲಿ ಯುವಕರು ನಗರದಲ್ಲಿ ಭಾನುವಾರ ಓಡಾಡಿರುವ ವಿಡಿಯೊಗಳು ಸಾಮಾಜಿಕ ಜಾಲತಾಣ ಗಳಲ್ಲಿ ಹರಿದಾಡುತ್ತಿವೆ.

ಒಂದು ಸ್ಕೂಟರ್‌ನಲ್ಲಿ ಮೂವರು ಕುಳಿತಿದ್ದು, ಪ್ಯಾಲೆಸ್ಟೀನ್ ಬಾವುಟ ಹಿಡಿದು ದಂಟರಮಕ್ಕಿ ಕೆರೆ ಮೇಲಿನ ರಸ್ತೆಯಲ್ಲಿ ಹನುಮಂತಪ್ಪ ವೃತ್ತದ ಕಡೆಗೆ ಬಂದಿದ್ದಾರೆ. ಮತ್ತೊಂದು ಬೈಕ್‌ನಲ್ಲಿ ಇನ್ನೂ ಮೂವರು ಕುಳಿತು ಮತ್ತೊಂದು ಬಾವುಟ ಹಿಡಿದು ಅದೇ ರಸ್ತೆಯಲ್ಲಿ ಹಿಂಬಾಲಿಸಿದ್ದಾರೆ.

ಈ ವಿಡಿಯೊ ಹರಿದಾಡುತ್ತಿದ್ದಂತೆ ಬಜರಂಗದಳ ಮತ್ತು ಬಿಜೆಪಿ ಕಾರ್ಯಕರ್ತರು ನಗರ ಠಾಣೆ ಬಳಿ ಜಮಾಯಿಸಿದರು. ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

'ಈದ್ ಮಿಲಾದ್ ಸಂದರ್ಭದಲ್ಲಿ ರಾಷ್ಟ್ರ ವಿರೋಧಿ ಮನಃಸ್ಥಿತಿಯ ಯುವಕರು ಪ್ಯಾಲೆಸ್ಟೀನ್ ಧ್ವಜ ಹಿಡಿದು ಜಾಥಾ ಮಾಡಿದ್ದಾರೆ. ಈ ರೀತಿ ರಾಜಾರೋಷವಾಗಿ ದೇಶ ವಿರೋಧಿ ಚಟುವಟಿಕೆ ನಡೆಸಿರುವ ಯುವಕರನ್ನು ಕೂಡಲೇ ಬಂಧಿಸಬೇಕು' ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಒತ್ತಾಯಿಸಿದರು.

'ನಾಗಮಂಗಲದಲ್ಲಿ ಕೋಮು ಗಲಭೆಯಾಗಿದ್ದು, ಜನ ಆತಂಕದಲ್ಲಿದ್ದಾರೆ. ನಾಳೆ ಈದ್ ಮಿಲಾದ್ ಇದೆ. ಎರಡು ದಿನಗಳಲ್ಲಿ ಗಣೇಶ ಮೆರವಣಿಗೆಗಳು ನಡೆಯಬೇಕಿವೆ. ಈ ಸಂದರ್ಭದಲ್ಲಿ ಅಶಾಂತಿ ಸೃಷ್ಟಿಸಲು ಈ ರೀತಿಯ ಧ್ವಜ ಹಾರಿಸಿದ್ದಾರೆ' ಎಂದರು.

ಈ ಕುರಿತು 'ಪ್ರಜಾವಾಣಿ'ಗೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ. ಕೃಷ್ಣಮೂರ್ತಿ ಪ್ರತಿಕ್ರಿಯೆ ನೀಡಿದರು. 'ಬಾವುಟ ಹಿಡಿದು ಸಂಚರಿಸಿರುವ ಬೈಕ್ ನಂಬರ್ ಪತ್ತೆಯಾಗಿದೆ. ಆರೋಪಿಗಳನ್ನು ಬಂಧಿಸಲು ತಂಡ ರಚನೆ ಮಾಡಲಾಗಿದೆ' ಎಂದು ಅವರು ವಿವರಿಸಿದರು.

ಹಾಲಿನ ಪೌಡರ್ ಕದ್ದ ಮುಖ್ಯ ಶಿಕ್ಷಕ ಅಮಾನತು



ಅಫಜಲಪುರ: ತಾಲ್ಲೂಕಿನ ಸ್ಟೇಷನ್ ಗಾಣಗಾಪುರದ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಮಕ್ಕಳಿಗೆ ವಿತರಿಸುವ ಹಾಲಿನ ಪೌಡರ್ ಪ್ಯಾಕೆಟ್‌ಗಳನ್ನು ಕದ್ದು ಒಯ್ದ ಆರೋಪದ ಮೇಲೆ ಮುಖ್ಯಶಿಕ್ಷಕ ಖಾಜಪ್ಪ ದೊಡ್ಡಮನಿ ಅವರನ್ನು ಅಮಾನತು ಮಾಡಲಾಗಿದೆ.

ಶಾಲೆಯಿಂದ ಪ್ಯಾಕೆಟ್‌ಗಳನ್ನು ಕದ್ದುಕೊಂಡು ಮನೆಗೆ ಸಾಗಿಸುವಾಗ ಖಾಜಪ್ಪ ಅವರು ಸ್ಥಳೀಯರ ಕೈಗೆ ಸಿಕ್ಕಿಬಿದ್ದಿದ್ದರು. ಈ ಕುರಿತ ಪರಿಶೀಲನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಜ್ಯೋತಿ ಪಾಟೀಲ ಅವರು ಅಧಿಕಾರಿಗಳ ಸಮಿತಿ ರಚಿಸಿದ್ದರು.

ಪ್ರಧಾನಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆ ಅನುಷ್ಠಾನದಲ್ಲಿ ಕರ್ತವ್ಯ ನಿರ್ಲಕ್ಷ್ಯ ಮತ್ತು ಹಾಲಿನ ಪೌಡರ್ ಪ್ಯಾಕೆಟ್‌ಗಳನ್ನು ಶಾಲೆಯಿಂದ ಹೊರಸಾಗಿಸುವಲ್ಲಿ ಮುಖ್ಯ ಶಿಕ್ಷಕರ ಪಾತ್ರ ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದರು. ವರದಿಯನ್ನು ಆಧರಿಸಿ ಡಿಡಿಪಿಐ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಶಿಕ್ಷಣ



ಓದಿನ ಸಖ್ಯ ಮಕ್ಕಳಿಗೆ ಮುಖ್ಯ

ಆರ್.ಬಿ.ಗುರುಬಸವರಾಜ್

‘ಸರ್, ನನ್ನ ಮಗಳು ಯಾವಾಗಲೂ ಬರಿತಾನೆ ಇರ್ತಾಳೆ. ಓದೋದೇ ಇಲ್ಲ. ಓದುವುದಕ್ಕೆ ಏನಾದರೂ ಸಲಹೆ ಕೊಡಿ’ ಇದು ಶಾಲೆಗೆ ಆಗಾಗ ಬರುವ ಕೆಲ ಪೋಷಕರ ಅಳಲು.

‘ಸರ್ ಇವನು ಎಂಟನೆ ತರಗತಿ. ಹೀಗಿದ್ದೂ ವೃತ್ತಪತ್ರಿಕೆ ಓದುವುದಕ್ಕೂ ಬರುವುದಿಲ್ಲ’ ಮತ್ತೊಬ್ಬರ ಪಾಲಕರ ಬೇಸರ. ಓದಿಗೆ ಸಂಬಂಧಿಸಿದ ಇಂಥ ತರಹೇವಾರಿ ದೂರುಗಳು ಬರುವುದು ಸಹಜ. ಓದು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಓದುಗ ಮತ್ತು ಪಠ್ಯದ ನಡುವಿನ ಪರಸ್ಪರ ಕ್ರಿಯೆಯಾಗಿದೆ. ಪಠ್ಯವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಓದುಗರು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು.

ಓದಿನ ಹಿನ್ನಡೆಗೆ ಕಾರಣಗಳು

- ಸಾಮಾಜಿಕ ಜಾಲತಾಣಗಳು, ಸಮೂಹ ಮಾಧ್ಯಮಗಳು, ವಿಡಿಯೊ ಗೇಮ್‌ಗಳು ಮತ್ತು ಆನ್‌ಲೈನ್ ವಿಡಿಯೊಗಳು ಓದುವಿಕೆಗೆ ಪ್ರತಿಸ್ಪರ್ಧಿಗಳಾಗಿವೆ.
- ಇಂಟರ್‌ನೆಟ್ ಮತ್ತು ಮಲ್ಟಿಮೀಡಿಯಾದಲ್ಲಿ ಸುಲಭ ಪ್ರವೇಶವು ಮಕ್ಕಳಲ್ಲಿ ಓದಿನ ಗೊಂದಲವನ್ನು ಉಂಟುಮಾಡಿದೆ.
- ಪಠ್ಯಕ್ರಮ ಮತ್ತು ಮನೆಗೆಲಸದ ಹೊರೆಯೂ ಓದಿಗೆ ತೊಡಕಾಗಬಹುದು.
- ಸಂಪೂರ್ಣವಾಗಿ ಶೈಕ್ಷಣಿಕ ಪುಸ್ತಕಗಳು ಅಥವಾ ಅಸಮರ್ಪಕ ಓದುವ ಸಾಮಗ್ರಿಗಳಿಂದ ಮಕ್ಕಳು ಓದಿನಿಂದ ವಿಮುಖರಾಗಬಹುದು. ಉತ್ತಮ ಓದಿನ ಸಾಮಗ್ರಿಗಳ ಕೊರತೆಯಿದೆ.
- ಪೋಷಕರ ಅನಕ್ಷರತೆ, ಓದದಿರುವ ಮನೋಭಾವ ಮತ್ತು ಅಸಮರ್ಪಕ ಓದುವ ವಾತಾವರಣವು ಪ್ರಕ್ರಿಯೆಗೆ ಹಿನ್ನಡೆಯಾಗಿದೆ.
- ಕೆಲವು ಮಕ್ಕಳು ಕಲಿಕೆಯಲ್ಲಿ ಅಸಮರ್ಥತೆಯನ್ನು ಹೊಂದಿರುವುದರಿಂದ ಓದುವುದು ಇಷ್ಟವಾಗದೇ ಹೋಗಬಹುದು.
- ಮಕ್ಕಳ ಆಸಕ್ತಿಗೆ ಪೂರಕವಾದ ಪುಸ್ತಕಗಳಿಲ್ಲದೇ ಇರುವುದು.
- ದೂರದರ್ಶನ, ಮೊಬೈಲ್, ಗ್ಯಾಜೆಟ್‌ಗಳು ಓದಿನ ಗೀಳಿಗೆ ಅಡ್ಡಿಯನ್ನುಂಟು ಮಾಡುವುದು.

ಓದಿನ ಹವ್ಯಾಸ ಬೆಳೆಸಲು ಇರುವ ಮಾರ್ಗಗಳು

ದೈನಂದಿನ ಅಭ್ಯಾಸವನ್ನಾಗಿಸಿ: ಮಗುವಿಗೆ ಬಾಲ್ಯದಿಂದಲೇ ಓದಿನ ತುಡಿತವನ್ನು ಬೆಳೆಸಬೇಕು. ಮಕ್ಕಳ ವಯೋಮಾನಕ್ಕೆ ಹೊಂದಿಕೆಯಾಗುವಂಥ ಪುಸ್ತಕಗಳು, ಕಥೆ, ಕಾಮಿಕ್ಸ್, ಶಿಶುಪ್ರಾಸ ಗೀತೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದಿಸಬೇಕು. ಮಲಗುವ ಮುನ್ನ ಮಗುವಿಗೆ ಬಣ್ಣ ಬಣ್ಣದ ಪುಸ್ತಕಗಳನ್ನು ತೋರಿಸಿ, ಕಥೆ ಹೇಳಬೇಕು.

ಮಗುವಿನ ಮುಂದೆ ಓದಿ: ಮಕ್ಕಳಿಗೆ ಇಷ್ಟವಾಗುವ ಪುಸ್ತಕಗಳು, ನಿಯತಕಾಲಿಕೆಗಳು ಅಥವಾ ಗ್ರಾಫಿಕ್ ಕಾದಂಬರಿಗಳನ್ನು ಮಕ್ಕಳ ಮುಂದೆ ಓದಿ. ನೀವು ಓದುವುದನ್ನೂ ಮಗು ನೋಡಲಿ. ಏಕೆಂದರೆ ಮಕ್ಕಳು ಏನನ್ನು ಗಮನಿಸುತ್ತಾರೋ ಅದರಿಂದ ಕಲಿಯುತ್ತಾರೆ. ಪೋಷಕರು ಓದುವುದರಲ್ಲಿ ಉತ್ಸುಕರಾಗಿದ್ದರೆ, ಮಗುವು ಓದಲು ಆಸಕ್ತಿ ತೋರುತ್ತದೆ.

ಓದುವ ಜಾಗವನ್ನು ನಿರ್ಮಿಸಿ: ಓದುವ ಸ್ಥಳವು ದೊಡ್ಡದಾಗಿರಬೇಕಾಗಿಲ್ಲ. ಕಪಾಟಿನಲ್ಲಿ ಬಹಳಷ್ಟು ಪುಸ್ತಕಗಳು ಇರಬೇಕೆಂದು ಇಲ್ಲ. ಮಂಚದ ಮೂಲೆಯಾಗಿರಬಹುದು ಅಥವಾ ಮಗು ಮಲಗುವ ಸ್ಥಳವಾಗಿರಬಹುದು, ಮಗು ಪದೇ ಪದೇ ಓಡಾಡುವ ಜಾಗವಾಗಿರಬಹುದು. ಅಲ್ಲಿ ಮಗುವಿಗೆ ಇಷ್ಟವಾಗುವ ಒಂದೆರಡು ಆಕರ್ಷಕ ಪುಸ್ತಕಗಳನ್ನಿಡಿ. ಮಗು ಸ್ವಯಂ ಓದಿನಲ್ಲಿ ತೊಡಗಿಸಿಕೊಳ್ಳುತ್ತದೆ. ಮಗು ಓದುವ ಜಾಗವು ಒಂಚೂರು ಆರಾಮದಾಯಕವಾಗಿರಲಿ. ಸಾಕಷ್ಟು ಬೆಳಕು ಮತ್ತು ಗಾಳಿ ಹೊಂದಿರುವ ಆರಾಮದಾಯಕ ಸ್ಥಳವನ್ನು ಆರಿಸಿ.

ಗ್ರಂಥಾಲಯಕ್ಕೆ ಭೇಟಿ ಮಾಡಿಸಿ: ಮಗುವಿಗೆ ಸ್ವತಂತ್ರ ಓದಿನ ಸಖ್ಯವನ್ನು ಬೆಳೆಸಲು ನಿಯಮಿತವಾಗಿ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ. ಅಲ್ಲಿ ಮಗುವಿನ ವಯಸ್ಸು ಮತ್ತು ಆಸಕ್ತಿಗನುಗುಣವಾದ ಅನೇಕ ಪುಸ್ತಕಗಳು ದೊರೆಯುತ್ತವೆ. ಜ್ಞಾನಾರ್ಜನೆಗೆ ಗ್ರಂಥಾಲಯವು ಉತ್ತಮ ಸಂಪನ್ಮೂಲವಾಗಿದೆ.

ಓದಿನ ಆಯ್ಕೆ ಮಗುವಿನದ್ದಾಗಲಿ: ಮಕ್ಕಳು ತಾವು ಏನನ್ನು ಓದಲು ಬಯಸುತ್ತಾರೋ ಅದನ್ನೇ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಿ. ಪುಸ್ತಕದಂಗಡಿ ಅಥವಾ ಗ್ರಂಥಾಲಯಕ್ಕೆ ಮಗುವನ್ನು ಕರೆದುಕೊಂಡು ಹೋದಾಗ ಅವರಿಗಿಷ್ಟವಾದ ಪುಸ್ತಕ ಆರಿಸಿಕೊಳ್ಳಲು ಅವಕಾಶ ನೀಡಿ. ಇದರಿಂದ ಅವರ ಓದಿನ ವೇಗ ಮತ್ತು ಗ್ರಹಿಕೆ ಹೆಚ್ಚುತ್ತದೆ. ಹಾಸ್ಯ, ನಾಟಕ, ವೈಜ್ಞಾನಿಕ ಕಾದಂಬರಿ ಮತ್ತು ಫ್ಯಾಂಟಸಿಗಳಂಥ ಪ್ರಕಾರಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ.

ದೈನಂದಿನ ಜೀವನದಲ್ಲಿ ಓದುವ ಕ್ಷಣಗಳನ್ನು ಹುಡುಕಿ: ಓದುವುದೆಂದರೆ ಕೇವಲ ಪುಸ್ತಕದೊಂದಿಗೆ ಕುಳಿತುಕೊಳ್ಳುವುದಲ್ಲ. ಓದು ದೈನಂದಿನ ಜೀವನದ ಒಂದು ಭಾಗವೂ ಆಗಿದೆ. ಮಗು ಮನೆಯ ಹೊರಗಿದ್ದಾಗಲೂ ಓದಲು ಅನೇಕ ಅವಕಾಶಗಳಿವೆ. ಅವು ರಸ್ತೆ ಹೆಸರು, ಚಿಹ್ನೆಗಳು, ಸೂಚನಾ ಫಲಕಗಳು, ವಾಹನಗಳ ಬೋರ್ಡ್ ಆಗಿರಬಹುದು, ಅಂಗಡಿಗಳ ನಾಮಫಲಕಗಳಾಗಿರಬಹುದು, ದಿನಸಿ ಪಟ್ಟಿಗಳಾಗಿರಬಹುದು ಹೀಗೆ ವಿವಿಧ ಓದಿನ ಅವಕಾಶಗಳನ್ನು ಮಗುವಿಗೆ ಒದಗಿಸಿ ಓದಲು ತಿಳಿಸಿ. ಇದು ಹೊರಗಿನ ಜ್ಞಾನಾರ್ಜನೆಗೆ ತುಂಬಾ ಸಹಕಾರಿ.

ಮೆಚ್ಚಿನ ಪುಸ್ತಕಗಳನ್ನು ಮತ್ತೆ ಓದಲು ಅವಕಾಶ ನೀಡಿ: ಕೆಲವು ಪುಸ್ತಕಗಳು ಮಕ್ಕಳನ್ನು ಪದೇ ಪದೇ ಓದಿಗೆ ಪ್ರೇರೇಪಿಸುತ್ತವೆ. ಅಂತಹ ಪುಸ್ತಕಗಳನ್ನು ಪದೇ ಪದೇ ಓದಲು ಅವಕಾಶ ನೀಡಿ. ಮೊದಲ ಬಾರಿಗೆ ತಪ್ಪಿಸಿಕೊಂಡ ವಿಷಯಗಳನ್ನು ಗುರುತಿಸಲು ಇಷ್ಟಪಡುತ್ತಾರೆ.

ಮೇಲ್ವಿಚಾರಣೆ ಮಾಡಿ : ನೀವು ಶಿಕ್ಷಕರಲ್ಲದಿರಬಹುದು. ಆದರೆ ನೀವು ನಿಮ್ಮ ಮಗುವಿನ ಮೊದಲ ಶಿಕ್ಷಕರು ಎಂಬುದನ್ನು ಮರೆಯಬೇಡಿ. ಮಗುವಿನ ಓದಿನ ಮೇಲೆ ನಿಗಾವಹಿಸಿ ಓದುವ ಕೌಶಲವನ್ನು ವೃದ್ಧಿಸಿಕೊಳ್ಳಲು ಸಹಾಯ ಮಾಡಿ. ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ. ದೋಷಗಳನ್ನು ಸರಿಪಡಿಸಿ.

ಪ್ರಯೋಜನಗಳೇನು?

- ಓದುವ ಪ್ರಕ್ರಿಯೆಯಿಂದ ಮಕ್ಕಳಲ್ಲಿ ಏಕಾಗ್ರತೆ ಹೆಚ್ಚುತ್ತದೆ.
- ಶಬ್ದಭಂಡಾರ ವಿಸ್ತಾರಗೊಳ್ಳುತ್ತದೆ.
- ಅರಿವಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
- ಸೃಜನಶೀಲತೆ ಹೆಚ್ಚಿ, ಕಲ್ಪನಾಶಕ್ತಿ ವೃದ್ಧಿಯಾಗುತ್ತದೆ.
- ಮಕ್ಕಳ ಸಂವಹನ ಶಕ್ತಿ ಉತ್ತಮಗೊಳ್ಳುತ್ತದೆ.

ಪಿಎಚ್‌.ಡಿ ಮಾಡುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **1. ಎಂಎ (ಕನ್ನಡ) ಮಾಡುತ್ತಿದ್ದು, ಮುಂದೆ ಪಿಎಚ್‌.ಡಿ ಮಾಡಬೇಕು. ದಯವಿಟ್ಟು ಮಾರ್ಗದರ್ಶನ ನೀಡಿ.**
ಹೆಸರು, ಊರು ತಿಳಿಸಿಲ್ಲ.
ಸಾಮಾನ್ಯವಾಗಿ, ಪಿಎಚ್‌ಡಿ ಮಾಡಲು ಪ್ರಕ್ರಿಯೆ ಹೀಗಿರುತ್ತದೆ:
- ಪಿಎಚ್‌.ಡಿಗೆ ಅಗತ್ಯವಾದ ಸಂಶೋಧನೆಯ ವಿಷಯವನ್ನು ನಿರ್ಧರಿಸುವುದು ಸುಲಭವಲ್ಲ. ವಿಷಯದ ಪ್ರಸ್ತುತತೆ, ವಿಷಯದ ಕುರಿತು ಸ್ವಾಭಾವಿಕವಾದ ಒಲವು ಮತ್ತು ಪ್ರೇರಣೆಯ ಜೊತೆಗೆ ಮಾರ್ಗದರ್ಶಕರ ಸಕಾರಾತ್ಮಕ ಅಭಿಪ್ರಾಯ ಮತ್ತು ಬೆಂಬಲವಿರಬೇಕು. ಹಾಗಾಗಿ, ವಿಷಯದ ಕುರಿತು ಪ್ರಾಥಮಿಕ ಸಂಶೋಧನೆ ಅಗತ್ಯ.
- ಪಿಎಚ್‌.ಡಿ ಕೋರ್ಸಿನಲ್ಲಿ ನೀವು ಮಾಡುವ ಸಂಶೋಧನೆ ಕುರಿತ ಸುದೀರ್ಘ ಪ್ರಸ್ತಾವನೆಯನ್ನು ತಯಾರಿಸಬೇಕು. ಇದರ ಆಧಾರದ ಮೇಲೆ ವಿಶ್ವವಿದ್ಯಾಲಯದ ಅನುಮತಿ ಸಿಗುತ್ತದೆ.
- ವಿಶ್ವವಿದ್ಯಾಲಯಗಳು ಪ್ರತಿ ವರ್ಷದ ಪಿಎಚ್‌.ಡಿ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಅವಕಾಶಗಳನ್ನು ಹೊಂದಿರುತ್ತವೆ. ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪ್ರವೇಶ ಪರೀಕ್ಷೆಗಳು, ಸಂದರ್ಶನಗಳು ಮತ್ತು ಸಂಶೋಧನಾ ಪ್ರಸ್ತಾವನೆಯ ಮೌಲ್ಯಮಾಪನ ಇತ್ಯಾದಿ ಪ್ರಕ್ರಿಯೆಗಳಿರುತ್ತದೆ.
- ಪಿಎಚ್‌.ಡಿ ಕೋರ್ಸಿಗೆ ಆಯ್ಕೆಯಾದ ನಂತರ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧವನ್ನು (ಥೀಸಿಸ್) ಬರೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಇದಲ್ಲದೆ, ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಬೇಕು.
- ನೀವು ಸಲ್ಲಿಸಿದ ಮಹಾಪ್ರಬಂಧವನ್ನು ವಿಷಯತಜ್ಞರ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ.
- ಮಹಾಪ್ರಬಂಧವನ್ನು ವಿಶ್ವವಿದ್ಯಾಲಯ ಸ್ವೀಕಾರ ಮಾಡಿದ ನಂತರ ಪಿಎಚ್‌.ಡಿ ಪದವಿಯನ್ನು ನೀಡಲಾಗುತ್ತದೆ. ಈ ಪ್ರಕ್ರಿಯೆಗೆ 3-5 ವರ್ಷ ಬೇಕಾಗಬಹುದು. ಪ್ರತಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳು, ಶುಲ್ಕಗಳು, ವಿದ್ಯಾರ್ಥಿ ವೇತನ, ಅನುದಾನ ಇತ್ಯಾದಿಗಳು ವಿಭಿನ್ನವಾಗಿರುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ವೀಕ್ಷಿಸಿ: https://www.youtube.com/watch?v = Mb4PKUb35_Q

- **2. ನಾನು ಬಿಕಾಂ ಮಾಡುತ್ತಿದ್ದು ಮುಂದೆ ಎಂಬಿಎ ಮಾಡಿದರೆ ಉದ್ಯೋಗಾವಕಾಶಗಳು ಹೇಗಿವೆ?**
ಹೆಸರು, ಊರು ತಿಳಿಸಿಲ್ಲ.
ಉದ್ಯಮಗಳ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸಿನಲ್ಲಿ ನೀಡಲಾಗುತ್ತದೆ. ಇದಲ್ಲದೆ, ಉದ್ಯಮಗಳಲ್ಲಿ ಪ್ರಾಯೋಗಿಕವಾದ ತರಬೇತಿಯನ್ನು ಪ್ರಾಜೆಕ್ಟ್‌ಗಳ ಮುಖಾಂತರ ನೀಡುವುದರಿಂದ ಕಲಿಕೆ ಪರಿಪೂರ್ಣವಾಗುತ್ತದೆ. ನಿಮ್ಮ ನೈಪುಣ್ಯ ಮತ್ತು ಚತುರತೆ ವರ್ಧಿಸಿ, ಯಾವುದೇ ಕೆಲಸವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ. ಒಟ್ಟಾರೆ, ಎಂಬಿಎ ಕಲಿಕೆಯ ವೈವಿಧ್ಯತೆಗಳಿಂದ ನಿಮ್ಮ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯಾಗಿ, ಆಕರ್ಷಕವಾದ ಉದ್ಯೋಗಾವಕಾಶಗಳಿವೆ. ಹೆಚ್ಚಿನ ಮಾಹಿತಿಗಾಗಿ ವೀಕ್ಷಿಸಿ: https://www.youtube.com/watch?v = 1TcHjPKJ1gw

ವಿದ್ಯಾರ್ಥಿ ವೇತನ ಕೈಪಿಡಿ

ಆಸ್ಪೈರ್ ಸ್ಕಾಲರ್‌ಷಿಪ್

ಡಾ. ಅಜಯ್ ಚೌಧರಿ ಮತ್ತು ಅವರ ಕುಟುಂಬದಿಂದ ಸ್ಥಾಪನೆಗೊಂಡ ಲಾಭೇತರ ಸಂಸ್ಥೆಯಾಗಿದೆ. ಪ್ರತಿಷ್ಠಿತ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ಬಿ.ಟೆಕ್ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡುವ ಗುರಿ ಹೊಂದಿದೆ.

ಅರ್ಹತೆ: ಬಿ.ಟೆಕ್. ಮೊದಲ ವರ್ಷದ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 6 ಲಕ್ಷಗಳನ್ನು ಮೀರಬಾರದು.

ಆರ್ಥಿಕ ನೆರವು: ಬೋಧನಾ ಶುಲ್ಕಗಳು, ಹಾಸ್ಟೆಲ್ ಶುಲ್ಕಗಳು, ಆಹಾರ ಮತ್ತು ಸಂಬಂಧಿತ ವೆಚ್ಚಗಳಂತಹ ಶೈಕ್ಷಣಿಕ ಖರ್ಚುಗಳನ್ನು ಸರಿದೂಗಿಸಲು ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 20-09-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/ASPI2

ಕೋಟಕ್ ಕನ್ಯಾ ಸ್ಕಾಲರ್‌ಷಿಪ್

ಕಡಿಮೆ-ಆದಾಯ ಹೊಂದಿರುವ ಕುಟುಂಬಗಳಿಗೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಂದ ಕೋಟಕ್ ಕನ್ಯಾ ಸ್ಕಾಲರ್‌ಶಿಪ್ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಅರ್ಹತೆ: ಭಾರತದಾದ್ಯಂತದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಅಥವಾ ತತ್ಸಮಾನ ಸಿಜಿಪಿಎಯನ್ನು ಗಳಿಸಿರಬೇಕು.

ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ₹ 6,00,000ಕ್ಕಿಂತ ಕಡಿಮೆ ಇರಬೇಕು.

ಮಾನ್ಯತೆ ಪಡೆದ ಎನ್‌ಆರ್‌ಎಫ್/ ಎನ್‌ಎಎಸಿ ಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ 2024-25 ಶೈಕ್ಷಣಿಕ ವರ್ಷದಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಬಿಡಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷಗಳು), ಬಿ.ಎಸ್‌ಸಿ ನರ್ಸಿಂಗ್, ಬಿ.ಫಾರ್ಮಸಿ, ಇಂಟಿಗ್ರೇಟೆಡ್ ಬಿಎಸ್-ಎಂಎಸ್/ಬಿಎಸ್-ರಿಸರ್ಚ್ ಇನ್ ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ (ಡಿಸೈನ್, ಆರ್ಕಿಟೆಕ್ಚರ್, ಇತ್ಯಾದಿ) ಇತರ ವೃತ್ತಿಪರ ಕೋರ್ಸ್‌ಗಳಿಗೆ ಮೊದಲ ವರ್ಷಕ್ಕೆ ಪ್ರವೇಶ ಪಡೆದಿರಬೇಕು.

ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಮಾತ್ರ ಈ ಸ್ಕಾಲರ್‌ಷಿಪ್‌ಗೆ ಅರ್ಹರಾಗಿರುತ್ತಾರೆ.

ಆರ್ಥಿಕ ಸಹಾಯ: ವರ್ಷಕ್ಕೆ ₹1.5 ಲಕ್ಷ ಮಾತ್ರ

ಅರ್ಜಿ ಸಲ್ಲಿಸಲು ಕೊನೆ ದಿನ:30-09-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/praja/KKGS3

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

13) 1861ರಲ್ಲಿ 'ಪೊಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೇ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯವಾಯಿತು. ಆದರೆ ಅದರಲ್ಲಿದ್ದ ಪ್ರಮುಖ ದೋಷ ಯಾವುದಾಗಿತ್ತು?
ಎ) ಪೊಲೀಸ್ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ.
ಬಿ) ಈ ಕಾಯ್ದೆ ಮುಸ್ಲಿಂರಿಗೆ ಮಾತ್ರ ಅನ್ವಯಿಸುತಿತ್ತು.
ಸಿ) ಇದು ಕೇವಲ ಹಿಂದುಗಳಿಗೆ ಮಾತ್ರ ಅನ್ವಯವಾಗುತಿತ್ತು
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಎ

14) ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಸೈನ್ಯದಲ್ಲಿ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಯಾವುದು?
ಎ) ಸುಬೇದಾರ್ ಬಿ) ಕಾರಕೂನ್
ಸಿ) ಲೆಫ್ಟಿನೆಂಟ್ ಡಿ) ಮೇಲಿನ ಎಲ್ಲವೂ
ಉತ್ತರ:– ಎ

15) ಬ್ರಿಟಿಷರು ಬಂಗಾಳ ಪ್ರಾಂತ್ಯವನ್ನು ತಮ್ಮ ಕೇಂದ್ರವಾಗಿಟ್ಟುಕೊಂಡರು. ಈಸ್ಟ್ ಇಂಡಿಯಾ ಕಂಪೆನಿಯು ಬ್ರಿಟಿಷ್ ಸರ್ಕಾರಕ್ಕೆ ವಾರ್ಷಿಕವಾಗಿ ಎಷ್ಟು ಪೌಂಡ್‌ಗಳನ್ನು ಪಾವತಿಸಬೇಕಿತ್ತು.
ಎ) ಹತ್ತು ಲಕ್ಷ ಬಿ) ಇಪ್ಪತ್ತು ಲಕ್ಷ
ಸಿ) ಒಂದು ಲಕ್ಷ ಡಿ) ನಾಲ್ಕು ಲಕ್ಷ
ಉತ್ತರ:– ಡಿ

16) ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಏನೆಂದು ಕರೆಯಲಾಯಿತು?
ಎ) ರೈತವಾರಿ ಪದ್ಧತಿ ಬಿ) ಮಹಲ್‌ವಾರಿ ಪದ್ಧತಿ
ಸಿ) ಖಾಯಂ ಜಮೀನ್ದಾರಿ ಪದ್ಧತಿ ಡಿ) ಪ್ರಗತಿವಾದಿ ಪದ್ಧತಿ
ಉತ್ತರ:– ಸಿ

17) ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಯಾರೂ ಹೇಳಿದ್ದರು?
ಎ) ಚಾರ್ಲ್ಸ್ ಮೆಟಕಾಫ್ ಬಿ) ಲಾರ್ಡ್ ಮಿಂಟೋ
ಸಿ) ಆರ್‌ಸಿ ಮುಜುಮದಾರ್ ಡಿ) ಆರ್‌ಸಿ ದತ್
ಉತ್ತರ:– ಎ

18) ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಎಲ್ಲಿ ಜಾರಿಗೊಳಿಸಲಾಗಿತ್ತು?
ಎ) ಕರ್ನಾಟಕ ಬಿ) ಬಾರಮಹಲ್
ಸಿ) ಜಮ್ಮು ಡಿ) ತಮಿಳುನಾಡು
ಉತ್ತರ:– ಬಿ

19) ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದ ಕಂದಾಯ ಪದ್ಧತಿ ಯಾವುದು?
ಎ) ರೈತವಾರಿ. ಬಿ) ಮಹಲವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.
ಉತ್ತರ:– ಎ

20) ಕೆಳಗಿನವುಗಳನ್ನು ಗಮನಿಸಿ
1) ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು.
2) ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.
3) ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು.
ಮೇಲೆ ಹೇಳಿದ ಲಕ್ಷಣಗಳು ಯಾವ ಕಂದಾಯ ಪದ್ಧತಿಗೆ ಸೇರಿದ್ದವು?
ಎ) ರೈತವಾರಿ. ಬಿ) ಮಹಲವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.
ಉತ್ತರ:– ಎ

21) ಈ ದೋಷಗಳನ್ನು ಗಮನಿಸಿ
1) ಭೂಕಂದಾಯವನ್ನು ಈ ಪದ್ಧತಿಯು ಹೆಚ್ಚಿನ ವಾರ್ಷಿಕ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು.
2) ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತಿದ್ದರು.
3) ಬೆಳೆಗಳು ಸರಿಯಾಗಿ ಫಸಲು ನೀಡದ ಸಂದರ್ಭದಲ್ಲಿ ರೈತರು ಹಣದ ಲೇವಾದೇವಿಗಾರರಿಂದ (Money Lender) ಸಾಲ ತೆಗೆದುಕೊಂಡು, ಮರು ಪಾವತಿಸಲಾಗದೆ ಅವರಿಗಿದ್ದ ಸಣ್ಣ ಪುಟ್ಟ ಜಮೀನನ್ನು ಮಾರಾಟ ಮಾಡುವಂತಾಯಿತು.
4) ರೈತರ ಒಳಿತಿಗಾಗಿ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ ಎನ್ನುವುದು ವಿಪರ್ಯಾಸ
ಈ ದೋಷಗಳು ಯಾವುದಕ್ಕೆ ಸಂಬಂಧಿಸಿದೆ?
ಎ) ಮಹಲವಾರಿ ಬಿ) ರೈತವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.
ಉತ್ತರ:– ಬಿ

22) ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?
ಎ) ವಾರನ್ ಹೇಸ್ಟಿಂಗ್ಸ್. ಬಿ) ಮಿಂಟೋ
ಸಿ) ಡಫರಿನ್ ಡಿ) ಕಾರ್ನ್ ವಾಲೀಸ್
ಉತ್ತರ:– ಎ

23) 1781ರಲ್ಲಿ 'ಕಲ್ಕತ್ತಾ ಮದರಸಾ'ವನ್ನು ಪ್ರಾರಂಭಿಸಲಾಯಿತು ಹಾಗಾದರೆ 1792ರಲ್ಲಿ ಜೊನಾಥನ್ ಡಂಕನ್ ಎಂಬ ಬ್ರಿಟಿಷ್ ವ್ಯಕ್ತಿಯು ಪ್ರಯತ್ನದಿಂದ ಸಂಸ್ಕೃತ ಕಾಲೇಜು ಎಲ್ಲಿ ಆರಂಭವಾಯಿತು?
ಎ) ಬನಾರಸ್ ಬಿ) ಚೆನ್ನೈ
ಸಿ) ಮುಂಬೈ ಡಿ) ಮೈಸೂರು
ಉತ್ತರ:– ಎ

24) ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಯಾರನ್ನು ಕಾನೂನು ಸದಸ್ಯನನ್ನಾಗಿ ಬೆಂಟಿಂಕ್‌ನು ನೇಮಕ ಮಾಡಿದನು?
ಎ) ಮೆಟ್ಕಾಫ್ ಬಿ) ಜೋನಾಥ್ ಡೆಂಕನ್
ಸಿ) ಮೆಕಾಲೆ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಸಿ

25) 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾರು ವರದಿಯನ್ನು ನೀಡಿದನು? (ಮುಂದೆ ಇದೇ ವರದಿಯೇ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು)
ಎ) ಪೀಲ್ ಬಿ) ಮೆಕಾಲೆ
ಸಿ) ಸ್ಟಾಲಿನ್ ಡಿ) ಜೋಸೆಫ್
ಉತ್ತರ:– ಬಿ

26) ಯಾರ ಯೋಜನೆಯ ಪ್ರಮುಖ ಅಂಶವು "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು". ಆಗಿತ್ತು?
ಎ) ಮೆಟ್ಕಾಫ್ ಬಿ) ಜೋನಾಥ್ ಡೆಂಕನ್
ಸಿ) ಮೆಕಾಲೆ ಡಿ) ಪೀಲ್
ಉತ್ತರ:– ಸಿ

27) ....(1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು, 1857ರಲ್ಲಿ ಸ್ಥಾಪಿಸಿದನು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

5. **A metal rod of length 10 cm and a rectangular cross-section of $1\,cm \times \frac{1}{2}\,cm$ is connected to a battery across opposite faces. The resistance will be –**
a) maximum when the battery is connected across $1\,cm \times \frac{1}{2}\,cm$ faces.
b) maximum when the battery is connected across 10 cm X 1 cm faces.
c) maximum when the battery is connected across $10\,cm \times \frac{1}{2}\,cm$ faces.
d) same irrespective of the three faces.

6. **Which of the following characteristics of electrons determines the current in a conductor?**
a) Draft velocity alone.
b) Thermal velocity alone.
c) Both drift velocity and thermal velocity.
d) Neither drift nor thermal velocity.

Answers:-1)b, 2)a, 3)c, 4)b, 5)a, 6)a

Problems:-

1. **Calculate the current in branch *PQ, QS, PS, QR* and *SR* of the given circuit.**



Soln:- **STEP 1.** Use junction law to mark currents in the network as shown in the figure given below.



STEP 2.
Applying *loop law to* **PQSP**, we get
$-10I_1 - 5I_2 + 5(I - I_1) = 0$
$-15I_1 - 5I_2 + 5I = 0$
(or) $-3I_1 - I_2 + I = 0$ ....(i)
Applying loop law to **QRSQ,** we get
$-5(I_1 - I_2) + 10(I - I_1 + I_2) + 5I_2 = 0$
$-15I_1 + 20I_2 + 10I = 0$
(or) $-3I_1 + 4I_2 + 2I = 0$ ....(ii)

Applying loop law to **PQRTUP,**
we get $-10I_1 - 5(I_1 - I_2) - 10I + 10 = 0$
(or) $-15I_1 + 5I_2 - 10I = -10$
(or) $-3I_1 + I_2 - 2I = -2$ ....(iii)
Adding equation (ii) and (iii), we get
$-6I_1 + 5I_2 = -2$ .... (iv)
Multiplying equation (i) by 2 and then adding to equation (iii), we get, $-9I_1 - I_2 = -2$
(or) $I_2 = 2 - 9I_1$ ....(v)
Putting this in equation (iv);
$-6I_1 + 5(2 - 9I_1) = -2$
(or) $-51I_1 = -12$

Current in PQ, $I_1 = \frac{4}{17}A$

Putting this in equation (v),

Current in QS,
$I_2 = 2 - \left(9 \times \frac{4}{17}\right) = -\frac{2}{17}A$

Negative sign shows that actual direction of current is from S to Q
From equation (i),

Main Current, $I = 3I_1 + I_2$
$= 3 \times \frac{4}{17} - \frac{2}{17} = \frac{10}{17}A$

Current in PS,
$I - I_1 = \frac{10}{17} - \frac{4}{17} = \frac{6}{17}A$

Current in QR,
$I_1 - I_2 = \frac{4}{17} - \left(\frac{-2}{17}\right) = \frac{6}{17}A$

Current in SR,
$I - I_1 + I_2 = \frac{10}{17} - \frac{4}{17} + \left(-\frac{2}{17}\right) = \frac{4}{17}A$

2. **Calculate the currents in the two resistances shown in the figure.**



Soln:- Applying Kirchhoff's loop law to the closed loop *ABCDA;*
$-2i_1 - 1.5 - 3i_2 + 3 = 0$
(or) $2i_1 + 3i_2 = 1.5$ ....(i)
Current i_1 and i_2 are due to the net effect of two sources of e.m.f. and resistances 2 Ω and 3 Ω are in series, so $i_1 = i_2 = I$ ....(ii)
∴ Using equation (ii), eqn. (i) becomes
$2i + 3i = 1.5$ (or) $5i = 1.5$
(or) $i = \frac{1.5}{5}$
∴ $i = 0.3$ A
Hence $i_1 = i_2 = 0.3$ A

3. **Obtain the total resistance between the terminals A and B of the given network.**

(Contd........)

ಮಾನವ ಸರಪಳಿಗೆ ಗಜಪಡೆ ಸಾಥ್‌... ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಮೈಸೂರಿನ ಅರಮನೆ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಭಾನುವಾರ ನಡೆದ ಮಾನವ ಸರಪಳಿಯಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ದಸರಾ ಆನೆಗಳು ಪಾಲ್ಗೊಂಡವು– ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜ್ (ಎಡಚಿತ್ರ) ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರು ಮಾನವ ಸರಪಳಿ ಅಭಿಯಾನದಲ್ಲಿ ಭಾಗವಹಿಸಿದರು –ಪ್ರಜಾವಾಣಿ ಚಿತ್ರ

ಬಹುತ್ವದ ರಕ್ಷಣೆಗೆ ಎದ್ದುನಿಲ್ಲಿ: ಸಿ.ಎಂ

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ • ಏಕತೆಯ ಹೆಸರಿನಲ್ಲಿ ಬಹುತ್ವದ ನಾಶಕ್ಕೆ ಯತ್ನ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವವು ಬಹುತ್ವವನ್ನು ಪ್ರತಿಪಾದಿಸುತ್ತದೆ. ಆದರೆ, ಇಂದು ಏಕತೆಯ ಹೆಸರಿನಲ್ಲಿ ಬಹುತ್ವದ ನಾಶಕ್ಕೆ ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ಯತ್ನಿಸುತ್ತಿವೆ. ಬಹುತ್ವದ ರಕ್ಷಣೆಗೆ ನಾವೆಲ್ಲರೂ ನಿಲ್ಲಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಮಾನವ ಸರಪಳಿ ಕಾರ್ಯಕ್ರಮಕ್ಕೆ ವಿಧಾನಸೌಧದಲ್ಲಿ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

'ಸಮಾನತೆ, ಸಾಮಾಜಿಕ ನ್ಯಾಯ ವಿರೋಧಿಸುವವರು ಏಕತೆಯ ಬಣ್ಣದ ಮಾತುಗಳನ್ನು ಆಡುತ್ತಿದ್ದಾರೆ. ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವವು ವಿವಿಧತೆಯಲ್ಲಿ ಏಕತೆಯನ್ನು ಸಂಭ್ರಮಿಸುತ್ತದೆ. ಆದರೆ, ಬಿಜೆಪಿಯಂತಹ ಸಮಾನತೆ ವಿರೋಧಿ ಶಕ್ತಿಗಳು ವಿವಿಧತೆಯನ್ನು ನಾಶ ಮಾಡಿ, ಏಕತೆ ಸ್ಥಾಪನೆಗೆ ಮುಂದಾಗಿವೆ. ಈ ಶಕ್ತಿಗಳ ವಿರುದ್ಧ ನಾವು ಹೋರಾಡಬೇಕು' ಎಂದು ತಿಳಿಸಿದರು.

ಸಾಮಾಜಿಕ ಸಮಾನತೆ ಸಾಧ್ಯವಾದಾಗ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ ಎಂದು ಅಂಬೇಡ್ಕರ್ ಅವರು ಹೇಳಿದ್ದರು. ಅಸಮಾನತೆ ಮತ್ತು ತಾರತಮ್ಯ ಇರುವವರೆಗೂ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಆದರೆ, ಇದನ್ನು ಸಾಧಿಸುವ ಹಾದಿಗೆ ಕೆಲ ದುಷ್ಟಶಕ್ತಿಗಳು ಅಡ್ಡಿಯಾಗಿವೆ. ಅವರನ್ನು ತೊಡೆದುಹಾಕದೆ ಮಹಿಳೆಯರು, ದಲಿತರು ಮತ್ತು ಹಿಂದುಳಿದವರಿಗೆ ಸಮಾನ ಅವಕಾಶ ಸಿಗುವುದಿಲ್ಲ' ಎಂದರು.

'ಜನರಲ್ಲಿ ಸಮಾನತೆ ಮತ್ತು ಜಾತ್ಯತೀತ ಮನೋಭಾವಗಳನ್ನು ಬೆಳೆಸಲೆಂದೇ ಶಾಲಾ–ಕಾಲೇಜುಗಳಲ್ಲಿ ಸಂವಿಧಾನದ ಪ್ರಸ್ತಾವನೆ ಓದಿಸುವ ಕೆಲಸ ಮಾಡಲಾಗುತ್ತಿದೆ' ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರುಗಳಾದ ಎಚ್‌.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಮಾನವ ಸರಪಳಿಯಲ್ಲಿ ಭಾಗಿಯಾದರು.

ವಯನಾಡ್ ಜಿಲ್ಲಾಧಿಕಾರಿ ಭಾಗಿ: ಹಿರಿಯೂರು (ಚಿತ್ರದುರ್ಗ): ತಾಲ್ಲೂಕಿನ ಹರ್ತಿಕೋಟೆ ಗ್ರಾಮದಲ್ಲಿ ಭಾನುವಾರ ನಡೆದ ಮಾನವ ಸರಪಳಿ ರಚನೆ ಕಾರ್ಯಕ್ರಮದಲ್ಲಿ ಕೇರಳದ ವಯನಾಡ್‌ನ ಜಿಲ್ಲಾಧಿಕಾರಿ ಡಿ.ಆರ್. ಮೇಘಶ್ರೀ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದರು.

ಮೇಘಶ್ರೀ ಅವರ ಪತಿ ವಿಕ್ರಂ ಸಿಂಹ ಹರ್ತಿಕೋಟೆಯವರು. ಇವರು ವಯನಾಡ್ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಪತಿ ಹಾಗೂ ಪತ್ನಿ ಸಾಮಾನ್ಯರಂತೆ ಸಾಲಿನಲ್ಲಿ ಕೈ ಹಿಡಿದು ನಿಂತಿದ್ದು ಗಮನ ಸೆಳೆಯಿತು.

ಹೆಜ್ಜೇನು ದಾಳಿ: (ಲಕ್ಷ್ಮೇಶ್ವರ (ಗದಗ ಜಿಲ್ಲೆ): ತಾಲ್ಲೂಕಿನ ಬಾಲೆಹೊಸೂರು ಸಮೀಪ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂದಿರುಗುವ ವೇಳೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ ಹೆಜ್ಜೇನು ದಾಳಿ ನಡೆದಿದೆ.

ಹೆಜ್ಜೇನು ಏಕಾಏಕಿ ದಾಳಿ ಮಾಡಿದ್ದರಿಂದ ಗಲಿಬಿಲಿಗೊಂಡ ವಿದ್ಯಾರ್ಥಿಗಳು, ಶಿಕ್ಷಕರು ದಿಕ್ಕಾಪಾಲಾಗಿ ಓಡಿದರು. ಘಟನೆಯಲ್ಲಿ 15ರಿಂದ 20 ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಹೆಜ್ಜೇನು ಕಡಿದಿದ್ದು, ಲಕ್ಷ್ಮೇಶ್ವರ ತಾಲ್ಲೂಕಿನ ಶಿಗ್ಲಿ ಗ್ರಾಮದ ಶಿಕ್ಷಕಿ ಸರಸ್ವತಿ ಗುಡಿಸಾಗರ ಮತ್ತು ಸರೋಜಾ ದಿಂಡೂರು ಅವರಿಗೆ ಹೆಚ್ಚಿನ ಗಾಯಗಳಾಗಿವೆ.

ಸ್ವತಃ ವೈದ್ಯರಾದ ಶಿರಹಟ್ಟಿ ಮೀಸಲು ಕ್ಷೇತ್ರದ ಶಾಸಕ ಡಾ. ಚಂದ್ರು ಲಮಾಣಿ ಶಿಕ್ಷಕಿಯರನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಿದ್ದಾರೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭದ್ರತಾ ವೈಫಲ್ಯ: ಮುಖ್ಯಮಂತ್ರಿಯತ್ತ ನುಗ್ಗಿದ ಯುವಕ

ವಿಧಾನಸೌಧದ ಆವರಣದಲ್ಲಿ ಕಾರ್ಯಕ್ರಮ ನಡೆಯುವಾಗ ಯುವಕನೊಬ್ಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರತ್ತ ನುಗ್ಗಿದ ಘಟನೆ ನಡೆಯಿತು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರು ಮಾತನಾಡುತ್ತಿದ್ದ ವೇಳೆ ಮುಂಭಾಗದಿಂದ ಒಮ್ಮೆಗೇ ವೇದಿಕೆಗೆ ಜಿಗಿದ. ತಕ್ಷಣವೇ ಎಚ್ಚೆತ್ತ ಮುಖ್ಯಮಂತ್ರಿ ಭದ್ರತಾ ಸಿಬ್ಬಂದಿ ಯುವಕನನ್ನು, ಅಲ್ಲಿಯೇ ತಡೆದರು.

ಈ ಮಧ್ಯೆಯೇ ಆತ ಸಿದ್ದರಾಮಯ್ಯ ಅವರತ್ತ ಶಾಲು ಎಸೆದ. ಭದ್ರತಾ ಸಿಬ್ಬಂದಿ ಆತನನ್ನು ವೇದಿಕೆಯಿಂದ ಎಳೆದೊಯ್ದರು. ಸ್ಥಳದಲ್ಲೇ ಇದ್ದ ವಿಧಾನಸೌಧ ಭದ್ರತಾ ವಿಭಾಗದ ಪೊಲೀಸರು ಆತನನ್ನು ವಶಕ್ಕೆ ಪಡೆದರು. ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಚಾರದ ಗೀಳು, ಎರಡನೇ ಬಾರಿ ಕೃತ್ಯ: ಯುವಕನನ್ನು ಕನಕಪುರದ ಚಾಮುಂಡಿನಗರ ನಿವಾಸಿ ಮಹದೇವಪ್ಪ ನಾಯಕ (24) ಎಂದು ಗುರುತಿಸಲಾಗಿದೆ. ಬೆಂಗಳೂರಿನ ವಾಹನ ಮಾರಾಟ ಮಳಿಗೆಯೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿರುವ ಆತ, 'ನಾನು ಸಿದ್ದರಾಮಯ್ಯ ಅವರ ಅಭಿಮಾನಿ. ಅವರಿಗೆ ಶಾಲು ಹಾಕಲು ವೇದಿಕೆ ಹತ್ತಿದೆ' ಎಂದು ಹೇಳಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'7ನೇ ವೇತನ ಆಯೋಗ ಜಾರಿ ಸಂಬಂಧ ಸರ್ಕಾರಿ ನೌಕರರ ಸಂಘವು ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಮುಖ್ಯಮಂತ್ರಿ ಸನ್ಮಾನ ಕಾರ್ಯಕ್ರಮದಲ್ಲೂ ಈತ ಇದೇ ರೀತಿ ವೇದಿಕೆಗೆ ನುಗ್ಗಿದ್ದ. ಆಗ ಸದಾಶಿವನಗರ ಠಾಣೆ ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದರು. ವಿಚಾರಣೆ ವೇಳೆ ಮಾನಸಿಕ ಸ್ಥಿಮಿತ ಇದ್ದಂತೆ ಕಾಣಲಿಲ್ಲ. ಹೀಗಾಗಿ ಆತನ ತಂದೆಯನ್ನು ಕರೆಸಿ, ಚಿಕಿತ್ಸೆ ನೀಡುವಂತೆ ಸೂಚಿಸಲಾಗಿತ್ತು. ನಂತರ ಬಿಟ್ಟು ಕಳುಹಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆ ನೀಡಿದ್ದ ಪಾಸ್ ಬಳಸಿಯೇ ಆತ ವಿಧಾನಸೌಧ ಆವರಣ ಪ್ರವೇಶಿಸಿದ್ದಾನೆ. ಆತನ ಬಳಿ ಅಪಾಯಕಾರಿ ವಸ್ತುಗಳು ಪತ್ತೆ ಆಗಿಲ್ಲ. ಆದರೆ, ಪದೇ–ಪದೇ ಇಂತಹ ಕೃತ್ಯ ಎಸಗಿರುವ ಕಾರಣ ಆತನನ್ನು ವಶದಲ್ಲೇ ಇರಿಸಿಕೊಳ್ಳಲಾಗಿದೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಮತ್ತು ಅತಿಕ್ರಮ ಪ್ರವೇಶ ಮಾಡಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುವುದು' ಎಂದೂ ಮಾಹಿತಿ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿದ್ದ ವೇದಿಕೆಯತ್ತ ನುಗ್ಗಿದ ಯುವಕ

'ಮಾನವ ಹಕ್ಕುಗಳ ಹರಣ'

ಬೀದರ್: 'ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರವು ಹಾಸ್ಟೆಲ್‌ನಲ್ಲಿರುವ ದಲಿತ ಹೆಣ್ಣು ಮಕ್ಕಳನ್ನು ರಸ್ತೆಗೆ ನಿಲ್ಲಿಸಿ, ಮಾನವ ಸರಪಳಿ ನಿರ್ಮಿಸಿ ಮಾನವ ಹಕ್ಕುಗಳ ಹರಣ ಮಾಡಿದೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಹಾಸ್ಟೆಲ್, ಶಾಲೆಗಳಿಂದ ಮಕ್ಕಳನ್ನು ಕರೆದೊಯ್ದು ರಸ್ತೆಗೆ ನಿಲ್ಲಿಸಿದ್ದಾರೆ. ನಿಜವಾಗಲೂ ಪ್ರಜಾಪ್ರಭುತ್ವದ ಬಗ್ಗೆ ಗೌರವವಿದ್ದರೆ ಕಾಂಗ್ರೆಸ್ ಕಾರ್ಯಕರ್ತರನ್ನು ಕರೆದೊಯ್ಯಬೇಕಿತ್ತು ಎಂದು ನಗರದಲ್ಲಿ ಭಾನುವಾರ ನಡೆದ ಬಿಜೆಪಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.

ಧಾರವಾಡ ಜಿಲ್ಲೆ ರಾಜ್ಯಕ್ಕೆ ಪ್ರಥಮ

ಧಾರವಾಡ: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಾನವ ಸರಪಳಿ ಕಾರ್ಯಕ್ರಮಕ್ಕೆ ಆನ್‌ಲೈನ್ ನೋಂದಣಿಯಲ್ಲಿ ರಾಜ್ಯದಲ್ಲಿ ಧಾರವಾಡ ಜಿಲ್ಲೆ ಪ್ರಥಮ ಸ್ಥಾನ ಪಡೆದಿದೆ.

'ಜಿಲ್ಲೆಯಲ್ಲಿ ಆನ್‌ಲೈನ್‌ನಲ್ಲಿ ಒಟ್ಟು 3.57 ಲಕ್ಷ ಮಂದಿ ನೋಂದಾಯಿಸಿಕೊಂಡಿದ್ದರು. ರಾಜ್ಯದ 31 ಜಿಲ್ಲೆಗಳಿಂದ ಒಟ್ಟು 25 ಲಕ್ಷಕ್ಕೂ ಹೆಚ್ಚು (25,35,223) ಜನರು ನೋಂದಾಯಿಸಿಕೊಂಡಿದ್ದಾರೆ. ಈ ಪೈಕಿ ಧಾರವಾಡ ಜಿಲ್ಲೆಯಲ್ಲಿ ಅತಿ ಹೆಚ್ಚು ನೋಂದಣಿಯಾಗಿದೆ. ಜಿಲ್ಲೆಯಲ್ಲಿ ಭಾನುವಾರ 55 ಕಿ.ಮೀ ಮಾನವ ಸರಪಳಿ ಕಾರ್ಯಕ್ರಮದಲ್ಲಿ 95 ಸಾವಿರ ಮಂದಿ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದರು' ಎಂದು ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ದೇವರಾಜ ಅರಸರಿಂದ ಲಿಂಗಾಯತರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಅರವಿಂದ ಬೆಲ್ಲದ

ಸಿಂಧನೂರು (ರಾಯಚೂರು ಜಿಲ್ಲೆ): 'ಹಾವನೂರ ಆಯೋಗದ ವರದಿ ಆಧಾರದ ಮೇಲೆ ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರು ಹಿಂದುಳಿದ ವರ್ಗದ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಿ ಮಹತ್ಕಾರ್ಯ ಮಾಡಿದರು. ಆದರೆ ಲಿಂಗಾಯತರಿಗೆ ಭೂಮಿಯುಳ್ಳವರು, ಆರ್ಥಿಕವಾಗಿ ಸದೃಢರೆನ್ನುವ ಕಾರಣದಿಂದ ಮೀಸಲಾತಿ ಕೊಡದೆ ನಮ್ಮ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಟೀಕಿಸಿದರು.

ತಾಲ್ಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದಿಂದ ಭಾನುವಾರ ನಗರದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಕಂಚಿನ ಪುತ್ಥಳಿ ಅನಾವರಣ ಹಾಗೂ ಚನ್ನಮ್ಮ ವೃತ್ತದ ಉದ್ಘಾಟನೆಯ ನಂತರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಸ್ಲಿಮರು ಹಿಂದುಳಿದ ಪ್ರವರ್ಗ-1, 2ಎ ಮತ್ತು 2ಬಿ ಮೂರರಲ್ಲಿಯೂ ಮೀಸಲಾತಿ ಪಡೆಯುತ್ತಿದ್ದು, ಅವರಿಗೆ ಶೇ 23ರಷ್ಟು ಪಾಲು ಲಭಿಸುತ್ತಿತ್ತು. ಇದೇ ಕಾರಣಕ್ಕೆ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಶೇ 4 ಮೀಸಲಾತಿಯನ್ನು ರದ್ದುಪಡಿಸಿ ಇತರ ವರ್ಗಗಳಿಗೆ ನೀಡಲಾಯಿತು' ಎಂದು ಅವರು ಸ್ಮರಿಸಿದರು.

ಬಿಜೆಪಿ ಸತ್ಯಶೋಧನಾ ಸಮಿತಿ ಇಂದು ನಾಗಮಂಗಲಕ್ಕೆ

ಪ್ರಜಾವಾಣಿ ವಾರ್ತೆ

ಅಶ್ವತ್ಥ ನಾರಾಯಣ

ಬೆಂಗಳೂರು: 'ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣಪತಿ ಮೂರ್ತಿ ವಿಸರ್ಜನೆ ವೇಳೆ ನಡೆದಿರುವ ಗಲಭೆ ಕುರಿತು ಸತ್ಯಾಂಶ ಅರಿಯಲು ಬಿಜೆಪಿ ರಾಜ್ಯ ಘಟಕ ರಚಿಸಿರುವ ತಮ್ಮ ನೇತೃತ್ವದ ಸತ್ಯಶೋಧನಾ ಸಮಿತಿ ಸೋಮವಾರ ಸ್ಥಳಕ್ಕೆ ಭೇಟಿ ನೀಡಲಿದೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಶಾಸಕ ಬೈರತಿ ಬಸವರಾಜ, ಮಾಜಿ ಸಚಿವ ಕೆ.ಸಿ. ನಾರಾಯಣ ಗೌಡ, ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಲಕ್ಷ್ಮೀ ಅಶ್ವಿನ್ ಗೌಡ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ ರಾವ್ ಸಮಿತಿಯಲ್ಲಿದ್ದಾರೆ' ಎಂದರು.

'ನಾಗಮಂಗಲ ಘಟನೆಗೆ ಪೊಲೀಸರ ವೈಫಲ್ಯ ಕಾರಣ ಎಂದು ಸಾಬೀತಾಗಿದೆ. ಆರಂಭದಲ್ಲಿ ಘಟನೆ ಕುರಿತು ಸರ್ಕಾರ ಹಗುರವಾಗಿ ಪ್ರತಿಕ್ರಿಯಿಸಿತ್ತು. ಗುಪ್ತಚರ ವಿಭಾಗದ ಮುಖ್ಯಸ್ಥರ ವರ್ಗಾವಣೆ ಮೂಲಕ ವೈಫಲ್ಯ ಒಪ್ಪಿಕೊಂಡಿದೆ' ಎಂದು ಹೇಳಿದರು.

'ಕಾಂಗ್ರೆಸ್ ಸರ್ಕಾರ ಒಂದು ಧರ್ಮದ ಜನರ ಪರ ಕೆಲಸ ಮಾಡುತ್ತಿದೆ. ಒಂದು ಕೋಮಿನವರ ಪ್ರಚೋದನೆಯೇ ನಾಗಮಂಗಲದಲ್ಲಿ ಗಲಭೆಗೆ ಕಾರಣ' ಎಂದು ಆರೋಪಿಸಿದರು.

'ಶೀಘ್ರದಲ್ಲೇ ಜನಗಣತಿ ಪ್ರಕ್ರಿಯೆ ಆರಂಭ'

ಒಂದನೇ ಪುಟದಿಂದ...

ಜಾತಿಗಣತಿ ಕಾಲಂ ಕೂಡ ಇರಲಿದೆಯೇ ಎಂಬ ಪ್ರಶ್ನೆಗೆ, 'ಅದಿನ್ನೂ ತೀರ್ಮಾನವಾಗಿಲ್ಲ' ಎಂದು ಮೂಲಗಳು ಪ್ರತಿಕ್ರಿಯಿಸಿವೆ. ವಿವಿಧ ಪಕ್ಷಗಳು ಜಾತಿ ಗಣತಿಯೂ ಆಗಬೇಕು ಎಂದು ಒತ್ತಾಯಿಸಿವೆ.

ಹೊಸ ಅಂಕಿ ಅಂಶಗಳ ಅಲಭ್ಯತೆಯಿಂದಾಗಿ 2011ರ ಜನಗಣತಿ ಅಂಕಿ–ಅಂಶಗಳನ್ನು ಆಧರಿಸಿಯೇ ಸರ್ಕಾರದ ವಿವಿಧ ನೀತಿಗಳು ರೂಪುಗೊಳ್ಳುತ್ತಿದ್ದು, ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ.

ಅಧಿಕಾರಿಯೊಬ್ಬರ ಪ್ರಕಾರ, ಜನಗಣತಿ ಪ್ರಕ್ರಿಯೆಯನ್ನು ನಡೆಸಲು ಅಂದಾಜು ₹12 ಸಾವಿರ ಕೋಟಿಗೂ ಅಧಿಕ ವೆಚ್ಚವಾಗಬಹುದು. ಮುಂದೆ ನಡೆಯಲಿರುವ ಜನಗಣತಿಯು ಪ್ರಥಮ ಡಿಜಿಟಲ್ ಜನಗಣತಿ ಪ್ರಕ್ರಿಯೆಯೂ ಆಗಿರಲಿದೆ.

ಮನೆಗಳಿಗೇ ತೆರಳಿ, ಜನಗಣತಿಯ ಫಾರ್ಮ್ ಭರ್ತಿ ಮಾಡುವುದು ಸಹಜ ಪ್ರಕ್ರಿಯೆ. ಸ್ವ–ಸಮೀಕ್ಷೆಗೂ ಜನರಿಗೆ ಅವಕಾಶ ಕಲ್ಪಿಸಲಾಗುತ್ತಿದ್ದು, ಇದಕ್ಕಾಗಿಯೇ ಪೋರ್ಟಲ್ ಲಭ್ಯವಾಗಲಿದೆ. ಅಲ್ಲಿ ಮಾಹಿತಿ ತುಂಬುವವರು ಆಧಾರ್ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಪರ್ಕ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ.

ಜನಗಣತಿ ನೋಂದಣಿ ಪ್ರಧಾನ ಆಯುಕ್ತಾಲಯವು ಜನಗಣತಿ ಪ್ರಕ್ರಿಯೆಗಾಗಿ ಈಗಾಗಲೇ 31 ಪ್ರಶ್ನೆಗಳನ್ನು ಸಿದ್ಧಪಡಿಸಿದೆ. ಮೊಬೈಲ್ ಫೋನ್, ಇಂಟರ್‌ನೆಟ್ ಸಂಪರ್ಕವಿದೆಯೇ, ಸ್ಮಾರ್ಟ್‌ಫೋನ್ ಇದೆಯೇ, ಬೈಸಿಕಲ್, ಸ್ಕೂಟರ್, ಮೊಪೆಡ್ ಇವೆಯೇ, ನಾಲ್ಕುಚಕ್ರದ ವಾಹನವಿದೆಯೇ ಎಂಬ ಪ್ರಶ್ನೆಗಳು ಇದರಲ್ಲಿ ಸೇರ್ಪಡೆಯಾಗಿವೆ.

ಕಿರುಕುಳ ಆರೋಪ: ಎಫ್‌ಡಿಎ ಆತ್ಮಹತ್ಯೆ

ಒಂದನೇ ಪುಟದಿಂದ...

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಜ್ವಲ್ ಅವರ ತಾಯಿ, 'ನನ್ನ ಮಗನನ್ನು ಹಿರಿಯ ಅಧಿಕಾರಿಗಳು ಷಡ್ಯಂತ್ರ ಮಾಡಿ ಪ್ರಕರಣದಲ್ಲಿ ಸಿಲುಕಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

'ಕಳೆದ 6 ತಿಂಗಳುಗಳಿಂದ ಕಚೇರಿಯಲ್ಲಿ ಒತ್ತಡ ಎಂದು ಪತಿ ಹೇಳುತ್ತಿದ್ದರು' ಎಂದು ಶ್ರುತಿ ದೂರಿದ್ದಾರೆ.

ತಹಶೀಲ್ದಾರ್ ಪ್ರವೀಣ್ ಪ್ರತಿಕ್ರಿಯಿಸಿ, 'ಸೆ. 10ರಂದು ಖಜಾನೆಯಿಂದ ಬಿಲ್‌ವೊಂದು ನನ್ನ ಸಹಿ ತಾಳೆಯಾಗುತ್ತಿಲ್ಲ ಎಂದು ವಾಪಸ್ ಬಂದಿತ್ತು. ಅದು ಬಂದ ಕೂಡಲೇ ಗಲಿಬಿಲಿಗೊಂಡ ಪ್ರಜ್ವಲ್ ಕಚೇರಿಯಿಂದ ನಾಪತ್ತೆಯಾಗಿದ್ದರು. ನಂತರ ವಿಷ ತೆಗೆದುಕೊಂಡಿರುವುದು ತಿಳಿಯಿತು. ನಮ್ಮ ಸಿಬ್ಬಂದಿಯೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಸಹಿಯನ್ನು ಫೋರ್ಜರಿ ಮಾಡಿರುವ ಸಂಬಂಧ ಸೆ. 11ರಂದು ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗಿತ್ತು. ಬಿಲ್ ವಾಪಸ್ ಬಂದ ನಂತರ ಪ್ರಜ್ವಲ್ ಅವರನ್ನು ನಾವು ವಿಚಾರಣೆ ನಡೆಸಿಯೇ ಇಲ್ಲ. ಅವರ ಮೇಲೆ ಕೆಲಸದ ಒತ್ತಡವೂ ಇರಲಿಲ್ಲ. ಅವರ ಕುಟುಂಬದವರು ಮಾಡುತ್ತಿರುವ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾದವು' ಎಂದು ಹೇಳಿದರು.

ಡಿವಿಜಿ ಪ್ರಶಸ್ತಿ ಪ್ರದಾನ

ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ 'ಡಿವಿಜಿ ಬಳಗ ಪ್ರತಿಷ್ಠಾನ'ದಿಂದ ಲೇಖಕ ಸತ್ಯೇಶ್ ಎನ್.ಬೆಳ್ಳೂರು ಅವರಿಗೆ 2024ನೇ ಸಾಲಿನ 'ಡಿವಿಜಿ ಪ್ರಶಸ್ತಿ'ಯನ್ನು ಶಿಕ್ಷಣ ತಜ್ಞ ಗುರುರಾಜ ಕರಜಗಿ, ಕವಿ ಕೆ.ಸಿ.ಶಿವಪ್ಪ, ಸಂಚಾಲಕ ಸಿ.ಕನಕರಾಜು ಭಾನುವಾರ ಪ್ರದಾನ ಮಾಡಿದರು. ಅನಿತಾ ಬೆಳ್ಳೂರು, ಬಳಗದ ಸದಸ್ಯರಾದ ಸಮನ್ವಿತಾ, ಪ್ರೊ.ಶಂಕರ್ ಬೆಳ್ಳೂರು, ಡಾ.ವಿರೂಪಾಕ್ಷ ದೇವರಮನೆ, ಎಚ್.ಎ.ನಂದಿನಿ, ಗುರುರಾಜ ಕುಲಕರ್ಣಿ, ಸಮುದ್ಯತಾ, ಅರುಣ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಮನೋರಮಾ ಭಟ್ ನಿಧನ

ಮಂಗಳೂರು: ಲೇಖಕಿ ಮನೋರಮಾ ಎಂ. ಭಟ್ (92) ಅವರು ಭಾನುವಾರ ನಿಧನರಾದರು.

ದಕ್ಷಿಣ ಕನ್ನಡದ ಪುತ್ತೂರಿನಲ್ಲಿ 1932 ಜುಲೈ 15ರಂದು ಜನಿಸಿದ್ದ ಅವರು, ಸಣ್ಣ ಕತೆಗಾರ್ತಿಯಾಗಿ, ನಾಟಕಕಾರ್ತಿ, ಆಕಾಶವಾಣಿ ಕಲಾವಿದೆ, ರಂಗಕಲಾವಿದೆ, ಅಂಕಣಕಾರ್ತಿ, ಕವಯಿತ್ರಿಯಾಗಿ ಗುರುತಿಸಿಕೊಂಡಿದ್ದರು. ಸ್ವಯಂವರ ಮತ್ತು ಶಬ್ದಗಳಾಗದ ಧ್ವನಿಗಳು ಅವರ ಕಥಾಸಂಕಲನಗಳು. ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು, ವ್ಯಂಗ್ಯ ಬದುಕು (ಶಿಂಗಣ್ಣ ಖ್ಯಾತಿಯ ಕೆ. ರಾಮಕೃಷ್ಣ ಅವರ ಜೀವನ ಮತ್ತು ಸಾಧನೆ), ಮುಳಿಯರ ನೆನಪು (ಮುಳಿಯ ತಿಮ್ಮಪ್ಪಯ್ಯ ಜೀವನ ಸಾಧನೆ ಕುರಿತ ಲೇಖನಗಳ ಸಂಗ್ರಹ) ಕೃತಿಗಳನ್ನು ಅವರು ಸಂಪಾದಿಸಿದ್ದರು.

'ಹೆಣ್ಣಿಗೇಕೆ ಈ ಶಿಕ್ಷೆ?' ಎಂಬುದು ಅವರ ವೈಚಾರಿಕ ಬರಹ. ಅತ್ತಿಮಬ್ಬೆ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ, ಸಾಗರದ 'ಹೊಸಬಾಳೆ ಅನಂತಪ್ಪ ಸೇವಾ ಪುರಸ್ಕಾರ' ಪಡೆದಿದ್ದಾರೆ. ಮಂಗಳೂರು ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು.

ಅವರು ದಿ. ಪಂಡಿತ ಮುಳಿಯ ತಿಮ್ಮಪ್ಪಯ್ಯ ಅವರ ಸೊಸೆ, ವಕೀಲ ಮತ್ತು ಯಕ್ಷಗಾನ ವಿದ್ವಾಂಸ ದಿ.ಮುಳಿಯ ಮಹಾಬಲ ಭಟ್ಟ ಅವರ ಪತ್ನಿ. ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘದ ಪದಾಧಿಕಾರಿಯಾಗಿದ್ದ ಅವರು ಹೆಣ್ಣುಮಕ್ಕಳ ಹಕ್ಕುಗಳ ಬಗ್ಗೆ ಸದಾ ಧ್ವನಿ ಎತ್ತುತ್ತಿದ್ದರು.

ಅವರಿಗೆ ಇಬ್ಬರು ಪುತ್ರರಾದ ಜಯರಾಮ್ ಭಟ್ ಹಾಗೂ ಛಾಯಾಚಿತ್ರ ತಂತ್ರಜ್ಞ ಮಹೇಶ್ ಎಂ. ಇದ್ದಾರೆ.

ದಲಿತ ಯುವಕನಿಗೆ ಥಳಿತ: 6 ಮಂದಿ ಬಂಧನ

ಕೆರೂರ (ಬಾಗಲಕೋಟೆ ಜಿಲ್ಲೆ): ಉಗಲವಾಟ ಗ್ರಾಮದಲ್ಲಿ ದ್ಯಾಮವ್ವನ ಗುಡಿಗೆ ಹೋಗಿದ್ದಕ್ಕೆ ಅರ್ಜುನ ಮಾದರ ಎಂಬುವವರನ್ನು ಕಂಬಕ್ಕೆ ಕಟ್ಟಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಆರು ಜನರನ್ನು ಬಂಧಿಸಲಾಗಿದೆ.

'ಇನ್ನೂ 15 ಜನರ ಬಂಧನಕ್ಕಾಗಿ ಶೋಧ ನಡೆದಿದೆ. ಪೊಲೀಸ್ ವೈಫಲ್ಯ ಕುರಿತಂತೆ ಡಿಎಸ್‌ಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ' ಎಂದು ಜಿಲ್ಲಾ ಎಸ್‌ಪಿ ಅಮರನಾಥ ರೆಡ್ಡಿ ತಿಳಿಸಿದರು. ದೇವಸ್ಥಾನದ ಪ್ರವೇಶಕ್ಕೆ ಸಂಬಂಧಿಸಿದಂತೆ ಉಗಲವಾಟದಲ್ಲಿ ಗಲಾಟೆ ನಡೆದಿಲ್ಲ' ಎಂದು ಘಟನೆಯಲ್ಲಿ ಗಾಯಗೊಂಡು, ಚಿಕಿತ್ಸೆ ಪಡೆಯುತ್ತಿರುವ ನಿಂಗಪ್ಪ ತಿಮ್ಮಾಪುರ, ಅರ್ಜುನ ಮಾದರ ವಿರುದ್ಧ ಪ್ರತಿದೂರು ದಾಖಲಿಸಿದ್ದಾರೆ.

'ಮುನಿರತ್ನ ಹೇಳಿಕೆ ಸಮರ್ಥಿಸಲು ಬಿಜೆಪಿಗೆ ನೈತಿಕತೆ ಇಲ್ಲ'

ಪ್ರಜಾವಾಣಿ ವಾರ್ತೆ

ಎಚ್‌.ಕೆ. ಪಾಟೀಲ

ಗದಗ/ಬೆಳಗಾವಿ: 'ನಾವೇನು ಶಾಸಕ ಮುನಿರತ್ನ ಅವರು ದಲಿತ ವಿರೋಧಿ ಎಂದಿಲ್ಲ. ಮಾಧ್ಯಮಗಳು ಬಿತ್ತರಿಸಿದ ವಿಷಯದ ಮೇಲೆ ನಂಬಿಕೆ ಇಟ್ಟು ಅವರ ಕ್ರಮ ಸರಿಯಲ್ಲ ಅಂತ ಹೇಳಿದ್ದೇವೆ. ಜಾತಿ ನಿಂದನೆ ಘೋರ ಅಪರಾಧ. ಅದರಲ್ಲೂ ಶಾಸಕನಾಗಿ ಹೇಳಿದ್ದು ಸರಿಯಲ್ಲ. ಮುನಿರತ್ನ ಹೇಳಿಕೆಯನ್ನು ಸಮರ್ಥಿಸಲು ಬಿಜೆಪಿಗೆ ನೈತಿಕತೆ ಇಲ್ಲ' ಎಂದು ಸಚಿವ ಎಚ್‌.ಕೆ.ಪಾಟೀಲ ಟೀಕಿಸಿದರು.

'₹20 ಲಕ್ಷ ಕೊಡಬೇಕು ಅಂತ ಹೇಳಿ ಅವರು ಗೌರವಾನ್ವಿತರು ಮಾತನಾಡುವ ಮಾತು ಆಡಿಲ್ಲ. ಅದನ್ನು ರೆಕಾರ್ಡ್ ಮಾಡಿಕೊಂಡು ಮಾಧ್ಯಮದ ಮೂಲಕ ದೇಶಕ್ಕೆ ತಿಳಿಸಿದ್ದಾರೆ. ಮುನಿರತ್ನ ಅವರಿಗೆ ನೋಟಿಸ್ ಕೊಡುವುದಕ್ಕಿಂತ ಅವರನ್ನು ಶಾಸಕ ಸ್ಥಾನದಿಂದ ಅಮಾನತು ಮಾಡುತ್ತೇವೆ ಎಂದು ಬಿಜೆಪಿ ಹೇಳಬೇಕಿತ್ತು' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪ್ರತಿಕ್ರಿಯಿಸಿ, 'ಮುನಿರತ್ನ ಬಂಧಿಸಲು ಯಾರು ದ್ವೇಷದ ರಾಜಕಾರಣ ಮಾಡುತ್ತಾರೆ? ಬೈಯಿರಿ ಅಥವಾ ಬ್ಲ್ಯಾಕ್‌ಮೇಲ್ ಮಾಡಿ ಎಂದು ಕಾಂಗ್ರೆಸ್ ನಾಯಕರು ಅವರಿಗೆ ಹೇಳಿದ್ದಾರಾ? ಮಹಿಳೆಯರ ಬಗ್ಗೆ ಮುನಿರತ್ನ ಆಡಿದ ಕೀಳು ಮಾತುಗಳನ್ನು ಯಾರೂ ಸಹಿಸಲು ಸಾಧ್ಯವಿಲ್ಲ. ಜಾತಿಗಳ ಮಧ್ಯೆ ಸಂಘರ್ಷ ತರುವ ಮಾತುಗಳನ್ನು ಯಾರೂ ಆಡಬಾರದು' ಎಂದರು.

'ಮುನಿರತ್ನ ನಡವಳಿಕೆ ಅಸಭ್ಯ': (ಮಂಡ್ಯ ವರದಿ) 'ಮುನಿರತ್ನ ನಡೆದುಕೊಂಡಿರೋದು ಬರಿ ಜಾತಿ ನಿಂದನೆ ಮಾತ್ರ ಅಲ್ಲಾ, ಎಲ್ಲಾ ರೀತಿ ಅಸಭ್ಯವಾಗಿದೆ. ಜನಪ್ರತಿನಿಧಿಯಾಗಿ ಈ ರೀತಿ ನಡೆದುಕೊಳ್ಳಬಾರದು. ಆರ್. ಅಶೋಕ ಇದನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ತಪ್ಪಲ್ಲಿ ಅಶೋಕ ಭಾಗಿಯಾಗಲು ಸಿದ್ಧವಾಗಿದ್ದಾರಾ? ಎಂದು ಪ್ರಶ್ನಿಸಿದರು.

'ನಮ್ಮ ಕಡೆ ಬೆರಳು ಮಾಡುವ ಬದಲು, ಐದು ವರ್ಷ ಸುಮ್ಮನಿರೋಕೆ ಹೇಳಿ, ಇಲ್ಲವಾದರೆ ಈಗಲೇ ಸ್ಪೀಡ್ ಆಗಿ ಹೋದರೆ ಐದು ವರ್ಷ ಮುಗಿಯೋದರೊಳಗೆ ಠುಸ್ ಆಗಿ ಬಿಡುತ್ತಾರೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವ್ಯಂಗ್ಯವಾಡಿದರು.

> ಜತೆಯಲ್ಲಿ ಇದ್ದವರೇ ಅವರ ವಿರುದ್ಧ ದೂರು ನೀಡಿದ್ದಾರೆ. ಆಡಿಯೊಗೆ ಮುನಿರತ್ನ ಧ್ವನಿ ಹೋಲಿಕೆಯಾದರೆ ಪೊಲೀಸರು ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುತ್ತಾರೆ. ದ್ವೇಷದ ರಾಜಕಾರಣ ಎಲ್ಲಿಂದ ಬಂತು?
>
> **ಜಿ.ಪರಮೇಶ್ವರ,** ಗೃಹ ಸಚಿವ

> ಗುತ್ತಿಗೆದಾರರಾಗಿದ್ದ ವೇಳೆ ಮುನಿರತ್ನ ಅವರು ಬಿಬಿಎಂಪಿ ದಾಖಲೆಗಳನ್ನೇ ಸುಟ್ಟು ಹಾಕಿದ್ದರು. ಈ ಹಿಂದೆ ನಮ್ಮ ಪಕ್ಷದವರು ಸಹ ಟಿಕೆಟ್ ಕೊಟ್ಟು ತಪ್ಪು ಮಾಡಿದ್ದಾರೆ
>
> **ಡಾ.ಎಂ.ಸಿ.ಸುಧಾಕರ್,** ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ

> ಆಡಿಯೊ ತುಣುಕು ಅವರದ್ದೇನಾ ಎಂಬುದು ತನಿಖೆಯಲ್ಲಿ ಗೊತ್ತಾಗಬೇಕಿದೆ. ಅವರದ್ದೇ ಆಗಿದ್ದರೆ ಈ ನೆಲದ ಕಾನೂನು ಪ್ರಕಾರ ಕ್ರಮವಾಗಲಿದೆ
>
> **ಡಾ. ಸಿ.ಎನ್. ಮಂಜುನಾಥ್,** ಸಂಸದ

> ಬಾಯಿಗೆ ಬಂದಂತೆ ಮಾತನಾಡಲು ಮುನಿರತ್ನ ಅವರಿಗೆ ನಾವು ಹೇಳಿದ್ದೆವಾ? ತರಾತುರಿಯಲ್ಲಿ ನಾವು ಯಾರನ್ನೂ ಬಂಧಿಸಿಲ್ಲ
>
> **ಸತೀಶ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಶಾಸಕ ಮುನಿರತ್ನ ಎರಡು ದಿನ ವಶಕ್ಕೆ

ಒಂದನೇ ಪುಟದಿಂದ...

ಮುನಿರತ್ನ ಅವರನ್ನು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಇರಿಸಿರುವ ವಿಷಯ ತಿಳಿಯುತ್ತಿದ್ದಂತೆಯೇ ಅಲ್ಲಿಗೂ ನೂರಾರು ಮಂದಿ ಬೆಂಬಲಿಗರು ಬಂದರು. ಠಾಣೆಯ ಎದುರೇ ಘೋಷಣೆ ಕೂಗಿದರು. ಕೆಲವರು ಠಾಣೆಗೆ ನುಗ್ಗಲು ಯತ್ನಿಸಿದರು. ಕಬ್ಬಿಣದ ಗೇಟ್ ಹಾಕಿ ಬಂದ್ ಮಾಡಿದ ಪೊಲೀಸರು, ತನಿಖಾ ಪ್ರಕ್ರಿಯೆಯನ್ನು ಮುಂದುವರಿಸಿದರು.

'ನಾನು ಯಾವುದೇ ತಪ್ಪು ಮಾಡಿಲ್ಲ. ಈ ಎಲ್ಲವೂ ನನ್ನ ವಿರುದ್ಧದ ಷಡ್ಯಂತ್ರ' ಎಂದು ಮುನಿರತ್ನ ಉತ್ತರಿಸಿದ್ದಾರೆ. ಬಹುತೇಕ ಪ್ರಶ್ನೆಗಳಿಗೆ ಉತ್ತರಿಸದೇ, ಮೌನವಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಧ್ವನಿ ಮಾದರಿ ಪರೀಕ್ಷೆಗೆ: ಚೆಲುವರಾಜು ಜತೆಗಿನ ಮಾತುಕತೆಯಲ್ಲಿ ಮುನಿರತ್ನ ಅವರು ಪರಿಶಿಷ್ಟ ಜಾತಿಯ ವ್ಯಕ್ತಿಯೊಬ್ಬರನ್ನು ಜಾತಿ ಆಧಾರದಲ್ಲಿ ನಿಂದಿಸಿದ್ದಾರೆ ಎನ್ನಲಾದ ಆಡಿಯೊ ತುಣುಕನ್ನು ದೂರಿನ ಜತೆ ವೈಯಾಲಿಕಾವಲ್ ಪೊಲೀಸ್ ಠಾಣೆಗೆ ಸಲ್ಲಿಸಲಾಗಿತ್ತು. ತಮ್ಮನ್ನೇ ಉದ್ದೇಶಿಸಿ ಶಾಸಕರು ಜಾತಿನಿಂದನೆ ಮಾಡಿದ್ದಾರೆ ಎಂದು ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯ್ಕರ್ ದೂರು ನೀಡಿದ್ದರು.

'ಆಡಿಯೊ ತುಣುಕನ್ನು ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಪರೀಕ್ಷೆಗೆ ಕಳುಹಿಸಲಾಗಿದೆ. ಮುನಿರತ್ನ ಮತ್ತು ಚೆಲುವರಾಜು ಅವರ ಧ್ವನಿಗಳ ಮಾದರಿಗಳನ್ನೂ ಸಂಗ್ರಹಿಸಿ ಪರೀಕ್ಷೆಗಾಗಿ ಕಳುಹಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಕಚೇರಿಯಲ್ಲಿ ಮಹಜರು: ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪ್ರಕರಣದಲ್ಲಿ ಮುನಿರತ್ನ ಅವರ ಅಂಗರಕ್ಷಕ ವಿಜಯ್ ಕುಮಾರ್, ಆಪ್ತ ಸಹಾಯಕ ಅಭಿಷೇಕ್ ಹಾಗೂ ಆಪ್ತ ವಸಂತ್ ಕುಮಾರ್ ಅವರನ್ನು ವಿಚಾರಣೆ ನಡೆಸಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ದೂರು ನೀಡಿದ್ದ ಚೆಲುವರಾಜು ಅವರನ್ನು ಶಾಸಕರ ಕಚೇರಿಗೆ ಕರೆದೊಯ್ದು ಪೊಲೀಸರು ಸ್ಥಳ ಮಹಜರು ನಡೆಸಿದರು. ಅವರ ಹೇಳಿಕೆಯನ್ನೂ ದಾಖಲಿಸಿಕೊಂಡರು.

'ಚೆಲುವರಾಜು ಹಾಗೂ ವೇಲು ನಾಯ್ಕರ್ ಅವರ ದೂರಿಗೆ ಸಾಕ್ಷಿಗಳು ಇಲ್ಲ. ದೂರು ಕೊಟ್ಟವರ ವಿರುದ್ಧ ಪ್ರತಿದೂರು ನೀಡಲಾಗಿದೆ. ಹೈಕೋರ್ಟ್‌ಗೆ ಮೊರೆ ಹೋಗಲಾಗುವುದು. ಸತ್ಯಕ್ಕೆ ಜಯ ಸಿಗಲಿದೆ' ಎಂದು ಮುನಿರತ್ನ ಪರ ವಕೀಲ ಸದಾನಂದಶಾಸ್ತ್ರಿ ಹೇಳಿದ್ದಾರೆ.

ವಿಚಾರಣೆಗೆ ಕರೆದಿದ್ದರೆ ಹಾಜರಾಗುತ್ತಿದ್ದೆ..

'ನಾನು ತಿರುಪತಿಗೆ ಹೊರಟ್ಟಿದ್ದೆ. ನನ್ನ ಮನೆ ಪಕ್ಕದಲ್ಲಿಯೇ ಪೊಲೀಸ್ ಠಾಣೆ ಇದೆ. ವಿಚಾರಣೆಗೆ ಕರೆದಿದ್ದರೆ ಹಾಜರಾಗುತ್ತಿದ್ದೆ. ವಿಚಾರಣೆ ನಡೆಸದೆ, ರಾಜಕೀಯ ಪ್ರಭಾವದಿಂದ ಪೊಲೀಸರು ಏಕಾಏಕಿ ನನ್ನನ್ನು ಬಂಧಿಸಿದ್ದಾರೆ. ನನ್ನ ವಿರುದ್ಧ ಗುತ್ತಿಗೆದಾರ ಸುಳ್ಳು ಆರೋಪ ಮಾಡಿದ್ದಾರೆ. ನಾನು ತಪ್ಪು ಮಾಡಿಲ್ಲ. ನನಗೆ ಹೃದಯ ಸಂಬಂಧಿ ಹಾಗೂ ಹರ್ನಿಯಾ ಸಮಸ್ಯೆ ಇದೆ' ಎಂದು ನ್ಯಾಯಾಧೀಶರ ಎದುರು ಮುನಿರತ್ನ ಅಳಲು ತೋಡಿಕೊಂಡರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮುನಿರತ್ನ ಅವರ ಆರೋಗ್ಯ ತಪಾಸಣೆಯನ್ನು ನಿತ್ಯ ಮಾಡಿಸಬೇಕು' ಎಂದು ನ್ಯಾಯಾಧೀಶರು ಆದೇಶಿಸಿದರು ಎಂದು ಹೇಳಿವೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ.ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ದಕ್ಷಿಣ ಪಶ್ಚಿಮ – 1	ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024 (ಪರಿಶಿಷ್ಟ ಜಾತಿಗೆ ಮೀಸಲು)	1	ರೂ. 51,96,951/– ರೂ. 51,970/–	25.09.2024ರ ಸಂಜೆ 4:00 ಗಂಟೆಯವರೆಗೆ	27.09.2024ರ ಮಧ್ಯಾಹ್ನ 3:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024	2	ರೂ. 71,37,926/– ರೂ. 1,42,760/–		
3		ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024 (ಪರಿಶಿಷ್ಟ ಜಾತಿಗೆ ಮೀಸಲು)	3	ರೂ. 32,82,542/– ರೂ. 32,830/–		
4		ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024	4	ರೂ. 27,00,125/– ರೂ. 54,010/–		
5			5	ರೂ. 58,41,857/– ರೂ. 1,16,840/–		
6			6	ರೂ. 70,57,523/– ರೂ. 1,41,150/–		
7			7	ರೂ. 66,52,887/– ರೂ. 1,33,060/–		
8			8	ರೂ. 31,99,057/– ರೂ. 64,000/–		
9		ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024 (ಪರಿಶಿಷ್ಟ ಜಾತಿಗೆ ಮೀಸಲು)	9	ರೂ. 23,83,630/– ರೂ. 25,000/–		
10		ಬೆಂಜಮಂ/ಕಾನಿಅ(ದ.ಪ–1)/ತಾಂಅ/ಪಿಬಿ/2096/2024–25 ದಿನಾಂಕ: 13.09.2024	10	ರೂ. 24,26,555/– ರೂ. 50,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ ಪಶ್ಚಿಮ)–1.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://kppp.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/1996/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಶಸ್ವಿ ವ್ಯಕ್ತಿಗಳು ಗ್ರಂಥಾಲಯವನ್ನು ಹೊಂದಿರುತ್ತಾರೆ, ಉಳಿದವರ ಬಳಿ ದೊಡ್ಡ ಪರದೆಯ ಟಿ.ವಿ.ಗಳು ಇರುತ್ತವೆ.
-ಜಿಮ್ ರೌನ್

ಹೊಸ ದಾಳ ಉರುಳಿಸಿದ ಕೇಜ್ರಿವಾಲ್ ಜಾಮೀನಿನ ನಂತರ ಅಚ್ಚರಿಯ ನಡೆ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅಬಕಾರಿ ನೀತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಜಾಮೀನು ನೀಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಕೇಜ್ರಿವಾಲ್ ಮಾಡಿರುವ ಘೋಷಣೆಯು ಅಚ್ಚರಿಯೇ. ಜಾಮೀನು ನೀಡುವ ನಿರ್ಧಾರವು ನಿರೀಕ್ಷಿತವೇ ಆಗಿತ್ತು. ಏಕೆಂದರೆ, ಹೆಚ್ಚು ಕಠಿಣವಾಗಿರುವ ಹಣ ಅಕ್ರಮ ವರ್ಗಾವಣೆ ಕಾಯ್ದೆಯ (ಪಿಎಂಎಲ್ಎ) ಅಡಿಯಲ್ಲಿನ ಪ್ರಕರಣದಲ್ಲಿಯೇ ಕೇಜ್ರಿವಾಲ್, ಉಪಮುಖ್ಯಮಂತ್ರಿಯಾಗಿದ್ದ ಮನೀಶ್ ಸಿಸೋಡಿಯಾ, ಎಎಪಿ ಮುಖಂಡ ಸಂಜಯ್ ಸಿಂಗ್, ಬಿಆರ್‌ಎಸ್ ನಾಯಕಿ ಕೆ.ಕವಿತಾ ಸೇರಿದಂತೆ ಹಲವರಿಗೆ ಈಗಾಗಲೇ ಜಾಮೀನು ಮಂಜೂರಾಗಿದೆ. ಹೀಗಾಗಿ, ಸಿಬಿಐ ಪ್ರಕರಣದಲ್ಲಿಯೂ ಕೇಜ್ರಿವಾಲ್‌ಗೆ ಜಾಮೀನು ದೊರೆಯಲಿದೆ ಎಂಬುದು ನಿರೀಕ್ಷಿತವೇ ಆಗಿತ್ತು. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಈಗ ಕೇಜ್ರಿವಾಲ್ ಘೋಷಿಸಿದ್ದಾರೆ. ವಿಧಾನಸಭೆಗೆ ನವೆಂಬರ್‌ನಲ್ಲಿಯೇ ಚುನಾವಣೆ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ. 'ಜನರು ಮತ್ತೆ ಆರಿಸಿ ಕಳುಹಿಸಿದರೆ ಮಾತ್ರ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಳ್ಳುತ್ತೇನೆ' ಎಂದು ಅವರು ಹೇಳಿದ್ದಾರೆ. ಇದು ಅವರಿಗೆ ಸಿಕ್ಕ ರಾಜಕೀಯ ಅವಕಾಶ. ಅಬಕಾರಿ ನೀತಿ ಹಗರಣವನ್ನು ಚುನಾವಣಾ ವಿಚಾರವಾಗಿ ಪರಿವರ್ತಿಸಲು ಅವರು ಮುಂದಾಗಿದ್ದಾರೆ.

ಜಾಮೀನು ಆದೇಶವು ಅರವಿಂದ ಕೇಜ್ರಿವಾಲ್ ಅವರಿಗೆ ಸಿಕ್ಕ ಕಾನೂನು ಜಯ. ಈ ಜಯವನ್ನು ರಾಜಕೀಯ ಜಯವನ್ನಾಗಿ ಪರಿವರ್ತಿಸಲು ಅವರು ಯತ್ನಿಸುತ್ತಿದ್ದಾರೆ

ಅಷ್ಟೇ ಅಲ್ಲದೆ, ನ್ಯಾಯಾಲಯವು ಹೇರಿರುವ ಕಠಿಣ ಜಾಮೀನು ಷರತ್ತುಗಳಿಗೆ ಅವರು ನೀಡಿದ ಉತ್ತರವೂ ಹೌದು. ಜಾಮೀನು ಷರತ್ತುಗಳಿಂದಾಗಿ ಅವರು ಮುಖ್ಯಮಂತ್ರಿ ಕಚೇರಿಗೆ ಹೋಗುವಂತಿಲ್ಲ, ಕಡತಗಳಿಗೆ ಸಹಿ ಮಾಡುವಂತಿಲ್ಲ. ಹೀಗಾಗಿ, ಮುಖ್ಯಮಂತ್ರಿಯಾಗಿ ಕೆಲಸ ಮಾಡುವುದು ಅವರಿಗೆ ಕಷ್ಟವಾಗುತ್ತಿತ್ತು. ಈ ಷರತ್ತುಗಳು ಅವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳಿಗೆ ಅಡ್ಡಿಯಾಗುವಂತಿವೆ. ಜಾಮೀನು ಮತ್ತು ಅದರ ಅಸಾಮಾನ್ಯ ಷರತ್ತುಗಳನ್ನು ರಾಜಕೀಯವಾಗಿ ಬಳಸಿಕೊಳ್ಳಲು ಕೇಜ್ರಿವಾಲ್ ಮುಂದಾಗಿದ್ದಾರೆ. ಚುನಾವಣಾ ವಿಜಯವು ಪ್ರಕರಣವನ್ನು ನಗಣ್ಯ ಮಾಡಲಿದೆಯೇ ಅಥವಾ ನ್ಯಾಯಾಲಯದ ಆದೇಶವು ಮುಂದುವರಿಯಲಿದೆಯೇ ಎಂಬುದು ಈಗ ಇರುವ ಪ್ರಶ್ನೆ. ಕೆಲವು ರಾಜಕಾರಣಿಗಳು ಪ್ರಶ್ನೆಗಳಿಗೆ ಸವಾಲಿನ ಉತ್ತರ ಕಂಡುಕೊಳ್ಳುತ್ತಾರೆ.

ಇಲ್ಲಿ ಅವರ ಜಾಮೀನಿಗಿಂತ ಮುಖ್ಯವಾಗಿರುವುದು, ಅವರನ್ನು ಸಿಬಿಐ ಬಂಧಿಸಿದ್ದರ ಕುರಿತು ನ್ಯಾಯಪೀಠವು ಆಡಿರುವ ಮಾತುಗಳು. ಸುದೀರ್ಘ ಕಾಲ ಸೆರೆಮನೆಯಲ್ಲಿ ಇರಿಸುವುದು ಅದರಲ್ಲಿಯೂ ವಿಶೇಷವಾಗಿ ವಿಚಾರಣೆಯು ಸದ್ಯದಲ್ಲಿ ಮುಗಿಯುವುದಿಲ್ಲ ಎಂಬುದು ಗೊತ್ತಿರುವಾಗಲೂ ಜಾಮೀನು ನೀಡದೇ ಇರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂಬುದನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭುಯಾನ್ ಸ್ಪಷ್ಟಪಡಿಸಿದ್ದಾರೆ. ತನಿಖಾ ಪ್ರಕ್ರಿಯೆಯೇ ಶಿಕ್ಷೆಯಾಗಬಾರದು ಎಂಬ ಎಚ್ಚರಿಕೆಯನ್ನು ಸುಪ್ರೀಂ ಕೋರ್ಟ್ ಮತ್ತೊಮ್ಮೆ ನೀಡಿದೆ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಜೈಲಿನಲ್ಲಿ ಇರಿಸಬಹುದು, ಇಲ್ಲದೇ ಇದ್ದರೆ ಜಾಮೀನು ನೀಡಬೇಕು ಎಂಬುದೇ ನಿಯಮ ಎಂದಿರುವ ನ್ಯಾಯಾಲಯವು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ನೀಡಲಾದ ಸ್ವಾತಂತ್ರ್ಯದ ಹಕ್ಕಿನ ಮೌಲ್ಯವನ್ನು ಮತ್ತೊಮ್ಮೆ ಪ್ರತಿಪಾದಿಸಿದೆ.

ನ್ಯಾಯಮೂರ್ತಿ ಭುಯಾನ್ ಅವರು ತಮ್ಮ ಪ್ರತ್ಯೇಕ ತೀರ್ಪಿನಲ್ಲಿ ಸಿಬಿಐಯ ನಡೆ ಮತ್ತು ಕೇಜ್ರಿವಾಲ್ ಅವರ ಬಂಧನದ ಅಗತ್ಯದ ಕುರಿತು ಎತ್ತಿರುವ ಪ್ರಶ್ನೆಗಳಿಂದಾಗಿ ಈ ತೀರ್ಪು ವಿಶೇಷ ಎನಿಸಿಕೊಳ್ಳುತ್ತದೆ. ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಬಂಧನ ಪ್ರಕ್ರಿಯೆ ಕುರಿತು ಯಾವುದೇ ಪ್ರಶ್ನೆಗಳನ್ನು ಎತ್ತಿಲ್ಲ. ಆದರೆ, ಭುಯಾನ್ ಅವರು ಮಾತ್ರ ಸಿಬಿಐ ನಡೆಯು ತೀವ್ರವಾದ ಲೋಪಗಳಿಂದ ಕೂಡಿದೆ ಎಂದಿದ್ದಾರೆ. ಸಿಬಿಐ 'ಪಂಜರದ ಗಿಳಿ' ಎಂದು ನ್ಯಾಯಾಲಯವು 2013ರಲ್ಲಿ ಹೇಳಿದ್ದನ್ನು ಅವರು ಮತ್ತೆ ಉಲ್ಲೇಖಿಸಿದ್ದಾರೆ. ತನಿಖಾ ಸಂಸ್ಥೆಯ ನಡೆಯು ಅನುಮಾನಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಇರಬೇಕು ಎಂದಿದ್ದಾರೆ. ಪಿಎಂಎಲ್ಎ ಪ್ರಕರಣದಲ್ಲಿ ಜಾಮೀನು ಮಂಜೂರಾದ ಬಳಿಕ ಕೇಜ್ರಿವಾಲ್ ಅವರು ಇನ್ನೇನು ಬಿಡುಗಡೆ ಆಗಲಿದ್ದಾರೆ ಎಂಬಂತಹ ಸ್ಥಿತಿ ಇದ್ದಾಗ ಅವರನ್ನು ಸಿಬಿಐ ಬಂಧಿಸಿದ್ದು, ಅವರ ಬಿಡುಗಡೆಯನ್ನು 'ವಿಫಲ'ಗೊಳಿಸುವ ಯತ್ನವಾಗಿತ್ತು ಎಂದಿದ್ದಾರೆ. ಹಾಗಾಗಿಯೇ ಬಂಧನದ ಹಿಂದೆ ದುರುದ್ದೇಶವಿದೆ ಎಂದು ನ್ಯಾಯಾಲಯ ಭಾವಿಸುವಂತಾಗಿದೆ; ಸರ್ಕಾರದ ರಾಜಕೀಯ ಹಿತಾಸಕ್ತಿಗಳಿಗಾಗಿ ಹೀಗೆ ಮಾಡಲಾಗಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಜಾಮೀನು ಆದೇಶವು ಕೇಜ್ರಿವಾಲ್ ಅವರಿಗೆ ಸಿಕ್ಕ ಕಾನೂನು ಜಯ; ಈ ಜಯವನ್ನು ರಾಜಕೀಯ ಜಯವನ್ನಾಗಿ ಪರಿವರ್ತಿಸಲು ಕೇಜ್ರಿವಾಲ್ ಯತ್ನಿಸುತ್ತಿದ್ದಾರೆ.

ಸಾಮರಸ್ಯದ ಹೊಕ್ಕುಳಬಳ್ಳಿಗೆ ಕೊಳ್ಳಿ ಇಡುವವರ ಬಗ್ಗೆ ಬೇಕಿದೆ ಎಚ್ಚರ

ಬೆಂಕಿ ಆರಲಿ, ಹೂವು ಅರಳಲಿ

ಗತಿಬಿಂಬ

ವೈ.ಗ. ಜಗದೀಶ್

'ತುಷ್ಟೀಕರಣದ ಭರದಲ್ಲಿ ಕರ್ನಾಟಕದಲ್ಲಿ ಗಣೇಶ ಉತ್ಸವಕ್ಕೆ ಅಡ್ಡಿಪಡಿಸಲಾಗಿದೆ. ವಿಘ್ನನಿವಾರಕನ ಪೂಜೆಗೆ ವಿಘ್ನ ಸೃಷ್ಟಿಸಲಾಗಿದೆ. ಗಣಪತಿಜೀಯನ್ನು ಕಂಬಿಯ ಹಿಂದೆ ಕೂರಿಸಲಾಗಿದೆ...'

ಪ್ರಧಾನಿ ನರೇಂದ್ರ ಮೋದಿ ಅವರು ಆಡಿದ ಮಾತುಗಳಿವು. ಹರಿಯಾಣ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಶನಿವಾರ ಚಾಲನೆ ನೀಡಿದ ಅವರು, ನಾಗಮಂಗಲದ ಹೆಸರು ಉಚ್ಚರಿಸಲಿಲ್ಲ. ಗಲಭೆಯನ್ನಷ್ಟೇ ಉಲ್ಲೇಖಿಸಿದರು. ಮಣಿಪುರದಲ್ಲಿ ವರ್ಷದುದ್ದಕ್ಕೂ ನಡೆದ ಹಿಂಸೆ, ದೇಶದ ಉದ್ದಗಲಕ್ಕೂ ಆಗಾಗ್ಗೆ ನಡೆಯುತ್ತಲೇ ಇರುವ ಕೋಮುಹಿಂಸೆಗಳ ಬಗ್ಗೆ ಎಂದೂ ತುಟಿ ಬಿಚ್ಚದ ಮೋದಿ, ಕರ್ನಾಟಕದ ತಾಲ್ಲೂಕು ಕೇಂದ್ರವೊಂದರಲ್ಲಿ ಒಂದೇ ದಿನದಲ್ಲಿ ನಿಯಂತ್ರಣಕ್ಕೆ ಬಂದ ಹಿಂಸಾತ್ಮಕ ಪ್ರಕರಣವನ್ನು ವಿಶ್ವ ಮಟ್ಟದ ಸುದ್ದಿ ಎಂಬಂತೆ ಬಿಂಬಿಸಿದ್ದಾರೆ.

ಪ್ರಧಾನಿಯಾಗಿ 10 ವರ್ಷ ಪೂರೈಸಿರುವ ಅವರು, ತಮ್ಮ ನಿವಾಸದಲ್ಲಿ ಆಗತಾನೇ ಜನಿಸಿದ ಹಸುಗರುವನ್ನು ಮುದ್ದಿಸುತ್ತಿರುವ ಚಿತ್ರವನ್ನು 'ಎಕ್ಸ್'ನಲ್ಲಿ ಹಾಕಿಕೊಳ್ಳುವಷ್ಟು ಮುಗ್ಧತನ ತೋರಿಸುತ್ತಾರೆ. ಆದರೆ, ದೇಶದಲ್ಲಿ ನಡೆಯುವ ಹಿಂಸೆ, ಕ್ಷೋಭೆಯನ್ನು ನಿಗ್ರಹಿಸಿ, 'ಇಲ್ಲಿದೆ ನೆಮ್ಮದಿ ತಾಣ' ಎಂದು ಭರವಸೆ ಮೂಡಿಸುವ ಹೃದಯವಂತಿಕೆಯನ್ನು ಅವರೆಂದೂ ತೋರಲಿಲ್ಲ. ಪ್ರಧಾನಿಯಾದವರು ದೇಶದ ಹಿತಚಿಂತನೆ ಮಾಡಬೇಕೇ ವಿನಾ ತಾಲ್ಲೂಕೊಂದರಲ್ಲಿ ನಡೆದ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯನ್ನೇ ದೇಶದ ಸಮಸ್ಯೆ ಎಂಬಂತೆ ಬಣ್ಣಿಸುವುದು ಆ ಹುದ್ದೆಗೆ ಶೋಭೆ ತರುವಂಥ ನಡೆಯಲ್ಲ. ಮಾತನಾಡಬೇಕಾದ ವಿಷಯಗಳಲ್ಲಿ ಮೌನ ತಳೆಯುವ ಮೋದಿಯವರು, ಯಾವುದೇ ರಾಜ್ಯದಲ್ಲಿ ಚುನಾವಣೆ ಬಂದರೆ ಸಾಕು, ಮೈಮೇಲೆ ಆವೇಶ ಬಂದಂತೆ ವರ್ತಿಸುತ್ತಾರೆ. ನಾಗಮಂಗಲ ಪ್ರಕರಣದ ಉಲ್ಲೇಖ ಇದಕ್ಕೊಂದು ನಿದರ್ಶನ.

'ಹೆಣ ಬಿದ್ದರೆ ಹದ್ದುಗಳಿಗೆ ಹಬ್ಬ, ಗಲಭೆಯೆದ್ದರೆ ರಾಜಕಾರಣಿಗಳಿಗೆ ಸ್ವರ್ಗ' ಎಂಬುದು ಇವತ್ತಿನ ರಾಜಕೀಯ ವಾಸ್ತವ. ಗಣೇಶ ಮೂರ್ತಿಯ ಮೆರವಣಿಗೆಯ ವಿಷಯದಲ್ಲಿ ನಡೆದ ಘರ್ಷಣೆಯು ಹಿಂಸೆಗೆ ತಿರುಗಿತು. ಹಿಂದೂ, ಮುಸ್ಲಿಂ ಸಮುದಾಯದವರು ವಿವೇಚನೆಯಿಂದ ವರ್ತಿಸಿದ್ದರೆ ಇದೊಂದು ತಪ್ಪಿಸಬಹುದಾದ ಪ್ರಕರಣವಾಗಿತ್ತು. ತಮ್ಮ ಸಮುದಾಯದವರ ಮಿದುಳಿನಲ್ಲಿ ವಿಷವನ್ನು ತುಂಬಿ ಗಲಭೆಗೆ ಪ್ರಚೋದಿಸುವ, ಹಿಂಸೆಗೆ ಉತ್ತೇಜನ ನೀಡುವ ಕೆಲವು ಜಂತುಗಳು ಎರಡೂ ಸಮುದಾಯಗಳಲ್ಲಿ ಇವೆ. ಹೀಗಾಗಿ, ಹಾದಿಬೀದಿಯ ಜಗಳ ಸಹ ಅಂಗಡಿ, ಮಳಿಗೆಗಳನ್ನು ಸುಟ್ಟು, ದ್ವೇಷದ ಜ್ವಾಲೆ ಹಬ್ಬುವುದಕ್ಕೆ ದಾರಿ ಮಾಡಿಕೊಡುತ್ತದೆ.

ಇಂತಹ ಪ್ರಕರಣಗಳು ನಡೆದಾಗ, ನೇತಾರರು ಎನ್ನಿಸಿಕೊಂಡವರು ಸಂಯಮದಿಂದ ವರ್ತಿಸಿ, ಶಾಂತಿ ಸ್ಥಾಪಿಸಬೇಕಾದುದು ಮೊದಲ ಕೆಲಸ. ಆದರೆ, ಕೋಮು ಘರ್ಷಣೆಯನ್ನು ಮುಂದಿಟ್ಟುಕೊಂಡು ತಮ್ಮ ರಾಜಕೀಯ ನೆಲೆ ವಿಸ್ತರಿಸಿಕೊಳ್ಳುವ ಚಾಳಿ ಎಲ್ಲ ಪಕ್ಷದವರಲ್ಲೂ ಇದೆ. ತುಷ್ಟೀಕರಣವು ಒಂದು ಪಕ್ಷ, ಒಂದು ಸಮುದಾಯದವರಿಗೆ ಸೀಮಿತವಾಗಿಲ್ಲ. ಓಲೈಕೆಯ ಜತೆಗೆ, ತಮ್ಮ ರಾಜಕೀಯ ನೆಲೆಯನ್ನು ಭದ್ರಪಡಿಸಿಕೊಳ್ಳುವುದಕ್ಕೆ ಇಂತಹ ಪ್ರಕರಣಗಳೇ ಊರುಗೋಲು ಎಂಬುದು ರಾಜಕಾರಣಿಗಳ ಮತಿಹೀನ ತಿಳಿವಳಿಕೆ ಹಾಗೂ ಅಪಾಯಕಾರಿ ನಡವಳಿಕೆ.

ಆಡಳಿತ ನಡೆಸಿದ ಅನುಭವ ಇರುವ ಗೃಹ ಸಚಿವ ಜಿ.ಪರಮೇಶ್ವರ ಇಂತಹ ಸನ್ನಿವೇಶ ಸೃಷ್ಟಿಯಾದಾಗಲೆಲ್ಲ ಹೊಣೆಯರಿತು ಮಾತನಾಡಿದ್ದೇ ಇಲ್ಲ. ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ಪೊಲೀಸ್ ಅಧಿಕಾರಿಗಳ ವಿವೇಚನೆಗೆ ಬಿಡುವುದು ಬಿಟ್ಟು, ತಮ್ಮದೊಂದು ಅಸಂಬದ್ಧ 'ಪ್ರಮಾಣಪತ್ರ' ನೀಡಿಬಿಡುವುದು ಅವರಿಗೆ ರೂಢಿಯಾಗಿದೆ. ಈ ವಿಷಯದಲ್ಲೂ 'ಇದೊಂದು ಸಣ್ಣ ಘಟನೆ' ಎಂದು ಹೇಳಿ ಬಿಜೆಪಿಯವರನ್ನು ರೊಚ್ಚಿಗೆಬ್ಬಿಸಿದರು.

ನಾಗಮಂಗಲದ ಪ್ರಕರಣ ನಡೆದ ಮರುಕ್ಷಣವೇ ಬಿಜೆಪಿ– ಜೆಡಿಎಸ್ ನಾಯಕರು ಧಿಗ್ಗನೆದ್ದು ಕುಳಿತರು. ಕಾಣಿಸಿಕೊಂಡ ಕಿಡಿಯನ್ನು ಉರಿವ ಜ್ವಾಲೆಯನ್ನಾಗಿಸಲು ಹೊಂಚು ಹಾಕಿ ಕುಳಿತಂತಿತ್ತು ನಾಯಕರ ವರ್ತನೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಮ್ಮ ದಂಡು ಕಟ್ಟಿಕೊಂಡು, ಎದ್ದೆನೋ ಬಿದ್ದೆನೋ ಎಂದು ನಾಗಮಂಗಲಕ್ಕೆ ದೌಡಾಯಿಸಿ, 'ಗಲಭೆಯ ಹಿಂದೆ ಕಾಂಗ್ರೆಸ್ ಪಿತೂರಿ ಇದೆ, ಹಿಂದೂಗಳು ಆತಂಕಕ್ಕೆ ಒಳಗಾಗಿದ್ದಾರೆ' ಎಂದೆಲ್ಲಾ ಬಡಬಡಿಸಿದರು.

ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವ ಇರುವ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಂತೂ ಮತ್ತೂ ಒಂದು ಹೆಜ್ಜೆ ಮುಂದೆ ಹೋದರು. 'ಹಿಂದೂಗಳನ್ನೇ ಗುರಿಯಾಗಿಸಿಕೊಂಡು, ಗಣೇಶ ವಿಸರ್ಜನೆಯ ಮೆರವಣಿಗೆಗೆ ಕಾದು, ಕಲ್ಲುಗಳ ರಾಶಿ, ಪೆಟ್ರೋಲ್ ಬಾಂಬು, ತಲ್ವಾರ್‌ಗಳನ್ನು ಸಂಗ್ರಹಿಸಿಟ್ಟುಕೊಂಡು ಪೂರ್ವಯೋಜಿತವಾಗಿ ದುಷ್ಕೃತ್ಯ ನಡೆಸಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಮುಸ್ಲಿಂ ಮತಾಂಧರನ್ನು ಓಲೈಸಲು, ಹಿಂದೂಗಳನ್ನು ಬಲಿ ಕೊಡಲು ಸಿದ್ಧ ಎಂದು ಕಾಂಗ್ರೆಸ್ ನೇತೃತ್ವದ ಸರ್ಕಾರ ನಿರ್ಧಾರ ಮಾಡಿದಂತಿದೆ. ಇಷ್ಟಕ್ಕೂ ಮಸೀದಿ ಅಥವಾ ದರ್ಗಾದ ಮುಂದೆ ಗಣೇಶೋತ್ಸವದ ಮೆರವಣಿಗೆ ಹಾದು ಹೋಗಬಾರದು ಎನ್ನುವುದಕ್ಕೆ ಕರ್ನಾಟಕವೇನು ಇಸ್ಲಾಮಿಕ್ ರಿಪಬ್ಲಿಕ್ಕಾ' ಎಂದು ಪಡ್ಡೆ ಹುಡುಗರಂತೆ ಪ್ರಶ್ನಿಸಿದರು. ದರ್ಗಾ ಅಥವಾ ಮಸೀದಿ ಮುಂದೆ ಮೆರವಣಿಗೆ ಮಾಡಬೇಕು, ಅರ್ಧಗಂಟೆ ನಿಂತು ಭಜನೆ ಮಾಡಬೇಕು ಎಂದು ಯಾವ ಧರ್ಮ ಅಥವಾ ಶಾಸ್ತ್ರಗ್ರಂಥ ಹೇಳುತ್ತದೆ ಎಂದು ಅಶೋಕ ಅವರಿಗೆ ಕೇಳಲೇಬೇಕಾಗಿದೆ.

ಎರಡು ಬಾರಿ ಮುಖ್ಯಮಂತ್ರಿಯಾಗಿ, ಸದ್ಯ ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ, ತಾನು ಮಂಡ್ಯದ ಜನರ ಮತಗಳಿಂದ ಗೆದ್ದಿದ್ದೇನೆ ಎಂಬ ಪರಿವೆಯೇ ಇಲ್ಲದಂತೆ ತಮ್ಮ ನಾಲಿಗೆಯನ್ನು ಹರಿಯಬಿಟ್ಟರು. 'ಬರೀ ಹತ್ತು ನಿಮಿಷದಲ್ಲಿ ಅಷ್ಟೊಂದು ಪ್ರಮಾಣದ ಕಲ್ಲು, ಚಪ್ಪಲಿ, ಕಬ್ಬಿಣದ ಪೈಪ್‌ಗಳು, ಪೆಟ್ರೋಲ್ ಬಾಂಬ್‌ಗಳು ಎಲ್ಲಿಂದ ಬಂದವು? ಹತ್ತೇ ನಿಮಿಷದಲ್ಲಿ ಇವನ್ನೆಲ್ಲಾ ಸಂಗ್ರಹ ಮಾಡಿಕೊಳ್ಳಲು ಸಾಧ್ಯವೇ? ಇಡೀ ಗಲಭೆಯ ರೀತಿಯನ್ನು ನೋಡಿದರೆ ಇದರ ಹಿಂದೆ ದೊಡ್ಡ ಪಿತೂರಿ ಅಡಗಿರುವಂತೆ ತೋರುತ್ತದೆ. ಕಾಂಗ್ರೆಸ್ ಪ್ರಾಯೋಜಿತ ಗಲಭೆ' ಎಂಬಲ್ಲಿಯವರೆಗೆ ಕುಮಾರಸ್ವಾಮಿಯವರ 'ಸಂಘಪ್ರೇಮ'ದ ಉನ್ಮಾದ ಹರಿಯಿತು.

'ರಾಜ್ಯ ರಾಜಕಾರಣಕ್ಕೆ ಸದ್ಯ ನೀವು ಬೇಡ' ಎಂದು ಕುಮಾರಸ್ವಾಮಿಯವರನ್ನು ನಾಡಿನ ಜನ ದೆಹಲಿಗೆ ಕಳುಹಿಸಿದ್ದಾರೆ. ಅವರ ಪಕ್ಷ ಗೆದ್ದಿರುವುದು ಎರಡೇ ಕ್ಷೇತ್ರಗಳಲ್ಲಾದರೂ ದೇಶದ ಕೈಗಾರಿಕೆಗಳನ್ನು ಮುನ್ನಡೆಸುವ ಬಹುದೊಡ್ಡ ಜವಾಬ್ದಾರಿಯನ್ನು ಪ್ರಧಾನಿ ಮೋದಿಯವರು ಕೊಟ್ಟಿದ್ದಾರೆ. ದೇಶೋದ್ಧಾರದ ಕೆಲಸವನ್ನು ಬಿಟ್ಟು, ವಾರಕ್ಕೊಮ್ಮೆ ಇಲ್ಲಿಗೆ ಬಂದು ಸ್ಥಳೀಯ ರಾಜಕಾರಣದಲ್ಲಿ, ಹಗೆತನದ ಕಸುಬಿನಲ್ಲಿ ತಲ್ಲೀನರಾಗುವುದು ಅವರ ಹಿರಿತನಕ್ಕೆ ತಕ್ಕ ನಡೆಯಲ್ಲ. ಇದು ಪ್ರಲ್ಹಾದ ಜೋಶಿಯವರಿಗೂ ಸಲ್ಲುವ ಮಾತು.

ಕೋಮುಘರ್ಷಣೆಯ ವಿಷಯದಲ್ಲಿ ರಾಜಕಾರಣಿಗಳ ಮಾತು, ನಡೆಗಳನ್ನು ನೋಡಿದರೆ ಯಾರೊಬ್ಬರಿಗೂ ಸಾರ್ವಜನಿಕ ಲಜ್ಜೆಯಾಗಲಿ, ಜನಹಿತದ ಕಾಳಜಿಯಾಗಲಿ ಇದ್ದಂತೆ ಕಾಣುವುದಿಲ್ಲ. ರಾಜಕೀಯ ಫಸಲು ತೆಗೆಯಲು ಯಾರನ್ನಾದರೂ ಬಲಿ ಕೊಡಲು ಎಲ್ಲರೂ ಹಠಾರ ಹಿಡಿದು ನಿಂತಂತೆ ಇರುತ್ತದೆ. ಉರಿವ ಮನೆಯ ಗಳ ಹಿರಿದು ತಮ್ಮ ಕಾಲಬುಡವನ್ನು ಬೆಚ್ಚಗೆ, ಭದ್ರ ಮಾಡಿಕೊಳ್ಳುವವರ ಬಗ್ಗೆ ಜನರು ಎಚ್ಚರದಿಂದ ಇರಬೇಕಿದೆ.

'ಮನದೊಳಗಣ ಕಿಚ್ಚು ಮನೆಯ ಸುಟ್ಟಲ್ಲದೇ/ ನೆರೆಮನೆಯ ಸುಡದೋ/ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ/ ತನಗಾದ ಆಗೇನು ಅವರಿಗಾದ ಕೇಡೇನು...' ಎಂಬ ಬಸವಣ್ಣನವರ ವಚನವನ್ನು ಅರ್ಥ ಮಾಡಿಕೊಂಡು ಅನುಸರಿಸಿದರೆ, ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿಯನ್ನು ಕರ್ನಾಟಕ ತೆರೆದಂತೆ ಆಗುತ್ತದೆ. ಆಗ, ಪ್ರೀತಿಯ ಹೂಗಳು ಎಲ್ಲರ ಎದೆಯೊಳಗೆ ಅರಳತೊಡಗಿ, ದ್ವೇಷದ ಬೆಂಕಿ ತಂತಾನೇ ಆರಿಹೋಗುತ್ತದೆ.

ಚುರುಮುರಿ

ಹಗಲುಗನಸು

• ಸುಮಂಗಲಾ

ಬೆಕ್ಕಣ್ಣ ಒಂದು ಕೈಯಲ್ಲಿ ಪರದೆ ರಾಡ್ ಹಿಡಿದು ಇಡೀ ದೇಹವನ್ನು ಗಾಳಿಯಲ್ಲಿ ತೇಲಾಡಿಸುವುದು, ಕಿಟಕಿಯ ಕಂಬಿ ಹಿಡಿದು ತೂಗಾಡುವುದು ಮಾಡುತ್ತಿತ್ತು.

'ಇದೇನ್ ಸರ್ಕಸ್ ನಡಿಸೀಯಲೇ' ಎಂದೆ ಅಚ್ಚರಿಯಿಂದ.

'ಮೊನ್ನೆ ಸ್ಪೇಸ್‌ಎಕ್ಸಿನವರು ನಾಕು ಮಂದಿನ್ನ ಕೂರಿಸಿ ಪೊಲಾರಿಸ್ ಗಗನನೌಕೆ ಹಾರಿಸಿದ್ರು. ನೌಕೆಯಿಂದ ಇಬ್ಬರು ಹೊರಗೆ ಬಂದು ಸ್ಪೇಸ್ ವಾಕ್ ಮಾಡಿದ ಸುದ್ದಿ ಓದಿದಿ ತಾನೆ... ವಿಮಾನ ಹಾರಿಸಿದಂಗೆ ಪ್ರೈವೇಟ್ ಸ್ಪೇಸ್‌ಶಿಪ್ಪುಗಳು ದಿನಾ ಬಾಹ್ಯಾಕಾಶಕ್ಕೆ ಹಾರೋ ದಿನ ದೂರ ಏನಿಲ್ಲ. ಮುಂದೊಂದು ದಿನ ನಾನೂ ಹಂಗೆ ಸ್ಪೇಸಿಗೆ ಹೋಗತೀನಿ. ಅದಕ್ಕೇ ಈಗಲೇ ಭೂಮಿಮ್ಯಾಗೆ ಸ್ಪೇಸ್ ವಾಕ್ ರೂಢಿ ಮಾಡಿಕೊಳ್ಳಾಕೆ ಹತ್ತೀನಿ' ಎಂದು ಕನಸುಗಣ್ಣು ಮಾಡಿ ಹೇಳಿತು.

'ಮಂಗ್ಯಾನಂಥವ್ನೆ... ಅದೆಲ್ಲ ಬಿಲಿಯನ್ ಡಾಲರ್ ರೊಕ್ಕ ಇದ್ದವರು ಮಾಡತಾರೆ. ಮೊದ್ಲು ಅಷ್ಟು ದುಡಿ ನೀನು' ಎಂದು ಬೈದೆ.

'ನಿಮ್ಮಂಥ ಶ್ರೀಸಾಮಾನ್ಯರು ಸ್ಪೇಸ್‌ವಾಕ್ ಹಗಲುಗನಸು ಕಾಣಕ್ಕೂ ಲಾಯಕ್ಕಿಲ್ಲ, ಇಲ್ಲಿಯ ಹೊಂಡಾಗುಂಡಿ ರಸ್ತೆವಳಗೆ ನಡೆಯಕ್ಕಷ್ಟೆ ಲಾಯಕ್ಕು' ಎಂದು ನನ್ನ ಮೂತಿಗೆ ತಿವಿದ ಬೆಕ್ಕಣ್ಣ ಮತ್ತೇನೋ ವಿಡಿಯೊ ಸುದ್ದಿ ನೋಡತೊಡಗಿತು.

ತುಸು ಹೊತ್ತು ಬಿಟ್ಟು, 'ನನಗೀಗ ದೆಹಲಿ ವಿಮಾನದ ಟಿಕೆಟ್ ತೆಗೆಸು, ನಾ ಮೋದಿಮಾಮನ ಮನಿಗೆ ಹೋಗತೀನಿ' ಎಂದು ವರಾತ ಶುರು ಮಾಡಿತು.

'ಎದಕ್ಕಲೇ... ನಿನಗೇನ್ ದಗದ ಐತಿ ಅಲ್ಲಿ?'

'ನೋಡಿಲ್ಲಿ' ಎನ್ನುತ್ತ ಪ್ರಧಾನಿಯವರು ಕರುವೊಂದನ್ನು ಮನೆಯೊಳಗೆ ಬರಮಾಡಿಕೊಂಡು, ಅದಕ್ಕೆ ಹಾರ ಹಾಕಿ, ದೇವರ ಮನೆಯಲ್ಲಿ ಕೂರಿಸಿ, ಶಾಲು ಹೊದೆಸಿ, ಆಮೇಲೆ ಮುದ್ದು ಮಾಡಿದ್ದನ್ನು ತೋರಿಸಿತು.

'ಅದು ಆಕಳ ಕರು ಕಣಲೇ. ನೀ ಹೋಗಿ ಅಲ್ಲಿ ಏನು ಮಾಡಾಂವ?'

'ನಾನು ಪ್ರಧಾನಿ ನಿವಾಸದ ಹಿತ್ತಲಿನಲ್ಲಿ ದೊಡ್ಡದೊಡ್ಡ ಹೆಗ್ಗಣ ಹಿಡಿತೀನಿ... ಆವಾಗ ಮೋದಿಮಾಮ ನನಗೂ ಹಾರ ಹಾಕಿ, ಶಾಲು ಹೊದೆಸಿ, ಎತ್ತಿಕೊಂಡು ಮುದ್ದು ಮಾಡತಾರೆ' ಎಂದು ಮತ್ತೊಂದು ಹಗಲುಗನಸಿಗೆ ಜಾರಿತು!

ದಿನದ ಟ್ವೀಟ್

ಕೋಪದ ಕೈಗೆ ಬುದ್ಧಿ ಕೊಟ್ಟರೆ...

ಭಾರತದಲ್ಲಿ ಕೋಪ ನಿರ್ವಹಣಾ ಕೋರ್ಸ್ ಆರಂಭಿಸಬೇಕಾದ ಅಗತ್ಯವಿದೆ. ಗುಜರಾತ್‌ನ ಭಾವ್‌ನಗರ್ ಜಿಲ್ಲೆಯ ಸೆಹೋರ್‌ನ ಆಸ್ಪತ್ರೆಯೊಂದರಲ್ಲಿ ಮಹಿಳಾ ರೋಗಿಯೊಬ್ಬರ ಕಡೆಯವರಿಗೆ ತುರ್ತು ನಿಗಾ ಘಟಕವನ್ನು ಪ್ರವೇಶಿಸುವ ಮುನ್ನ ಚಪ್ಪಲಿ ಬಿಚ್ಚಿ ಬರಬೇಕೆಂದು ಸೂಚಿಸಿದ್ದಕ್ಕಾಗಿ ವೈದ್ಯರೊಬ್ಬರ ಮೇಲೆ ಹಲ್ಲೆ ನಡೆಸಲಾಗಿದೆ.

ಕುಮಾರ್ ಮನಿಷ್, ಕಂಟೆಂಟ್ ಕ್ರಿಯೇಟರ್

ಕಿಡಿನುಡಿ

ಗಂಗಾ ನದಿಯನ್ನು ಸ್ವಚ್ಛವಾಗಿಸಲು... ಬಿಜೆಪಿ ಸಂಸದೆ ಮತ್ತು ಚಿತ್ರನಟಿ ಹೇಮಾಮಾಲಿನಿ ಉತ್ತರಾಖಂಡದ ಹರಿದ್ವಾರದ ಗಂಗಾ ನದಿಯ ತಟದಲ್ಲಿ 'ಗಂಗಾ ನೃತ್ಯ ಬ್ಯಾಲೆ' ಪ್ರದರ್ಶಿಸಿದ್ದಾರೆ. ಕೆಲವೊಮ್ಮೆ ವಿನೋದಕ್ಕಾಗಿ ನೀವು ಎಲ್ಲೂ ಹುಡುಕಿಕೊಂಡು ಹೋಗಬೇಕಾಗಿಲ್ಲ, ಈ ಬಗೆಯ ರಾಜಕಾರಣಿಗಳು ನೇರವಾಗಿ ನಿಮ್ಮ ಮುಂದೆಯೇ ಅದನ್ನು ಪ್ರದರ್ಶಿಸುತ್ತಾರೆ.

ವೀಣಾ ಜೈನ್

25 ವರ್ಷಗಳ ಹಿಂದೆ

ಗುರುವಾರ, 16-9-1999

• ಆಂಧ್ರ: ಟಿಡಿಪಿ ಶಾಸಕ, ಮೂವರು ಅಂಗರಕ್ಷಕರ ಹತ್ಯೆ

ಹೈದರಾಬಾದ್, ಸೆ. 15– ಶಾಸಕ ಹಾಗೂ ಸಿರ್ಪೂರ್ ವಿಧಾನಸಭಾ ಕ್ಷೇತ್ರದ ಆಡಳಿತಾರೂಢ ತೆಲುಗು ದೇಶಂ ಪಕ್ಷದ ಅಭ್ಯರ್ಥಿ ಪಿ. ಪುರುಷೋತ್ತಮ ರಾವ್ ಹಾಗೂ ಅವರ ಮೂವರು ಅಂಗರಕ್ಷಕರನ್ನು ನಕ್ಸಲೀಯರು ಆಂಧ್ರದ ಅದಿಲಾಬಾದ್ ಜಿಲ್ಲೆಯ ಸಿರ್ಪೂರ್ ಕಾಗದ ನಗರದಲ್ಲಿ ಇಂದು ಮುಂಜಾನೆ ಗುಂಡಿಟ್ಟು ಕೊಂದಿದ್ದಾರೆ.

ಈ ಹತ್ಯೆಯ ಹಿನ್ನೆಲೆಯಲ್ಲಿ ಸಿರ್ಪೂರ್ ಕ್ಷೇತ್ರದಲ್ಲಿ ಸೆ. 18ರಂದು ನಡೆಯಬೇಕಾಗಿದ್ದ ಮತದಾನ ರದ್ದಾಗಿದೆ ಎಂದು ಚುನಾವಣಾ ಆಯೋಗದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

• ಅಧಿಕಾರದಾಹಿ ಕಾಂಗ್ರೆಸ್ ವಾಜಪೇಯಿ ಟೀಕೆ

ನವದೆಹಲಿ, ಸೆ. 15– 'ಸಮ್ಮಿಶ್ರ ಸರ್ಕಾರ ಸ್ಥಿರತೆ ನೀಡಲಾರದು ಎಂದು ಹೇಳುವ ಕಾಂಗ್ರೆಸ್ ಪಕ್ಷವು ಅಧಿಕಾರದಾಹಿ ಪಕ್ಷ' ಎಂದು ಬಣ್ಣಿಸಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಸಮ್ಮಿಶ್ರ ಸರ್ಕಾರಗಳು ಪೂರ್ಣಾವಧಿ ಬಾಳಲಾರವು ಎಂಬ ಕಾಂಗ್ರೆಸ್ ನಿಲುವಿಗೆ ತಮ್ಮ ಅಸಮ್ಮತಿ ಸೂಚಿಸಿದ್ದಾರೆ.

'ವಿಶ್ವದ ಹಲವಾರು ದೇಶಗಳಲ್ಲಿ ಸಮ್ಮಿಶ್ರ ಸರ್ಕಾರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಭಾರತದಲ್ಲಿಯೂ ಕೆಲವು ರಾಜ್ಯಗಳಲ್ಲಿ ಈ ಪ್ರಯೋಗ ಯಶಸ್ವಿಯಾಗಿ ಸ್ಥಿರ ಸರ್ಕಾರ ಒದಗಿಸಿದೆ' ಎಂದು ಅವರು ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 16-9-1974

• ಬರುವ ವರ್ಷದ ಆದಿಯಲ್ಲಿ ಲೋಕಸಭೆಗೆ ಮಧ್ಯಂತರ ಚುನಾವಣೆ ಖಚಿತ

ಹೈದರಾಬಾದ್, ಸೆ. 15– ಲೋಕಸಭೆಗೆ ಮುಂದಿನ ವರ್ಷಾರಂಭದಲ್ಲಿ ಮಧ್ಯಂತರ ಚುನಾವಣೆ ನಡೆಯುವ ಸಾಧ್ಯತೆಯನ್ನು ಜನಸಂಘದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ಖಚಿತಪಡಿಸಿದ್ದಾರೆ.

'ಮಧ್ಯಂತರ ಚುನಾವಣೆ ನಡೆಯುವ ಸಾಧ್ಯತೆ ಇಲ್ಲ' ಎಂಬ ಕಾಂಗ್ರೆಸ್ ಅಧ್ಯಕ್ಷ ಎಸ್.ಡಿ. ಶರ್ಮಾ ಅವರ ಹೇಳಿಕೆಯನ್ನು ಅಡ್ವಾಣಿ ಪ್ರಸ್ತಾಪಿಸಿ, '1971ರ ಮಧ್ಯಂತರ ಚುನಾವಣೆಗೆ ಮುನ್ನವೂ ಅವರು ಹೀಗೆಯೇ ಹೇಳಿದ್ದರು. ಲೋಕಸಭೆ ವಿಸರ್ಜನೆಗೆ ಹಿಂದಿನ ದಿನವೂ ಕೇಂದ್ರ ಸಚಿವ ರಘುರಾಮಯ್ಯ ಅವರು ಚುನಾವಣೆ ಇಲ್ಲವೇ ಇಲ್ಲ ಎಂದಿದ್ದರು' ಎಂದು ಸ್ಮರಿಸಿಕೊಂಡರು.

• ಜೆ.ಪಿ. ಚಳವಳಿಗೆ ಬೆಂಬಲ ಹುಬ್ಬಳ್ಳಿಯಲ್ಲಿ ಮೌನ ಮೆರವಣಿಗೆ

ಹುಬ್ಬಳ್ಳಿ, ಸೆ. 15– ಜೆ.ಪಿ. ಚಳವಳಿಗೆ ಬೆಂಬಲ ವ್ಯಕ್ತಪಡಿಸುವ ಭಿತ್ತಿಪತ್ರಗಳೊಂದಿಗೆ ಹುಬ್ಬಳ್ಳಿಯಲ್ಲಿ ಇಂದು ಮುಖ್ಯ ಬೀದಿಗಳಲ್ಲಿ ಮೌನ ಮೆರವಣಿಗೆ ನಂತರ ಬಹಿರಂಗ ಸಭೆ ನಡೆಯಿತು.

ನವ ನಿರ್ಮಾಣ ಸಮಿತಿಯವರು ಏರ್ಪಡಿಸಿದ್ದ ಮೆರವಣಿಗೆಯ ನೇತೃತ್ವವನ್ನು ಶಿವಪ್ಪ ಎಸ್. ಶೆಟ್ಟರ್, ಆರ್.ಎಸ್. ಕಾಪಸೆ, ಸಿ.ಜಿ. ನಿರಂಜನ್ (ಜನಸಂಘದ ನಾಯಕರು), ಎನ್.ಬಿ. ಪೂಜಾರ್, ಪ್ರೊ. ಎನ್.ಡಿ. ನಂಜುಂಡಸ್ವಾಮಿ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಜಿ.ಎನ್. ರತನ್, ಚನ್ನಪ್ಪ ಭದ್ರಾಪುರ, ಎಲ್.ವಿ. ಹಿರೇಮಠ ಅವರು ವಹಿಸಿದ್ದರು.

ಸಂಗತ

ಗಿರಿಗೆ ಕೇಳಿದೆ ನರಿಯ ಕೂಗು!

ಓಝೋನ್ ಕೊಡೆಗೆ ಮಾರಕವಾಗುವ ಮಾಲಿನ್ಯಕಾರಕಗಳ ಬಿಡುಗಡೆ ಪ್ರಮಾಣ ಕ್ಷೀಣಿಸುತ್ತಿರುವುದನ್ನು ವೈಜ್ಞಾನಿಕ ಮೌಲ್ಯಮಾಪನ ದೃಢೀಕರಿಸಿದೆ

• ಬಿ.ಎಸ್.ಭಗವಾನ್

ವಾಯುಗುಣ ಬದಲಾವಣೆ, ಮಾಲಿನ್ಯ, ಜೀವವೈವಿಧ್ಯದ ಅವನತಿ- ಇವು ಭೂಗ್ರಹ ಎದುರಿಸುತ್ತಿರುವ ತ್ರಿವಳಿ ಬಿಕ್ಕಟ್ಟುಗಳು. ಓಝೋನ್ ಪದರವು ನೆಲದಿಂದ 15-50 ಕಿ.ಮೀ.ವರೆಗಿನ ಎತ್ತರದ ವ್ಯಾಪ್ತಿಯ ವಾಯುಮಂಡಲದಲ್ಲಿನ ಸ್ತರಗೋಳವೆಂಬ ಭಾಗದಲ್ಲಿ ಅತಿ ಹೆಚ್ಚಾಗಿ ದಟ್ಟೈಸಿದೆ. ವಾಯುಮಂಡಲದಲ್ಲಿ ಓಝೋನ್ ಪದರದ ಸರಾಸರಿ ದಪ್ಪ 3 ಮಿ.ಮೀ. ಅಂದರೆ, ಎರಡು ನಾಣ್ಯಗಳನ್ನು ಅಂಟಿಸಿ ಒಂದಾಗಿಸಿದಾಗಿನ ದಪ್ಪ.

ಒಂದುವೇಳೆ ಓಝೋನ್ ಪದರ ಇಲ್ಲದಿದ್ದರೆ ಕೋಟ್ಯಂತರ ಮಂದಿ ಚರ್ಮವ್ಯಾಧಿಯಿಂದ ಬಳಲಬೇಕಾಗುತ್ತಿತ್ತು. ಬೆಳೆಗಳ ಇಳುವರಿಯೂ ಕಡಿಮೆಯಾಗುತ್ತಿತ್ತು.

ಅಂದಹಾಗೆ ಬುಧ, ಗುರು, ಶನಿ, ಮತ್ತು ನೆಪ್ಚೂನ್ ಗ್ರಹಗಳಿಗೆ ಓಝೋನ್ ಪದರದ ಭಾಗ್ಯವಿಲ್ಲ. ಭೂಮಿಯ ಏಕೈಕ ಉಪಗ್ರಹ ಚಂದ್ರನಿಗೂ ಓಝೋನ್ ಚಾಮರದ ವರವಿಲ್ಲ. 1985ರಲ್ಲಿ ವಿಜ್ಞಾನಿಗಳು ಅಂಟಾರ್ಕ್ಟಿಕಾದ ಮೇಲೆ ಓಝೋನ್ ಪದರ ಸವೆದಿರುವ ಆಘಾತಕಾರಿ ಅಂಶವನ್ನುಗುರುತಿಸಿದರು.ಪರಿಸರಹಾನಿಕುರಿತಅನೇಕ ಸಂಗತಿಗಳು ಹಾಗೂ ಅವುಗಳ ನಿವಾರಣೋಪಾಯ ಕುರಿತ ಗಂಭೀರ ಚರ್ಚೆಗೆ ಅದು ಗ್ರಾಸವಾಯಿತು. ವಾಸ್ತವವಾಗಿ 'ಓಝೋನ್ ರಂಧ್ರ' ಎಂಬುದು ರಂಧ್ರವಲ್ಲ. ಅದು ಓಝೋನ್ ಪದರ ತೆಳುವಾಗುತ್ತಿರುವ ವಲಯ.

1987ರ ಸೆಪ್ಟೆಂಬರ್ 16ರಂದು ಕೆನಡಾ ದೇಶದ ಮಾಂಟ್ರಿಯಲ್ ನಗರದಲ್ಲಿ ವಿಶ್ವದ 197 ದೇಶಗಳು ಭಾಗವಹಿಸಿದ್ದ ಐತಿಹಾಸಿಕ ಸಭೆ ಅದು. ಓಝೋನ್ ಪದರದ ಸವಕಳಿಗೆ ಕಾರಣವಾಗುವ ವಸ್ತುಗಳ ಉತ್ಪಾದನೆ, ಬಳಕೆ, ಆಮದನ್ನು ಸ್ಥಗಿತಗೊಳಿಸಲು ಒಪ್ಪಂದಕ್ಕೆ ಬರಲಾಯಿತು. ಪ್ರಕೃತಿದತ್ತ ರಕ್ಷಾ ಕೊಡೆಯನ್ನು ಜೋಪಾನವಾಗಿ ಕಾಯ್ದುಕೊಳ್ಳುವುದೇ ಗುರಿ. 'ಮಾಂಟ್ರಿಯಲ್ ಪ್ರೊಟೊಕಾಲ್' ಎಂದೇ ಮಹತ್ವ ಪಡೆದ ಇದು ಜಾಗತಿಕ ಮಟ್ಟದಲ್ಲೇ ಅತ್ಯಂತ ಯಶಸ್ವಿಯಾದ, ಪರಿಸರ ಕಾಪಿಡುವ ಶಿಷ್ಟಾಚಾರ ಸಂಹಿತೆ. ಓಝೋನ್ ಕೊಡೆಗೆ ಮಾರಕವಾಗುವ ಮಾಲಿನ್ಯಕಾರಕಗಳ ಬಿಡುಗಡೆಯ ಪ್ರಮಾಣ ಎರಡು ದಶಕಗಳಿಂದ ಈಚೆಗೆ ಸುದೈವದಿಂದ ಕ್ಷೀಣಿಸುತ್ತಿದೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ವೈಜ್ಞಾನಿಕ ಮೌಲ್ಯಮಾಪನ ಇದನ್ನು ದೃಢೀಕರಿಸಿದೆ.

ಸ್ಪ್ರೇಯರ್, ರೆಫ್ರಿಜಿರೇಟರ್, ಏರ್ ಕಂಡೀಷನರ್‌ನಂತಹ ವಸ್ತುಗಳಲ್ಲಿ ಮನುಷ್ಯಕೃತ ಕ್ಲೋರೊಫ್ಲೂರೊ ಕಾರ್ಬನ್‌ಗಳೆಂಬ (ಸಿಎಫ್‌ಸಿ) ಸಂಯೋಜಿತ ರಾಸಾಯನಿಕ ಅನಿಲಗಳನ್ನು ಬಳಸಲಾಗುತ್ತದೆ. ಸೂರ್ಯನ ವಿಕಿರಣಗಳು ಇಂಗಾಲ-ಕ್ಲೋರಿನ್ ಬಂಧವನ್ನು ಬಿಡಿಸುತ್ತವೆ. ಓಝೋನ್ ಅಣುಗಳನ್ನು ಕ್ಲೋರಿನ್ ಹಾಳುಮಾಡುತ್ತದೆ. ಸಿಎಫ್‌ಸಿ ಅಣುಗಳು ವಾಯುಮಂಡಲ ತಲುಪಲು ಐದಾರು ವರ್ಷಗಳೇ ಬೇಕು. ಅವು ನೂರು ವರ್ಷಗಳ ತನಕ ಅಲ್ಲೇ ಉಳಿಯುತ್ತವೆ. ಒಂದೇ ಒಂದು ಸಿಎಫ್‌ಸಿ ಅಣು ಒಂದು ಲಕ್ಷ ಓಝೋನ್ ಅಣುಗಳನ್ನು ನಾಶಪಡಿಸಬಲ್ಲದು! ಸಿಎಫ್‌ಸಿ ಅಣುಗಳು ಗಾಳಿಗಿಂತ ಭಾರವೆ. ಆದರೆ ವಾಯುಮಂಡಲ ಚಲನಶೀಲವಾದ್ದರಿಂದ ಅದು ಅವನ್ನು ಹೊತ್ತೊಯ್ಯುತ್ತದೆ. ಎಂದಮೇಲೆ ಸಿಎಫ್‌ಸಿ ಬಳಕೆ ಹೆಚ್ಚಿದಷ್ಟೂ ಅತಿನೇರಳೆಗಳ ಕಾರುಬಾರು.

'ನರಿ ಕೂಗು ಗಿರಿಗೆ ಕೇಳಿಸೀತೆ?' ಎಂಬ ಆಡುನುಡಿಯಿದೆ. 'ಭೂಮಿ ಒಂದೇ, ಓಝೋನ್ ರಕ್ಷಾ ಕವಚ ಒಂದೇ. ಅದನ್ನು ಕಳೆಯದಿರಿ' ಎಂಬ, ವಿಜ್ಞಾನಿಗಳು, ಪರಿಸರವಾದಿಗಳ ಒಕ್ಕೊರಲಿನ ಮೊರೆ ಫಲ ನೀಡಿದೆ. ಅಂತೂ ಆ ಆಡುನುಡಿಯನ್ನು ಸುಳ್ಳಾಗಿಸುತ್ತಿದೆ. ಪ್ರಸ್ತುತ ಶತಮಾನದ ಮಧ್ಯದ ವೇಳೆಗೆ ಧರೆಗೆ ಸುಸ್ಥಿರ ಓಝೋನ್ ಕೊಡೆ ಮರುಲಭಿಸಲಿದೆ. 2000ದ ಸೆಪ್ಟೆಂಬರ್‌ನಲ್ಲಿ ಓಝೋನ್ ಪದರದ ಸವಕಳಿ ಬಹು ದೊಡ್ಡದಿತ್ತು. ಆಗ ಅದರ ವಿಸ್ತಾರ 2.8 ಕೋಟಿ ಚದರ ಕಿ.ಮೀ. ಅಂದರೆ ಇಡೀ ಯುರೋಪ್ ದೇಶಗಳ ಏಳು ಪಟ್ಟು ವಿಸ್ತೀರ್ಣ! ಆದರೆ 2005ರಲ್ಲಿ ಅಂಟಾರ್ಕ್ಟಿಕಾದಲ್ಲಿ ಗುರುತಿಸಲಾದ ಓಝೋನ್ ಪದರಕ್ಕೆ ಹೋಲಿಸಿದರೆ ಇಂದಿಗೆ ಶೇ 20ರಷ್ಟು ರಂಧ್ರ ಮುಚ್ಚಿದೆ. ಮಾಂಟ್ರಿಯಲ್ ಶಿಷ್ಟಸಂಹಿತೆಯ ಶಿಸ್ತುಪಾಲನೆ ಇದೇ ರೀತಿ ಮುಂದುವರಿದರೆ, 2066ರ ವೇಳೆಗೆ 1980ರಲ್ಲಿದ್ದ ವಿಸ್ತಾರಕ್ಕೇ ಓಝೋನ್ ರಂಧ್ರ ಮರಳುತ್ತದೆ. ಜಗತ್ತಿನ ಉಳಿದ ಪ್ರದೇಶಗಳಲ್ಲೂ ಇಂಥದ್ದೇ ಸುಧಾರಣೆಯನ್ನು ನಿರೀಕ್ಷಿಸಬಹುದು. 37 ವರ್ಷಗಳ ಹಿಂದೆ ಆದ ಒಪ್ಪಂದದ ಸತತ ಮತ್ತು ಕಟ್ಟುನಿಟ್ಟಿನ ಜಾರಿಯ ಫಲವಿದು.

ಪೂರ್ವ ಆಫ್ರಿಕಾದ ರುವಾಂಡಾದ ರಾಜಧಾನಿ ಕಿಗಾಲಿಯಲ್ಲಿ 2016ರ ಅಕ್ಟೋಬರ್ 15ರಂದು 28ನೇ ಸಭೆ ನಡೆಯಿತು. ಮಾಂಟ್ರಿಯಲ್ ಒಪ್ಪಂದಕ್ಕೆ ಅಲ್ಪ ತಿದ್ದುಪಡಿಯಾಗಿ ಜಾರಿಗೆ ಬಂದದ್ದೇ 'ಕಿಗಾಲಿ ಒಪ್ಪಂದ'. ಅದರಂತೆ ಸಿಎಫ್‌ಸಿ ಬದಲು ಹೈಡ್ರೊಫ್ಲೂರೊಕಾರ್ಬನ್‌ಗಳನ್ನು (ಎಚ್ಎಫ್‌ಸಿ) ಉಪಯೋಗಿಸತೊಡಗಿದ್ದು ಉತ್ತಮ ಹೆಜ್ಜೆ. ಆದರೆ ಅವನ್ನು ಬಳಸುವುದರಿಂದ ಜಾಗತಿಕ ಉಷ್ಣತೆ ಏರುತ್ತದೆ ಎಂಬುದೇ ಸವಾಲು. ಭಾರತದಲ್ಲಿ ಎಚ್ಎಫ್‌ಸಿ ಬಳಕೆಗೂ ಕಡಿವಾಣ ಹಾಕಿ, 2030ರ ವೇಳೆಗೆ ಮಹತ್ತರ ಗುರಿ ತಲುಪುವ ಆಶಯವಿದೆ.

ಓಝೋನ್ ಪದರದ ಸವಕಳಿ ನಿಯಂತ್ರಣಕ್ಕೆ ಬಂದದ್ದು ಪರಿಸರದ ಇತಿಹಾಸದಲ್ಲಿ ಅನನ್ಯ ಮಜಲು. ಪ್ರಯತ್ನದಲ್ಲಿ ಏರಿಳಿತಗಳು ಸಹಜ. ವಿಜ್ಞಾನ ಮತ್ತು ರಾಜಕೀಯ ಇಚ್ಛಾಶಕ್ತಿ ಒಂದಾದರೆ ಜಗತ್ತನ್ನೇ ಸುಧಾರಿಸಬಹುದು. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮಗಳ ಕಾರ್ಯದರ್ಶಿ ಮೆಗ್ ಸೆಕಿ ಹೇಳುತ್ತಾರೆ 'ಸಾರ್ವತ್ರಿಕ ಕ್ರಿಯೆಗೆ ವಿಜ್ಞಾನವೇ ತಳಹದಿ. ಜಾಗತಿಕವಾಗಿ ಪರಿಸರ ಎದುರಿಸುವ, ಮೇಲ್ನೋಟಕ್ಕೆ ಪರಿಹಾರ ದುಸ್ತರವೆಂದು ತೋರುವ ಸಮಸ್ಯೆಯೂ ಅದಕ್ಕೆ ಮಣಿಯುತ್ತದೆ'.

ವಾಚಕರ ವಾಣಿ

ಜನಸ್ನೇಹಿ ಕಾರ್ಯಕ್ರಮಕ್ಕಷ್ಟೇ ಜನಮೆಚ್ಚುಗೆ

ಪ್ರಜಾಪ್ರಭುತ್ವದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಪ್ರಯತ್ನ ಅಪೇಕ್ಷಣೀಯ. ಈ ದಿಸೆಯಲ್ಲಿ 'ಪ್ರಜಾಪ್ರಭುತ್ವ ದಿನಾಚರಣೆ'ಯ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಭಾನುವಾರ ಬೀದರ್‌ನಿಂದ ಚಾಮರಾಜನಗರದವರೆಗೆ ಹಮ್ಮಿಕೊಂಡಿದ್ದ 2,500 ಕಿಲೊಮೀಟರ್ ಉದ್ದದ ಮಹತ್ವಾಕಾಂಕ್ಷಿ ಮಾನವ ಸರಪಳಿ ಕಾರ್ಯಕ್ರಮವು ಹೆದ್ದಾರಿಯಲ್ಲಿ ಟ್ರಾಫಿಕ್ ಜಾಮ್‌ಗೆ ಕಾರಣವಾಗಿ ಸಾರ್ವಜನಿಕರಿಗೆ ಬಹಳ ತೊಂದರೆ ಉಂಟು ಮಾಡಿತು. ಪೂನಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳಿಗ್ಗೆ ದಾವಣಗೆರೆಗೆ ಹೋಗುವ ಸಂದರ್ಭದಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಲ್ಲುವಂತೆ ಮಾಡಿದ್ದು, ಸರ್ಕಾರದ ನಡೆ ಹೇಗೆ ಜನವಿರೋಧಿ ಆಗಬಹುದು ಎಂಬುದಕ್ಕೆ ನಿದರ್ಶನ. ಇದರ ಜೊತೆಗೆ ಶಾಲಾ ವಿದ್ಯಾರ್ಥಿಗಳನ್ನು ಬಿಸಿಲಿನಲ್ಲಿ ಗಂಟೆಗಟ್ಟಲೆ ನಿಲ್ಲುವಂತೆ ಮಾಡಿದ್ದೂ ಅಕ್ಷಮ್ಯ.

ಸರ್ಕಾರವು ಸಾಧಕ– ಬಾಧಕಗಳ ಬಗ್ಗೆ ಯೋಚಿಸದೆ ಕಾರ್ಯಕ್ರಮ ರೂಪಿಸಿದ ಪರಿಣಾಮ ಇದು. ನೀತಿನಿರೂಪಕರು ಕಾರ್ಯಕ್ರಮವನ್ನು ಜನಸ್ನೇಹಿಯಾಗಿ ರೂಪಿಸಿದರಷ್ಟೇ ಜನರನ್ನು ಮೆಚ್ಚಿಸಲು ಸಾಧ್ಯ.

ಶಶಿಧರ ಭಾರಿಘಾಟ್, ಬೆಂಗಳೂರು

ಬೇಕು ಸ್ವಚ್ಛ ಕೈ, ಬಾಯಿ

ಜಾತಿ ನಿಂದನೆ ಮಾಡಿದ ಮತ್ತು ಘನತ್ಯಾಜ್ಯ ವಿಲೇವಾರಿ ಗುತ್ತಿಗೆಗೆ ಲಂಚದ ಬೇಡಿಕೆ ಇಟ್ಟಿದ್ದ ಆರೋಪದ ಮೇಲೆ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಬಂಧಿಸಿರುವುದಾಗಿ ವರದಿಯಾಗಿದೆ (ಪ್ರ. ವಾ., ಸೆ. 15). ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ವಿಧಾನಸಭೆಯನ್ನು ಪ್ರವೇಶಿಸುವ 224 ಸದಸ್ಯರಲ್ಲಿ ಬಹುತೇಕರ ಕೈ ಮತ್ತು ಬಾಯಿ ಹೀಗೆಯೇ ಇವೆ. ಹಿಂದೆ ಕರ್ನಾಟಕದ ಈ ಪ್ರಜಾ ದೇಗುಲಕ್ಕೆ ಕೆಂಗಲ್ ಹನುಮಂತಯ್ಯ, ಶಾಂತವೇರಿ ಗೋಪಾಲಗೌಡ, ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಜೆ.ಎಚ್. ಪಟೇಲ್, ನಿಜಲಿಂಗಪ್ಪ, ಎಂ.ಪಿ.ಪ್ರಕಾಶ್ ಅವರಂತಹ ಅನೇಕ ನಾಯಕರು ಆಯ್ಕೆಯಾಗಿದ್ದರು. ಅಲ್ಲಿಗೆ ಈಗ ಅದೆಂತಹ ವ್ಯಕ್ತಿತ್ವಗಳು ಆಯ್ಕೆಯಾಗುತ್ತಿವೆ ಸ್ವಾಮಿ!

ಮತದಾರರು ಗಂಭೀರವಾಗಿ ಯೋಚಿಸಿ ಮತ ಚಲಾವಣೆ ಮಾಡಬೇಕು. ಆಗಮಾತ್ರ, ವಿಧಾನಸಭೆಗೆ ಶುದ್ಧ ಹಸ್ತ ಮತ್ತು ಸ್ವಚ್ಛ ಬಾಯಿಯ ಮುಖಂಡರು ಆಯ್ಕೆಯಾಗಬಹುದು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಹೃದಯಕ್ಕೆ ಹತ್ತಿರ

ಕನ್ನಂಬಾಡಿ ಕಟ್ಟಿ
ಲಕ್ಷಾಂತರ ಜನರ
ಬದುಕಿಗೆ ಹಸಿರಾದ
ಸರ್ ಎಂ.ವಿ.
ನಮ್ಮೆಲ್ಲರ ಹೃದಯಕ್ಕೆ
ತುಂಬಾ ಹತ್ತಿರ
ಯಾಕೆಂದರೆ ಅವರು
ಎಂಜಿ'ನಿಯರ್'!
(ಸೆ. 15– ಸರ್ ಎಂ.ವಿಶ್ವೇಶ್ವರಯ್ಯ
ಅವರ ಜನ್ಮದಿನ)

ಆರ್.ನಾಗರಾಜ್, ಗೊರೂರು

ನಡೆಯಲಿ ಸ್ವಚ್ಛ ಗ್ರಾಮ ಅಭಿಯಾನ

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯ (ಸೆ. 17) ಪ್ರಯುಕ್ತ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳು ನಡೆಯುತ್ತವೆ. ವಿಶೇಷವಾಗಿ ಕಲಬುರಗಿಯಲ್ಲಿ ಮುಖ್ಯಮಂತ್ರಿ ಧ್ವಜಾರೋಹಣ ನೆರವೇರಿಸಿ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳನ್ನು ಘೋಷಿಸುವುದು ಸಾಮಾನ್ಯ. ಈ ವರ್ಷ ಕಲಬುರಗಿ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಸಚಿವ ಸಂಪುಟ ಸಭೆಯನ್ನು ನಡೆಸುವ ಕಾರ್ಯಕ್ರಮವಿದೆ. ಕಲ್ಯಾಣ ಕರ್ನಾಟಕವು ಸಮಸ್ಯೆಗಳ ಸರಮಾಲೆಯನ್ನೇ ಹೊದ್ದು ಕೊರಗುತ್ತಿದೆ. ಗ್ರಾಮೀಣ ಭಾಗಗಳ ಸ್ವಚ್ಛತೆಯಂತೂ ಶೋಚನೀಯವಾಗಿದೆ. ಅಲ್ಲಿನ ಬೀದಿಗಳಲ್ಲಿ ಸದಾ ಕೊಳಕು ನೀರು ಹರಿಯುತ್ತಿರುತ್ತದೆ. ಈ ಬಾರಿಯ ಸಚಿವ ಸಂಪುಟ ಸಭೆಯಲ್ಲಿ, ಕಲ್ಯಾಣ ಕರ್ನಾಟಕದ ಗ್ರಾಮೀಣ ಪ್ರದೇಶಗಳ ಕುರಿತು ಅಭಿಯಾನದ ಮಾದರಿಯಲ್ಲಿ 'ಸ್ವಚ್ಛ ಗ್ರಾಮ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆದ್ಯತೆ ನೀಡಬೇಕು. ಬಯಲುಸೀಮೆಯಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣಗೊಂಡ ವರದಿಗಳೂ ಬರುತ್ತಿರುತ್ತವೆ. ಹೀಗಾಗಿ, ಇಲ್ಲಿನ ಗ್ರಾಮೀಣ ಪ್ರದೇಶಗಳ ಸ್ವಚ್ಛತೆಯ ಕಡೆ ಸರ್ಕಾರ ಗಮನ ನೀಡಬೇಕಾಗಿರುವುದು ಅತಿ ಜರೂರಾಗಿದೆ.

ತಿರುಪತಿ ನಾಯಕ್, ಕಲಬುರಗಿ

ಮಹೋನ್ನತ ಜೀವನಮೌಲ್ಯ ಮಲಿನಗೊಳಿಸುವುದೇಕೆ?

'ಭಾರತ ಜಾತ್ಯತೀತ ದೇಶ ಎಂದು ಮಾತಿನಲ್ಲಿ ಹೇಳುತ್ತೇವೆ. ಆದರೆ ಎಲ್ಲ ಕಡೆ ಜಾತಿವಾದವೇ ಕಾಣುತ್ತಿದೆ. ಎಲ್ಲರೂ ಜಾತಿ ಪದ್ಧತಿ ಆಚರಿಸುವಾಗ ನಾವು ಲಿಂಗಾಯತರು ಹಿಂದಕ್ಕೆ ಸರಿಯುವುದರಲ್ಲಿ ಅರ್ಥವಿಲ್ಲ' ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರತಿಪಾದಿಸಿರುವುದು (ಪ್ರ.ವಾ., ಸೆ. 15) ಆಘಾತಕಾರಿ. 'ಲಿಂಗಾಯತ' ಎನ್ನುವುದು ಜಾತಿಯೆ, ಮತವೆ ಅಥವಾ ಒಂದು ಧರ್ಮವೆ ಎಂದು ನಾವಿಂದು ಪ್ರಶ್ನಿಸಿಕೊಳ್ಳಬೇಕಾಗಿದೆ. ಮೊದಲಿಗೆ ಚಾತುರ್ವರ್ಣಗಳೆಂದು ವಿಭಾಗಿಸಲ್ಪಟ್ಟು ನಂತರ ಅದೇ ಪದ್ಧತಿಯು ಜಾತಿಗಳೆಂಬ ತಾರತಮ್ಯಕ್ಕೆ ಎಡೆಮಾಡಿಕೊಟ್ಟ ವೈದಿಕ ವ್ಯವಸ್ಥೆಯನ್ನು ವಿರೋಧಿಸಿ ಹಾಗೂ ನಿರಾಕರಿಸಿ ಸ್ಥಾಪನೆಗೊಂಡ ಸರ್ವಸಮಾನತೆಯ, ದಯಾಮೂಲವಾದ ಒಂದು ಸಾಮಾಜಿಕ ಸ್ವರೂಪವನ್ನು ಜಾತಿಯ ಮಟ್ಟಕ್ಕೆ ಇಳಿಸುವುದು, ನೂರಾರು ವಿಭೂತಿಪುರುಷರು ಈ ಮಾನವಕೋಟಿಗೆ ನೀಡಿದ ಕಾಣ್ಕೆಗೆ ಮಾಡಿದ ಅಪಚಾರವಲ್ಲವೇ?

ಬಸವಣ್ಣನವರ ವಿಚಾರಗಳ ಕುರಿತು ಗಾಂಧೀಜಿ, '800 ವರ್ಷಗಳ ಪೂರ್ವದಲ್ಲಿ ಬಸವೇಶ್ವರರು ಬೋಧಿಸಿದ ಹಾಗೂ ಆಚರಿಸಿದ ತತ್ವಗಳನ್ನು ಅನುಷ್ಠಾನಕ್ಕೆ ತರಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಅದರಲ್ಲೂ ಅಸ್ಪೃಶ್ಯತೆಯ ನಿವಾರಣೆ ಮತ್ತು ಕಾಯಕದ ಮಹಿಮೆ ಅವರ ಬೋಧನೆಗಳ ಪ್ರಮುಖ ಅಂಶಗಳಾಗಿವೆ. ಅವರಲ್ಲಿ ಜಾತಿಯ ಛಾಯೆಯೇ ಕಾಣಸಿಗದು' ಎಂದು ಪ್ರಶಂಸಿಸಿರುವುದನ್ನು ನಾವು ಮರೆಯಬಾರದು. ಬಸವಣ್ಣನವರ ಮುಂದಾಳತ್ವದಲ್ಲಿ ನೂರಾರು ದಾರ್ಶನಿಕರಿಂದ ರೂಪುಗೊಂಡ 'ಲಿಂಗಾಯತ' ಜೀವನಮೌಲ್ಯಗಳು ಜಗತ್ತಿಗೆ ಮಾದರಿ. ಅಂತಹ ಮಾನವೀಯ ಚಿಂತನೆಗಳನ್ನು, 'ಲಿಂಗಾಯತ' ದರ್ಶನವನ್ನು ಅಂಧ ಜಾತಿಪ್ರೇಮದ ದುಷ್ಪ್ರಭಾವಕ್ಕೆ ಒಳಗಾಗಿ ಜಾತಿಯ ಮಟ್ಟಕ್ಕೆ ಇಳಿಸಿ, ಮಲಿನಗೊಳಿಸಲು ಕರೆ ಕೊಡುವುದು ಸರಿಯಲ್ಲ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಲಸೆ

ವಲಸೆಯು ಜೀವ ವಿಕಾಸದಷ್ಟೇ ಹಳೆಯದು. ಶಿಕ್ಷಣ, ಕೆಲಸ, ಆಂತರಿಕ ಬಿಕ್ಕಟ್ಟು, ಹವಾಮಾನ ವೈಪರೀತ್ಯ ಮುಂತಾದ ಕಾರಣಗಳಿಗಾಗಿ ಹಳ್ಳಿಯಿಂದ ನಗರಕ್ಕೆ, ನಗರದಿಂದ ನಗರಕ್ಕೆ, ದೇಶದಿಂದ ದೇಶಕ್ಕೆ ವಲಸೆ ಹೋಗುತ್ತಾರೆ. ಭಾರತದಿಂದ ವಲಸೆ ಹೋಗುವವರು ಜಗತ್ತಿನಲ್ಲಿಯೇ ಅತಿ ಹೆಚ್ಚು, ವಲಸಿಗರಿಂದ ಭಾರತಕ್ಕೆ ಅತಿ ಹೆಚ್ಚು ಹಣ ಹರಿದುಬರುತ್ತಿದ್ದು, ಅದರ ಮೊತ್ತ ಹೊಸ ದಾಖಲೆ ನಿರ್ಮಿಸಿದೆ. ವಿಶ್ವ ವಲಸೆಯ ಅಂಕಿಅಂಶಗಳು ಆಯಾ ದೇಶಗಳ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯನ್ನೂ ಹೇಳುತ್ತವೆ

ಭಾರತದಲ್ಲಿಯೇ ಅತಿ ಹೆಚ್ಚು

ಜಾಗತಿಕ ಮಟ್ಟದಲ್ಲಿ ವಲಸೆ ಪ್ರಮಾಣ

- 28.1 ಕೋಟಿ (3.6 %) ವಲಸಿಗರ ಸಂಖ್ಯೆ
- 13.5 ಕೋಟಿ (3.5%) ಮಹಿಳಾ ವಲಸಿಗರ ಸಂಖ್ಯೆ
- 14.6 ಕೋಟಿ (3.7%) ಪುರುಷ ವಲಸಿಗರ ಸಂಖ್ಯೆ
- 2.8 ಕೋಟಿ (1.4%) ಮಕ್ಕಳ ವಲಸೆ ಪ್ರಮಾಣ (2020ರ ದತ್ತಾಂಶ)
- 16.9 ಕೋಟಿ ಕಾರ್ಮಿಕರ ವಲಸೆ ಪ್ರಮಾಣ (2019ರ ದತ್ತಾಂಶ)
- 8,500 ಸಾವಿಗೀಡಾದ/ನಾಪತ್ತೆಯಾದ ವಲಸಿಗರ ಸಂಖ್ಯೆ (2023ರ ದತ್ತಾಂಶ)

• ಬಿ.ವಿ.ಶ್ರೀನಾಥ್

ಜಗತ್ತಿನಲ್ಲಿ ಬಹುತೇಕರು ತಾವು ಹುಟ್ಟಿದ ನೆಲದಲ್ಲಿಯೇ ಜೀವಿಸುತ್ತಿದ್ದು, 30 ಮಂದಿಯಲ್ಲಿ ಒಬ್ಬರು ಮಾತ್ರ ವಲಸಿಗರಾಗಿದ್ದಾರೆ. ಆದರೂ ಜಾಗತಿಕ ಮಟ್ಟದಲ್ಲಿ ವಲಸಿಗರ ಸಂಖ್ಯೆ ದೊಡ್ಡದಾಗಿದ್ದು, ವರ್ಷದಿಂದ ವರ್ಷಕ್ಕೆ ಅವರ ಸಂಖ್ಯೆ ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಹವಾಮಾನ ಬದಲಾವಣೆಯು ಜಾಗತಿಕ ಮಟ್ಟದಲ್ಲಿ ವಲಸೆಗೆ ಬಹಳ ದೊಡ್ಡ ಕಾರಣವಾಗಿದೆ. ಇವುಗಳ ಜತೆಗೆ ರಾಜಕೀಯ ಅಧಿಕಾರ, ಅಸಮರ್ಥ ಸರ್ಕಾರಗಳು, ಆಹಾರ ಉತ್ಪಾದನೆಯ ಜಾಗತೀಕರಣ ಮತ್ತು ಇತರ ಸಾಮಾಜಿಕ ಅಂಶಗಳೂ ದೊಡ್ಡ ಮಟ್ಟದ ವಲಸೆಗೆ ಕಾರಣವಾಗಿವೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ (ಐಒಎಂ) 'ವಿಶ್ವ ವಲಸೆ ವರದಿ– 2024' ಉಲ್ಲೇಖಿಸಿದೆ.

ಜಗತ್ತಿನ ಶೇ 3.6ರಷ್ಟು ಮಂದಿ ವಲಸಿಗರಾಗಿದ್ದಾರೆ. ಅಂತರರಾಷ್ಟ್ರೀಯ ವಲಸೆಯು ಹೆಚ್ಚು ಸುರಕ್ಷಿತ, ವ್ಯವಸ್ಥಿತ ಹಾಗೂ ನಿರಂತರವಾಗಿರುತ್ತದೆ. ಆದರೆ, ವಿಪತ್ತು, ಬಿಕ್ಕಟ್ಟು ಮತ್ತು ಶಿಕ್ಷೆಯ ಕಾರಣಕ್ಕೆ ಅಂತರರಾಷ್ಟ್ರೀಯ ವಲಸೆಗೆ ಗುರಿಯಾಗುವವರೂ ಇದ್ದಾರೆ. 1970ರಲ್ಲಿ ಜನಸಂಖ್ಯೆಯ ಶೇ 2.3ರಷ್ಟಿದ್ದ ಅಂತಾರಾಷ್ಟ್ರೀಯ ವಲಸಿಗರ ಸಂಖ್ಯೆಯು 2000ದ ಹೊತ್ತಿಗೆ ಶೇ 2.8 ಆಗಿತ್ತು. 2020ರ ಹೊತ್ತಿಗೆ ಅದು ಶೇ 3.6 ಆಗಿದೆ.

ಜಗತ್ತಿನಾದ್ಯಂತ ವಲಸೆ ಎನ್ನುವುದು ಒಂದೇ ರೀತಿ ಇಲ್ಲ. ಆರ್ಥಿಕ, ಭೌಗೋಳಿಕ, ಜನಸಂಖ್ಯೆಗೆ ಸಂಬಂಧಿಸಿದ ಕಾರಣಗಳಿಂದ ಜನ ವಲಸೆ ಹೋಗುತ್ತಿದ್ದಾರೆ. ಇದು ವಲಸೆ ಕಾರಿಡಾರ್‌ಗಳ ಸೃಷ್ಟಿಗೆ ಕಾರಣವಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಮುಂದುವರಿದ ಆರ್ಥಿಕತೆಗಳುಳ್ಳ ದೇಶಗಳಿಗೆ ವಲಸೆ ಹೋಗುವುದು ದೊಡ್ಡ ವಲಸೆ ಕಾರಿಡಾರ್‌ಗಳ ಸೃಷ್ಟಿಗೆ ಕಾರಣವಾಗಿದ್ದರೆ, (ಉದಾಹರಣೆಗೆ, ಅಮೆರಿಕ, ಯುಎಇ, ಸೌದಿ ಅರೇಬಿಯಾ, ಜರ್ಮನಿಯಂಥ ದೇಶಗಳಿಗೆ ಹೋಗುವುದು), ಸಂಘರ್ಷಪೀಡಿತ ಪ್ರದೇಶಗಳಿಂದ ಸುರಕ್ಷಿತವಾಗಿರುವ ದೇಶಗಳಿಗೆ ಹೋಗುವುದು ಮತ್ತೊಂದು ರೀತಿಯ ದೊಡ್ಡ ವಲಸೆ ಕಾರಿಡಾರ್‌ಗೆ ಕಾರಣವಾಗಿದೆ (ಸಿರಿಯಾದಿಂದ ಟರ್ಕಿಗೆ ಹೋಗುವುದು– ಇದು ಜಗತ್ತಿನ ಎರಡನೇ ಅತಿ ದೊಡ್ಡ ವಲಸೆ ಕಾರಿಡಾರ್ ಆಗಿದೆ).

ಯುರೋಪ್ ಮತ್ತು ಏಷ್ಯಾ ಖಂಡಗಳಿಂದ ವಲಸೆ ಹೋಗುವವರ ಪ್ರಮಾಣ ಹೆಚ್ಚಾಗಿದೆ. ಈ ಖಂಡಗಳಿಂದ ಕ್ರಮವಾಗಿ 8.7 ಕೋಟಿ ಮತ್ತು 8.6 ಕೋಟಿ ಮಂದಿ ಹೊರದೇಶಗಳಿಗೆ ವಲಸೆ ಹೋಗಿದ್ದಾರೆ. ಜಗತ್ತಿನ ಶೇ 61ರಷ್ಟು ಅಂತರರಾಷ್ಟ್ರೀಯ ವಲಸಿಗರು ಈ ಎರಡು ಖಂಡಗಳಿಗೆ ಸೇರಿದ್ದಾರೆ. 460 ಕೋಟಿ ಜನಸಂಖ್ಯೆ ಇರುವ ಏಷ್ಯಾದಲ್ಲಿ ಶೇ 40ರಷ್ಟು ಮಂದಿ ಅಂತರ ರಾಷ್ಟ್ರೀಯ ವಲಸಿಗರಾಗಿದ್ದಾರೆ. ಇದರಲ್ಲಿ ಆರು ದೇಶಗಳ ಜನರೇ ಶೇ 20ರಷ್ಟು ಮಂದಿ ಇದ್ದಾರೆ. ಅದರಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಮತ್ತೊಂದೆಡೆ, ಭಾರತಕ್ಕೆ ಹೊರದೇಶಗಳಿಂದ 48.78 ಲಕ್ಷ ವಲಸಿಗರು ಬಂದಿದ್ದು, ಅವರ ಪ್ರಮಾಣವು ಶೇ 0.4 ಆಗಿದೆ.

ಅತಿ ಹೆಚ್ಚು ಮಂದಿ ವಲಸೆ ಹೋಗುತ್ತಿರುವುದು (ಶೇ 79.6) ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮುಂದಿರುವ ದೇಶಗಳಿಗೆ ಎನ್ನುವುದು ಗಮನಾರ್ಹ. ಐಒಎಂ ವರದಿಯಲ್ಲಿ ಜಗತ್ತಿನ ದೇಶಗಳನ್ನು ಅವುಗಳ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ 2022), ಜಾಗತಿಕ ಶಾಂತಿ ಸೂಚ್ಯಂಕ (ಜಿಪಿಐ 2023), ಇನ್‌ಫರ್ಮ್ ರಿಸ್ಕ್ ಇಂಡೆಕ್ಸ್ (ಇನ್‌ಫರ್ಮ್ 2024), ಪಾಸ್‌ಪೋರ್ಟ್ ಸೂಚ್ಯಂಕ (2024) ಮುಂತಾದವನ್ನು ಆಧರಿಸಿ ಪಟ್ಟಿ ಮಾಡಲಾಗಿದೆ. ಅದರಲ್ಲಿ ಭಾರತದ ಸ್ಥಾನ ಸಾಧಾರಣವಾಗಿದ್ದು, ಮಧ್ಯಮ ದೇಶಗಳ ಪಟ್ಟಿಯಲ್ಲಿದೆ.

ಆಧಾರ: ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ (ಐಒಎಂ) 'ವಿಶ್ವ ವಲಸೆ ವರದಿ– 2024'

ಅಭಿವೃದ್ಧಿಯ ಸಾಧನ

ವಲಸೆಯನ್ನು ನಕಾರಾತ್ಮಕ ದೃಷ್ಟಿಕೋನದಿಂದಲೇ ನೋಡುವ ಅಗತ್ಯವಿಲ್ಲ. ವಲಸೆ ಮಾನವ ಅಭಿವೃದ್ಧಿಯ ಪ್ರಮುಖ ಸಾಧನವಾಗಿದ್ದು, ಕೋಟ್ಯಂತರ ವಲಸಿಗರ, ಅವರ ಕುಟುಂಬಗಳ, ಅವರು ಹುಟ್ಟಿದ ದೇಶದ ಅಭಿವೃದ್ಧಿಗೂ ಕಾರಣವಾಗುತ್ತಿದೆ. ಕಾರ್ಮಿಕ ಮಾರುಕಟ್ಟೆಯನ್ನು ವಿಸ್ತರಿಸುತ್ತಿದೆ. ವಲಸಿಗರಿಂದ ಬರುವ ಹಣದ ಮೊತ್ತವು 2000 ಇಸವಿಯಲ್ಲಿ ₹10.74 ಲಕ್ಷ ಕೋಟಿ ಇದ್ದರೆ 2022ರ ವೇಳೆಗೆ ₹69.71 ಲಕ್ಷ ಕೋಟಿ ಆಗಿದೆ. ವಲಸಿಗರಿಂದ ಹರಿದುಬರುತ್ತಿರುವ ಹಣ ಎಂದರೆ, ವಲಸೆ ಹೋದವರು ತಾವು ದುಡಿದ ಹಣವನ್ನು ಹುಟ್ಟಿದ ದೇಶದಲ್ಲಿರುವ ತನ್ನ ಕುಟುಂಬ/ಸಂಬಂಧಿಕರಿಗೆ ಕಳುಹಿಸುವ ಹಣ; ಕಡಿಮೆ ಆದಾಯ ಮತ್ತು ಮಧ್ಯಮ ಆದಾಯದ ದೇಶಗಳು ಹೆಚ್ಚಿನ ಹಣವನ್ನು ಪಡೆಯುತ್ತಿವೆ.

ವಲಸಿಗರಿಂದ ಹೆಚ್ಚು ಹಣ ಹರಿದುಬರುತ್ತಿರುವ ರಾಷ್ಟ್ರಗಳು (ಲಕ್ಷ ಕೋಟಿ)

ದೇಶ	ಮೊತ್ತ
ಭಾರತ	9.33
ಮೆಕ್ಸಿಕೊ	5.13
ಚೀನಾ	4.28
ಫಿಲಿಪ್ಪೀನ್ಸ್	3.19

ವಲಸಿಗರು ಯಾವ ದೇಶದಿಂದ ಎಷ್ಟು ಹಣ ಕಳಿಸುತ್ತಿದ್ದಾರೆ? (ಲಕ್ಷ ಕೋಟಿ)

ದೇಶ	ಮೊತ್ತ
ಅಮೆರಿಕ	6.64
ಸೌದಿ ಅರೇಬಿಯಾ	3.30
ಸ್ವಿಟ್ಜರ್‌ಲ್ಯಾಂಡ್	2.68
ಜರ್ಮನಿ	2.15

ಅಂತರ ರಾಷ್ಟ್ರೀಯ ವಲಸಿಗರ (ದೇಶದಿಂದ ದೇಶಕ್ಕೆ ವಲಸೆ ಹೋಗುವವರು) ಸಂಖ್ಯೆಯಲ್ಲಿ ಭಾರತೀಯರು ಮೊದಲ ಸ್ಥಾನದಲ್ಲಿದ್ದರೆ (1.77 ಕೋಟಿ ಮಂದಿ), ಮೆಕ್ಸಿಕೊ ಮತ್ತು ರಷ್ಯಾ ನಂತರದ ಸ್ಥಾನಗಳಲ್ಲಿವೆ. ಇನ್ನು ಅತಿ ಹೆಚ್ಚು ಮಂದಿ ವಲಸಿಗರು ಹೋಗುವ ದೇಶಗಳ ಪಟ್ಟಿಯಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿ, ಜರ್ಮನಿ ಮತ್ತು ಸೌದಿ ಅರೇಬಿಯಾ ನಂತರದ ಸ್ಥಾನಗಳಲ್ಲಿವೆ.

ವಲಸೆ ಹೋಗುವವರ ಪ್ರಮಾಣ ಹೆಚ್ಚಾಗಿರುವ ದೇಶಗಳು (2020ರ ದತ್ತಾಂಶ)

ದೇಶ	ಸಂಖ್ಯೆ	ಪ್ರಮಾಣ
ಭಾರತ	1.77 ಕೋಟಿ	(1.3 %)
ಮೆಕ್ಸಿಕೊ	1.10 ಕೋಟಿ	(7.9 %)
ರಷ್ಯಾ	1.06 ಕೋಟಿ	(6.8 %)
ಚೀನಾ	98 ಲಕ್ಷ	(0.7 %)
ಬಾಂಗ್ಲಾದೇಶ	73 ಲಕ್ಷ	(4.3 %)

ಹೆಚ್ಚಿನ ಪ್ರಮಾಣದಲ್ಲಿ ವಲಸಿಗರು ಹೋಗುವ ದೇಶಗಳು (2020ರ ದತ್ತಾಂಶ)

ದೇಶ	ಸಂಖ್ಯೆ	ಪ್ರಮಾಣ
ಅಮೆರಿಕ	4.34 ಕೋಟಿ	(13.1 %)
ಜರ್ಮನಿ	1.42 ಕೋಟಿ	(17 %)
ಸೌದಿ ಅರೇಬಿಯಾ	1.30 ಕೋಟಿ	(37.3 %)
ರಷ್ಯಾ	1.15 ಕೋಟಿ	(7.9 %)
ಬ್ರಿಟನ್	89 ಲಕ್ಷ	(13.8 %)

ಭಾರತದಲ್ಲಿ ಕೋವಿಡ್ ಕಾಲದ ಬಿಕ್ಕಟ್ಟು

ಕೋವಿಡ್ ಸಾಂಕ್ರಾಮಿಕದ ಕಾಲದಲ್ಲಿ, 2020ರ ಜುಲೈ ಮಧ್ಯಭಾಗದಲ್ಲಿ, ಜಾಗತಿಕವಾಗಿ 27.5 ಲಕ್ಷ ಮಂದಿ ವಲಸಿಗರು ಸ್ವದೇಶಕ್ಕೆ ಮರಳಲಾಗದೇ ಬಿಕ್ಕಟ್ಟಿನಲ್ಲಿ ಸಿಲುಕಿದ್ದರು. ಹೆಚ್ಚು ಜನರು ಸಿಲುಕಿದ್ದು ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ. ಭಾರತದ ಹಲವು ಭಾಗಗಳಲ್ಲಿ ಕೋವಿಡ್‌ನಿಂದ (ಆಂತರಿಕ ವಲಸಿಗರ) ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ, ಹೆಣ್ಣುಮಕ್ಕಳು ವಿದ್ಯಾಭ್ಯಾಸ ತ್ಯಜಿಸಬೇಕಾಯಿತು. ಅನೇಕ ಹೆಣ್ಣುಮಕ್ಕಳು ಬಾಲ್ಯವಿವಾಹಕ್ಕೆ ಗುರಿಯಾದರು ಎಂದು ಮಕ್ಕಳ ಹಕ್ಕು ರಕ್ಷಣಾ ಸಮಿತಿಗಳು ವರದಿ ನೀಡಿದವು. ಅನೇಕ ಸಾವುಗಳು ಸಂಭವಿಸಿದ್ದು ಕೂಡ ವರದಿಯಾಗಿವೆ.

ಉದ್ಯೋಗನಷ್ಟ, ಸಂಬಳ ಕಡಿತ, ಸಾಮಾಜಿಕ ಭದ್ರತೆಯ ಕೊರತೆ ಅನೇಕ ಭಾರತೀಯ ವಲಸಿಗರನ್ನು ಸಾಲ ಮತ್ತು ಅಭದ್ರತೆಗೆ ಈಡುಮಾಡಿತು. ಅಂತರರಾಷ್ಟ್ರೀಯ ವಲಸಿಗರು ಭಾರತಕ್ಕೆ ವಾಪಸ್ಸಾಗಲು ವಿಮಾನದ ಟಿಕೆಟ್‌ಗಳಿಗಾಗಿ ದೊಡ್ಡ ಮೊತ್ತವನ್ನು ಖರ್ಚು ಮಾಡಬೇಕಾಗಿ ಬಂತು. ಜತೆಗೆ ಕ್ವಾರಂಟೈನ್ ಕೇಂದ್ರಗಳಿಗೆ, ಕೋವಿಡ್ ಪರೀಕ್ಷೆಗೂ ಹಣ ವೆಚ್ಚ ಮಾಡಿದರು. ವಿದೇಶಾಂಗ ಸಚಿವಾಲಯದ ಮಾಹಿತಿಯ ಪ್ರಕಾರ, ಲಾಕ್‌ಡೌನ್ ಘೋಷಣೆ ಮಾಡಿದ ನಂತರದ ಆರು ತಿಂಗಳಲ್ಲಿ 13.85 ಲಕ್ಷ ಭಾರತೀಯ ಪೌರರು ದೇಶಕ್ಕೆ ವಾಪಸ್ ಆಗಿದ್ದರು.

ದೇಶದ ಒಳಗಿನ ವಲಸಿಗರು ಸಂಚಾರ ನಿರ್ಬಂಧಗಳಿಂದಾಗಿ ತೀವ್ರ ಬಿಕ್ಕಟ್ಟನ್ನು ಎದುರಿಸಿದರು. ಅದರಿಂದ ಗ್ರಾಮೀಣ ಭಾಗದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಕೆಲಸದ ಮೇಲೆ ತೀವ್ರವಾದ ಪರಿಣಾಮಗಳು ಉಂಟಾದವು. ನಗರಗಳಿಗೆ ವಲಸೆ ಹೋಗುತ್ತಿದ್ದ ಕಾರ್ಮಿಕ ವರ್ಗದ ಕೆಲಸಗಾರರಲ್ಲಿ ಶೇ 10ರಷ್ಟು ಕುಸಿತ ಉಂಟಾಗಿತ್ತು. ಇದರಿಂದ ನಿರ್ಮಾಣ ವಲಯ ಸೇರಿದಂತೆ ಹಲವು ವಲಯಗಳು ಕಾರ್ಮಿಕರ ಕೊರತೆಯನ್ನು ಅನುಭವಿಸಿದವು.

ದೇಶದ ಆಂತರಿಕ ಪುರುಷ ವಲಸಿಗರ ಮರುವಲಸೆಯ ಪ್ರಮಾಣ ಶೇ 51.6 ಆದರೆ, ಮಹಿಳಾ ವಲಸಿಗರ ಮರುವಲಸೆಯ ಪ್ರಮಾಣ ಶೇ 11 ಆಗಿತ್ತು. ಭಾರತದ ಆಂತರಿಕ ವಲಸೆಯಲ್ಲಿ ಲಿಂಗ ಅಂತರ ಇರುವುದು ಸ್ಪಷ್ಟವಾಗಿದೆ. ಕೋವಿಡ್ ಕಾಲದ ಈ ಅಂತರವನ್ನು ಮತ್ತಷ್ಟು ವಿಶ್ಲೇಷಿಸಲು ದತ್ತಾಂಶದ ಕೊರತೆ ಇದೆ. ಅದರಲ್ಲೂ ಲಿಂಗತ್ವ ಅಲ್ಪಸಂಖ್ಯಾತರ ವಲಸೆ ಸ್ಥಿತಿಗತಿ ಅರಿಯುವ ದಿಸೆಯಲ್ಲಿ ಅಂಕಿಸಂಖ್ಯೆಗಳ ತೀವ್ರ ಕೊರತೆ ಕಂಡುಬಂದಿದೆ.

ನಿರ್ವಸಿತರ ಸಂಖ್ಯೆಯೂ ಏರಿಕೆ

ವಲಸೆಯ ಜತೆಗೆ ಕೆಲವು ದೇಶಗಳಲ್ಲಿ ನಿರ್ವಸಿತರಾಗುತ್ತಿರುವವರ ಸಂಖ್ಯೆಯೂ ದೊಡ್ಡದಿದೆ. ಭಾರತವೂ ಸೇರಿದಂತೆ ಪಾಕಿಸ್ತಾನ, ಬಾಂಗ್ಲಾದೇಶ ಮುಂತಾದ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಪ್ರವಾಹದಿಂದ; ಯುರೋಪ್, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದಲ್ಲಿ ಸಂಘರ್ಷದ ಸ್ಥಿತಿ, ಹಿಂಸಾಚಾರ, ಹವಾಮಾನ ವೈಪರೀತ್ಯಗಳು ಮತ್ತು ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟಿನಂಥ ಕಾರಣಗಳಿಂದ ಲಕ್ಷಾಂತರ ಮಂದಿ ನಿರ್ವಸಿತರಾದ ಬಗ್ಗೆ ಐಒಎಂ ವರದಿ ಉಲ್ಲೇಖಿಸಿದೆ.

ಮಾನವನ ಇತಿಹಾಸದಲ್ಲಿ ಎಂದೂ ಇಲ್ಲದ ರೀತಿಯಲ್ಲಿ ಇಂದು ಹೆಚ್ಚು ಮಂದಿಯನ್ನು ಬಲವಂತವಾಗಿ ನಿರ್ವಸಿತರನ್ನಾಗಿ ಮಾಡಲಾಗುತ್ತಿದೆ. ಹವಾಮಾನ ಬದಲಾವಣೆ, ಪ್ರಾಕೃತಿಕ ವಿಕೋಪಗಳು ಸೇರಿದಂತೆ ಹಲವು ಕಾರಣಗಳಿಂದ 2050ರ ಹೊತ್ತಿಗೆ ಆರು ಖಂಡಗಳ 21.6 ಕೋಟಿ ಮಂದಿ ತಮ್ಮ ದೇಶಗಳನ್ನು ತೊರೆದು ವಲಸೆ ಹೋಗಲಿದ್ದಾರೆ ಎಂದು ವರದಿ ಅಂದಾಜಿಸಿದೆ.

ಸಿನಿ ಬಿಟ್ಸ್

ಈತ 'ಜಾಂಟಿ ಸನ್ ಆಫ್ ಜಯರಾಜ್'

ನಿವಿಷ್ಕ ಪಾಟೀಲ್

ಒಂದು ಕಾಲದಲ್ಲಿ ಭೂಗತಲೋಕದಲ್ಲಿ ಕುಖ್ಯಾತಿ ಗಳಿಸಿದ್ದ ಜಯರಾಜ್ ಬದುಕಿನ ಸುತ್ತ ಸುತ್ತುವ 'ಜಾಂಟಿ ಸನ್ ಆಫ್ ಜಯರಾಜ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟರಾದ ವಿನೋದ್ ಪ್ರಭಾಕರ್ ಮತ್ತು ಶ್ರೀನಗರ ಕಿಟ್ಟಿ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಸುಗೂರುಕುಮಾರ್ ನಿರ್ಮಾಣದ ಚಿತ್ರಕ್ಕೆ ಆನಂದರಾಜ್ ಕತೆ ಬರೆದು ನಿರ್ದೇಶನ ಮಾಡಿದ್ದಾರೆ.

'ಜಯರಾಜ್ ನಂತರದ ದಿನಗಳಲ್ಲಿನ ಹಣಕಾಸು ವ್ಯವಹಾರ, ದಂಧೆಗಳ ಕುರಿತು ಕೇಳಿದ್ದು, ನೋಡಿದ್ದು, ಓದಿದ್ದು ಎಲ್ಲವನ್ನೂ ಸೇರಿಸಿ ಚಿತ್ರಕಥೆ ಬರೆದಿದ್ದೇನೆ. ಜಯರಾಜ್ ಮಗನೇ ಈ ಚಿತ್ರದಲ್ಲಿ ಪಾತ್ರವಾಗಿ ಬರುತ್ತಾರೆ. ಜಯರಾಜ್ ಸಾವಿಗೆ ಕಾರಣವಾದ ಪಾತ್ರಗಳು ಬಂದು ಹೋಗುತ್ತವೆ. ತಾಯಿ ಸೆಂಟಿಮೆಂಟ್, ನವಿರಾದ ಪ್ರೀತಿ ಸನ್ನಿವೇಶಗಳು, ಗೆಳೆತನ ಎಲ್ಲವೂ ಕಥೆಯ ಭಾಗವಾಗಿದೆ. ಹಳೇ ಬೆಂಗಳೂರು ಹೇಗಿತ್ತೆಂದು ನೋಡಬೇಕಾದರೆ, ನಮ್ಮ ಸಿನಿಮಾ ನೋಡಿ' ಎಂದು ಚಿತ್ರದ ಕುರಿತು ನಿರ್ದೇಶಕರು ಮಾಹಿತಿ ನೀಡಿದರು.

ನಾಯಕ ಅಜಿತ್ ಜಯರಾಜ್‌ಗೆ ನಿವಿಷ್ಕ ಪಾಟೀಲ್ ಜೋಡಿಯಾಗಿದ್ದಾರೆ. ರಾಜವರ್ಧನ್, ಶರತ್ ಲೋಹಿತಾಶ್ವ, ಪೆಟ್ರೋಲ್‌ಪ್ರಸನ್ನ, ಕಿಶನ್, ಸೋನುಪಾಟೀಲ್ ಮೊದಲಾದವರು ತಾರಾಗಣದಲ್ಲಿದ್ದಾರೆ.

ವಿಜೇತ್ ಮಂಜಯ್ಯ ಸಂಗೀತ, ಅರ್ಜುನ್ ಆಕೋಟ್ ಛಾಯಾ ಚಿತ್ರಗ್ರಹಣ ಚಿತ್ರಕ್ಕಿದೆ.

'ರಣಾಕ್ಷ'ನ ಟ್ರೇಲರ್ ಬಿಡುಗಡೆ

'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಸೀರುಂಡೆ ರಘು ನಾಯಕನಾಗಿ ನಟಿಸಿರುವ 'ರಣಾಕ್ಷ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದೇವರು, ದೆವ್ವದ ನಡುವಿನ ಸಂಘರ್ಷದ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಚಿತ್ರಕ್ಕೆ ಕೆ.ರಾಘವ ಆ್ಯಕ್ಷನ್ ಕಟ್ ಹೇಳಿದ್ದಾರೆ.

'6 ರಿಂದ 80 ವರ್ಷದವರೂ ಕೂತು ನೋಡುವಂಥ, ಹಳ್ಳಿ ಸೊಗಡಿನ ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರವಿದು. ಯಾವುದೇ ಮಂತ್ರ, ತಂತ್ರ, ಶಕ್ತಿಯಿಂದ ಏನೇ ಸಮಸ್ಯೆ ಎದುರಾದರೂ ಅದನ್ನು ಪರಿಹರಿಸುವುದಕ್ಕೆ ಮನುಷ್ಯನೇ ಬರಬೇಕು ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ಸಕಲೇಶಪುರದಲ್ಲಿ ಚಿತ್ರೀಕರಣ ಮಾಡುವಾಗ ಚಿತ್ರದ ನಾಯಕ ರಘು ಅವರಿಗೆ ಏಟಾಗಿತ್ತು. ಅದರಿಂದ ಚೇತರಿಸಿಕೊಂಡು ನಟಿಸಿದ್ದಾರೆ. ಶೀಘ್ರದಲ್ಲೇ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ಮಾಪಕ ರಾಮು.

ಸೀರುಂಡೆ ರಘು

ನಟ ಸೀರುಂಡೆ ರಘು ಮಾತನಾಡಿ, 'ಸುಮಾರು 20ಕ್ಕೂ ಹೆಚ್ಚು ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಅಭಿನಯಿಸಿ, ಮೊದಲಬಾರಿಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಾಲ್ಕು ಜನ ಸ್ನೇಹಿತರ ಜೊತೆ ಸಾಗುವ ಪಾತ್ರ. ಚಿತ್ರದ ಕೊನೆಯಲ್ಲಿ ಈ ಪಾತ್ರದ ಪಯಣ ಏನೆಂದು ಗೊತ್ತಾಗುತ್ತದೆ' ಎಂದರು.

ರಕ್ಷಾ ಹನುಮಂತು ಹಾಗೂ ರೋಹಿ ಚಿತ್ರದ ನಾಯಕಿಯರು. ವಿಶಾಲ್ ಸಂಗೀತ, ದೀಪಕ್ ಕುಮಾರ್ ಛಾಯಾಚಿತ್ರಗ್ರಹಣವಿದೆ. ಸಕಲೇಶಪುರ, ಹೊನ್ನಾವರ, ಮೂಡಬಿದ್ರೆ, ಕಾರ್ಕಳ ಮೊದಲಾದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಯುವಕನೊಬ್ಬ ಸುತ್ತಿಗೆಯಿಂದ ರೈಲಿನ ಕಿಟಕಿ ಗಾಜನ್ನು ಒಡೆದು ಹಾಕುತ್ತಿರುವ ವಿಡಿಯೊ ಅನ್ನು ಹಲವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ವಿಡಿಯೊ ಹಂಚಿಕೊಳ್ಳುತ್ತಿರುವ ಅನೇಕರು, 'ಜಿಹಾದಿಗಳು ವ್ಯವಸ್ಥಿತವಾಗಿ ನಮ್ಮ ರೈಲ್ವೆಯನ್ನು ಧ್ವಂಸ ಮಾಡುತ್ತಿದ್ದಾರೆ' ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ ಎಕ್ಸ್ ವೇದಿಕೆಯಲ್ಲಿ ಈ ವಿಡಿಯೊ ಹಂಚಿಕೊಂಡಿದ್ದ ಬಳಕೆದಾರರೊಬ್ಬರ ಪೋಸ್ಟ್‌ಗೆ ಮಂಥಿರ ಮೂರ್ತಿ ಎನ್ನುವವರು ಪ್ರತಿಕ್ರಿಯಿಸಿದ್ದಾರೆ. 'ರೈಲ್ವೆಯಲ್ಲಿ ಹಾನಿಗೊಳಗಾದ ಕಿಟಕಿ ಗಾಜನ್ನು ರಿಪೇರಿ ಮಾಡುವ ಕೆಲಸವು ನಿರಂತರವಾಗಿ ನಡೆಯುತ್ತಿರುತ್ತದೆ. ಇದು ಅಂಥದ್ದೇ ಒಂದು ರಿಪೇರಿ ಕೆಲಸದ ವಿಡಿಯೊ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ. ಹಲವು ನಿವೃತ್ತ ರೈಲ್ವೆ ಸಿಬ್ಬಂದಿ ಕೂಡ ಇದನ್ನು ಖಚಿತಪಡಿಸಿದ್ದಾರೆ. ಮೂರ್ತಿ ಅವರು ರೈಲ್ವೆ ಇಲಾಖೆಯಲ್ಲಿ ಹಿರಿಯ ಸೆಕ್ಷನ್ ಇಂಜಿನಿಯರ್ ಆಗಿದ್ದು, ತಮಿಳುನಾಡಿನ ತಿರುನೆಲ್ವೇಲಿ ಜಂಕ್ಷನ್‌ನಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಉಸ್ತುವಾರಿ ಆಗಿದ್ದಾರೆ. ಇನ್ನು ವಿಡಿಯೊದಲ್ಲಿ ವಂದೇ ಭಾರತ್ ರೈಲಿನ ಕಿಟಕಿಯ ಗಾಜು ಒಡೆಯುತ್ತಿರುವ ವ್ಯಕ್ತಿಯು ರಿಪೇರಿ ಕೆಲಸದಲ್ಲಿ ತೊಡಗಿರುವುದಾಗಿ ರೈಲ್ವೆ ಇಲಾಖೆ ಖಚಿತಪಡಿಸಿದೆ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಆಸೆಯೇ ದುಃಖಕ್ಕೆ ಮೂಲ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 23

ಮನಸ್ಸಿನಲ್ಲಿಯೇ ಸುಖ ದುಃಖ ಎಲ್ಲಾ ಐತಿ. ಬಯಕೆಯೇ ದುಃಖ ತಂದುಕೊಡತ್ತೈತಿ. ಹೀಂಗಂದರ ನೀವು 'ಬಯಕೆನೇ ಇರಬಾರದೇನು' ಅಂತ ಕೇಳ್ತೀರಿ. 'ಕಲ್ಲಿಗೂ ಏನೂ ಬಯಕೆ ಇಲ್ಲ. ಬಯಕೆ ಇಲ್ಲ ಅಂದರ ನಾವೂ ಕಲ್ಲಾಗುತೀವಿ' ಅಂತೀರಿ. ಬಯಸೋದಕ್ಕೆ ನಿಮಗೆ ಎಲ್ಲಾ ಹಕ್ಕು ಇದೆ; ಬಯಸಿ. ಆದರೆ, ಬಯಸಿದ್ದೆಲ್ಲಾ ಸಿಗತ್ತೈತಿ ಅಂತ ತಲೆಯೊಳಗೆ ಇಟ್ಟುಕೊಳ್ಳಬೇಡಿ. ಬಯಸಿದ್ದರಿಂದ ದುಃಖ ಆಗಿಲ್ಲ. ಬಯಸಿದ್ದೆಲ್ಲಾ ಸಿಗಬೇಕು ಎಂಬ ನಿಮ್ಮ ಆಸೆ ಐತಲ್ಲ, ಅದರಿಂದ ದುಃಖ ಆಗಿದೆ. ಯಾಕೆಂದರೆ, ಈ ಜಗತ್ತಿನೊಳಗೆ ಬಯಸಿದ್ದು ಸಿಗೋದಿಲ್ಲ. ಬಯಸಿದಷ್ಟು ಸಿಗೋದಿಲ್ಲ. ಬಯಸಿದಂಗೆ ಸಿಗಲ್ಲ. ಸಿಕ್ಕಿದ್ದು ಬಯಸಿದಂಗೆ ಇರಲ್ಲ. ಇದು ಜಗದ ನಿಯಮ. ಬಯಕೆಯೇ ದುಃಖಕ್ಕೆ ಕಾರಣ. ಸುಖದ ಬಯಕೆ ಇಲ್ಲೇನು? ನಮಗೆ ಸುಖ ಬ್ಯಾಡೇನು? ಅಂತ ಕೇಳಿದರೆ ಸುಖ ಬೇಕು. ನಮಗೆ ಯಾವ ವಸ್ತುಗಳು ಸುಖ ಕೊಡುತ್ತವೆ ಅನಕೋತೀವಿ, ಅವು ವಾಸ್ತವದಲ್ಲಿ ಸುಖ ಕೊಡಲು ಸಾಧ್ಯನೇ ಇಲ್ಲ. ಈ ಜಗತ್ತಿನಲ್ಲಿ ವಸ್ತುಗಳು ಸುಖ ಕೊಡುವಂತೆ ತೋರ್ತವೆ. ಆದರೆ, ದುಃಖ ಕೊಟ್ಟೇ ಹೋಗ್ತವೆ. ಯಾವುದು ಸುಖ ಅಂತ ಅನಸ್ತೈತಿ, ಅದು ಜೇನು ಮೆತ್ತಿದ ವಿಷ. ಉದಾಹರಣೆಗೆ, ನೀವು ಎರಡು ಹೋಳಿಗೆ ತಿಂತೀರಿ. ಸುಖ ಅನಸತೈತಿ. 20 ಹೋಳಿಗೆ ತಿಂದರೆ? ಎರಡು ಹೋಳಿಗೆ ಸುಖ ನೀಡಿದರೆ 20 ಹೋಳಿಗೆ ಇನ್ನೂ ಹೆಚ್ಚು ಸುಖ ಇರಬೇಕಿತ್ತಲ್ಲ. ಆದರೆ, ನೀವು ಸಾಕು ಸರಸು ಆಚೆ ಅಂತೀರಿ. ಅಂದರೆ ಸುಖ ಅನ್ನೋದು ಉಣ್ಣೋದರಲ್ಲೂ ಐತಿ, ದೂರ ಸರಿಸೋದರಲ್ಲೂ ಐತಿ. ಯಾವುದೂ ಕಾಯಂ ಸುಖ ಅಂತ ಇಲ್ಲ. ಎಲ್ಲವೂ ಸುಖದಂತೆ ತೋರುತ್ತೈತಿ. ಸುಖ ಅಂದರೆ ಸುಖ ಅಂತಲ್ಲ, ಕಡಿಮೆ ದುಃಖ. ದುಃಖ ಅಂದರೆ ದುಃಖ ಅಂತಲ್ಲ. ಕಡಿಮೆ ಸುಖ ಅಷ್ಟೆ. ಬರುವ ಪರಿಸ್ಥಿತಿಯನ್ನು ಒಪ್ಪಿಕೊಳ್ಳದ ಮನಃಸ್ಥಿತಿಯೇ ದುಃಖ, ಬರುವುದನ್ನು ಒಪ್ಪಿಕೊಳ್ಳುವುದೇ ಸುಖ.

ಯಾವುದು ಬಂದೈತಿ ಅದು ಹೋಗತೈತಿ. ಇದನ್ನು ಮನುಷ್ಯ ತಿಳಕೋಬೇಕು. ಯಾವುದು ಬಯಸಿದ್ವಿ ಅದು ಸಿಗೋದಿಲ್ಲ, ಸಿಕ್ಕರೂ ಕಾಯಂ ನಮ್ ಜೊತೆ ಇರೋದಿಲ್ಲ. ಇದೇ ಸತ್ಯ. ರಷ್ಯಾದ ತತ್ವಶಾಸ್ತ್ರಜ್ಞ ಲಿಯೊ ಟಾಲ್‌ಸ್ಟಾಯ್ ಒಂದು ಕತೆ ಬರೆದಾನ. ಒಬ್ಬ ರಾಜ ಇದ್ದ. ಅವನು ಒಂದು ಡಂಗುರ ಸಾರಿದ. 'ನಾಳೆ ನನ್ನ ಹುಟ್ಟುಹಬ್ಬ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಯಾರು ಎಲ್ಲಿಯವರೆಗೆ ಓಡ್ತಾರೋ ಅಷ್ಟೂ ಭೂಮಿ ಅವರ ಹೆಸರಿಗೆ ಮಾಡ್ತೀನಿ' ಅಂದ. ಮಾರನೆ ದಿನ ಇಡೀ ಊರಿನ ಜನರೆಲ್ಲಾ ಬಂದು ನಿಂತಿದ್ದರು. ಸೀಟಿ ಹೊಡೆದ ತಕ್ಷಣ ಎಲ್ಲಾ ಓಡಲು ಶುರುಮಾಡಿದರು. ಒಬ್ಬ ಮುಂದೆ ಓಡುತ್ತಿದ್ದ. ಸ್ವಲ್ಪ ಹೊತ್ತಿನ ನಂತರ ಅವನಿಗೆ ಬಾಯಾರಿಕೆ ಆಯಿತು, ಹಸಿವಾಯಿತು. ದಣಿವಾರಿಸಿಕೊಳ್ಳೋಣ ಅಂತ ಒಂದೆಡೆ ಕುಳಿತ. ಆದರೆ ಹಿಂದಿನಿಂದ ಜನ ಓಡುತ್ತಾ ಬರುತ್ತಿದ್ದರು. ಕುಳಿತರೆ ಕಷ್ಟ ಅಂತ ಮತ್ತೆ ಓಡತೊಡಗಿದ. ಮಧ್ಯಾಹ್ನನೂ ಊಟಿಲ್ಲ, ನೀರಿಲ್ಲ, ಸಂಜೆನೂ ಏನೂ ಅಲ್ಲ. ಓಡಿ ಓಡಿ ಸಂಜೆಯಾಗುವ ಹೊತ್ತಿಗೆ ಸತ್ತು ಬಿದ್ದ. ಸೂರ್ಯ ಮುಳುಗಿತ್ತು. ಭೂಮಿ ನಕ್ಕಿತ್ತು. ಇವನ ಪ್ರಾಣ ಪಕ್ಷಿ ಹಾರಿಹೋಗಿತ್ತು. ಆಗ ಭೂಮಿ ತಾಯಿ ಅಂದ್ಲು 'ನಿನ್ನಂಗ ಬಹಳ ಮಂದಿ ಓಡ್ಯಾರ, ಓಡಿದಷ್ಟು ನಾನು ಕೊಟ್ಟಿಲ್ಲ. ಬಿದ್ದಷ್ಟೇ ಕೊಟ್ಟೇನಿ' ಅಂತ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತ್ರಯೋದಶಿ ಗಂ. 15-11 ನಕ್ಷತ್ರ: ಧನಿಷ್ಠ ಗಂ. 16-33 ಯೋಗ: ಸುಕರ್ಮ ಗಂ. 11-41 ಕರಣ: ತೈತಿಲ ಗಂ. 15-11, ಸಿಂಹ ಮಾಸದ 30 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 1.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-23 **ಸೂರ್ಯಾಸ್ತ:** 06-27
ಮುಸ್ಲಿಂ ದಿನಾಂಕ: 12 ರಬಿಉಲ್ಲಾವಲ್, ದಿನ ವಿಶೇಷ: ಮಿಲಾದ್-ಉನ್-ನಬಿ ಅಥವಾ-ಈದ್-ಎ-ಮಿಲಾದ್, ಓಣಂ ಮೂರನೇ ದಿನ, ಅದೃಷ್ಟ ಸಂಖ್ಯೆ: 4, 2

ಮೇಷ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳಬಹುದು. ಹಾಗಾಗಿ ಈ ದಿನ ಬಂಗಾರ, ಹಣ ಹಿಡಿದುಕೊಂಡು ಸಂಚರಿಸುವುದು ಬೇಡ. ಆದಾಯಕ್ಕೆ ಹಲವು ಹೊಸ ಮೂಲಗಳನ್ನು ಹುಡುಕುವಿರಿ.

ವೃಷಭ: ಸಹೋದರಿಯ ಮದುವೆಯಂಥ ಸಂದರ್ಭಕ್ಕೆ ಆಪ್ತರೊಬ್ಬರು ನೆರವಿಗೆ ನಿಲ್ಲಲಿದ್ದಾರೆ. ಕಾರಣಾಂತರದಿಂದ ಇಂದು ಕೆಲವು ವ್ಯಕ್ತಿಗಳನ್ನು ನಿರ್ಲಕ್ಷಿಸುವಿರಿ. ಸಹೋದರನ ಓದಿಗಾಗಿ ಖರ್ಚು ಮಾಡಬೇಕಾಗುವುದು.

ಮಿಥುನ: ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ದೂರಾಗುವುವು. ಈ ದಿನ ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಉಪಯೋಗವಾಗಲಿದೆ. ಆರ್ಥಿಕವಾಗಿ ಸದೃಢವಾಗಲಿದ್ದೀರಿ.

ಕರ್ಕಾಟಕ: ಬೇರೆಯವರನ್ನು ಮರಳುಗೊಳಿಸುವ ಮಾತಿನ ಕೌಶಲವಿದೆ. ಅದೇ ಈ ದಿನ ನಿಮಗೆ ಮುಳ್ಳಾಗಬಹುದು. ಸಗಟು ಧಾನ್ಯ ವರ್ತಕರಿಗೆ ಜೋರಾದ ವಹಿವಾಟು ನಡೆದು ಲಾಭ ಬರುವುದು.

ಸಿಂಹ: ಅಧಿಕಾರಿ ವರ್ಗದವರಿಗೆ ಅವರ ತಪ್ಪುಗಳನ್ನು ತಿಳಿಸುವಲ್ಲಿ ಧೈರ್ಯ ಸಾಮರ್ಥ್ಯದ ಜತೆಯಲ್ಲಿ ಸಹೋದ್ಯೋಗಿಗಳಿಂದ ಉತ್ತೇಜನ ಪಡೆಯುವಿರಿ. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು.

ಕನ್ಯಾ: ಕಾರ್ಯದ ಒತ್ತಡ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ ಲಭಿಸಲಿದೆ.

ತುಲಾ: ಕಠಿಣ ಪ್ರಯತ್ನಗಳ ನಂತರವೂ ಇಷ್ಟಪಟ್ಟಿದ್ದು ಸಿಗದೇ ಪ್ರಯತ್ನ ಪಡಬೇಕಾಗುವುದು ಅನಿವಾರ್ಯ. ಗೃಹದಲ್ಲಿನ ಸಮಸ್ಯೆಗಳು ಪತಿ ಪತ್ನಿಯ ಹೊಂದಾಣಿಕೆಯಿಂದ ಪರಿಹಾರವಾಗುವುದು.

ವೃಶ್ಚಿಕ: ಬೇರೆಯವರ ಬಗ್ಗೆ ಅನುಕಂಪ ತೋರುವ ನೀವು ನಿಮ್ಮ ಬಗ್ಗೆ ಗಮನ ಹರಿಸಿ. ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು.

ಧನು: ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಪ್ರಯತ್ನದ ಜತೆಯಲ್ಲಿ ದೇವರ ಅನುಗ್ರಹ ಯೋಜನೆಗೆ ಪುಷ್ಟಿ ಕೊಡುವುದರಿಂದ ಸಂತಸ ಉಂಟಾಗುತ್ತದೆ.

ಮಕರ: ಹೆಂಡತಿಯ ತವರು ಮನೆಗೋಸ್ಕರವಾಗಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬರಬಹುದು. ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ.

ಕುಂಭ: ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಬರಲಿದೆ. ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ನಿಧಾನವಾಗಿ ಪೂರ್ತಿ ಮಾಡುವಂಥ ತೀರ್ಮಾನಕ್ಕೆ ಬರುವುದು ಉತ್ತಮ.

ಮೀನ: ಸಂಬಂಧಗಳಿಗೆ ಬೆಲೆ ಕೊಡುವ ನೀವು ಸಂಬಂಧಿಕರ ಮೊಸಳೆ ಕಣ್ಣೀರಿಗೆ ಸುಲಭವಾಗಿ ಮರುಳಾಗದಿರಿ. ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ದೊರಕುವ ಸೂಚನೆ ಸಿಗುತ್ತದೆ.

ಪದಬಂಧ 5804

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬತ್ತವನ್ನು ಬೇಯಿಸಿಮಾಡಿದ ಅಕ್ಕಿ (5)
3.ನಿಸರ್ಗದಲ್ಲೇ ಪುಸ್ತಕದ ಅಧ್ಯಾಯವನ್ನು ಹುಡುಕಿ! (2)
4.ಅಡಗಿಕೊಳ್ಳಲು ಸೂಕ್ತವಾದ ಕಾಡು! (3)
5.ಇದು ಕಷ್ಟವಲ್ಲ! (3)
7.ತೀರಾ ಉದ್ದವಿರುವ ದಡ (2)
8.ರಭಸವಾಗಿ ಹರಿಯುತಿರುವ ದ್ರವ! (2)
10.ಮರದಲ್ಲಿರುವ ಮೊಸಳೆ (3)
11.ಮಾನವನಲ್ಲೇ ಹೊಸದು ಕಾಣುತ್ತಿದೆ! (2)
13.ಕಾದಾಡುವ ಜಾಗದಲ್ಲಿರುವ ಅರಣ್ಯ (2)
14.ಮಣಿ ಧರಿಸಿದ ಚಲುವೆ ಉಲ್ಟಾ ನಿಂತಿದ್ದಾಳಲ್ಲಾ! (3)
15.ಒಳ್ಳೆಯ ದಾರಿಯಿದು (3)
16.ಕುಶಲ ಎಂದು ಹೀಗೆ ಹೇಳಿ (2)
17.ಪ್ರಾಣವಾಯು ಇಲ್ಲಿದೆ (5)

ಮೇಲಿಂದ ಕೆಳಕ್ಕೆ
2.ದೇವತೆ ಮತ್ತು ರಾಕ್ಷಸ ಒಟ್ಟಿಗಿದ್ದಾರಲ್ಲಾ! (4)
3.ಸರದಲ್ಲೇ ವಿವರಗಳನ್ನೊಳಗೊಂಡುದುದನ್ನು ಹುಡುಕಿ! (4)
4.ಅಧಿಕಾರಯುತವಾಗಿ ಆಡುವ ಮಾತು (6)
6.ರಥಕೊನೆಗಿದ್ದಾಗ ನಿರಾಶೆಹೊಂದಿದವನು ಕಾಣುತ್ತಾನೆ (6)
7.ತೀರದಲ್ಲಿ ಕೈಗೊಂಡಿರುವ ನಿರ್ಣಯ! (3)
9.ಬಿಡುವು ಹೀಗೆ ಬಂದಿದೆ (3)
12.ಕಾಡಿನ ಹೂವು (4)
13.ಪಿತೂರಿ ಕೆಲಸ ನಡೆಯುವ ಸ್ಥಳ (4)



5803ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖಜುತೆ 5.ಗಡಿಯಾರ
6.ವಿದೂಷಕ 8.ಕೆಸರು
11.ಲುಬ್ಧಕ 13.ಪರಿಚ್ಛೇದ
17.ವರ್ಷಾಸನ
18.ಮಾರ್ದನಿ

ಮೇಲಿಂದ ಕೆಳಕ್ಕೆ
1.ಖುತ್ವಿಕ್ಕು 2.ತೆಗಳಿಕೆ
3.ಕುರವಿ 4.ನಿಕಷ
7.ಕರ್ಪೂರ 9.ರುಮಾಲು
10.ಸಂತಾಪ 12.ಕಸಿನಮಾ
14.ರಿಕಾಪು 15.ದವಡೆ
16.ಧಮನಿ

ಸುಡೊಕು 6189

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1		9
	6	9			1		3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6188 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ವಿಮಾನದಲ್ಲಿ 4 ಗಂಟೆ ಸಿಲುಕಿದ ಪ್ರಯಾಣಿಕರು

ಮುಂಬೈ (ಪಿಟಿಐ): ಮುಂಬೈನಿಂದ ದೋಹಾಕ್ಕೆ ಹೊರಟಿದ್ದ ಇಂಡಿಗೊ ಕಂಪನಿಗೆ ಸೇರಿದ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಪ್ರಯಾಣಿಕರು ಸುಮಾರು ನಾಲ್ಕು ಗಂಟೆ ವಿಮಾನದಲ್ಲಿಯೇ ಸಂಕಷ್ಟ ಅನುಭವಿಸಿದ ಪ್ರಸಂಗ ನಡೆದಿದೆ.

ಕೆಲವು ಪ್ರಯಾಣಿಕರು ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ತಾಂತ್ರಿಕ ದೋಷ ಸರಿಪಡಿಸಿದ ಬಳಿಕ ಭಾನುವಾರ ಬೆಳಿಗ್ಗೆ ವಿಮಾನವು ದೋಹಾದತ್ತ ಪ್ರಯಾಣ ಬೆಳೆಸಿದೆ.

ಪ್ರಯಾಣಿಕರು ವಿಮಾನ ಪ್ರವೇಶಿಸಿದ ವೇಳೆಯಲ್ಲಿಯೇ ತಾಂತ್ರಿಕ ದೋಷ ಕಾಣಿಸಿಕೊಂಡಿತು. ವಲಸೆ ಪ್ರಾಧಿಕಾರದ ಅಧಿಕಾರಿಗಳು ವಿಮಾನದಿಂದ ಕೆಳಗೆ ಇಳಿಯಲು ಅವಕಾಶ ನೀಡಲಿಲ್ಲ ಎಂದು ಪ್ರಯಾಣಿಕರೊಬ್ಬರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಈ ತೊಂದರೆ ಬಗ್ಗೆ ಇಂಡಿಗೊ ಕಂಪನಿಯು ಪ್ರಯಾಣಿಕರ ಕ್ಷಮೆ ಯಾಚಿಸಿದೆ. ವಿಮಾನದೊಳಗೆ ಸಂಕಷ್ಟಕ್ಕೆ ಸಿಲುಕಿದ್ದ ಪ್ರಯಾಣಿಕರಿಗೆ ಉಪಾಹಾರ ಸೇರಿ ಅಗತ್ಯ ಸೌಲಭ್ಯ ಕಲ್ಪಿಸಲಾಗಿತ್ತು ಎಂದು ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8TH YEAR OF REMEMBRANCE

LATE PROF. DR B T LAKSHMAN
08-06-1934 - 16-09-2016
FOUNDER CHAIRMAN,
BTL Educational Trust for Rural Development, Bengaluru
BTL Foundation for International Services, Delaware, USA
APOORVA LAKSHMAN
Daughter, Lift Time Trustee, BTL Educational Trust for Rural Development
Bommasandra, Bengaluru

ಚಿರಸ್ಮರಣೆ

ಶ್ರೀ ಬಿ.ಜಿ. ಭಾಸ್ಕರ್ ನಾಯ್ಡು
ಜನನ : 13–9–1948 ನಿಧನ : 16–9–2013
Chairman : SLN GROUP & M/s. Enviro Green Alloys Inc.
ನೀವು ನಮ್ಮನ್ನಗಲಿ ಇಂದಿಗೆ 11 ವರ್ಷಗಳು ಕಳೆದರೂ ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ
ಧರ್ಮಪತ್ನಿ : ಶ್ರೀಮತಿ ಬಿ. ವರಲಕ್ಷ್ಮಿ, ಮಕ್ಕಳು ಮತ್ತು ಬಂಧು–ಮಿತ್ರರು

ಉತ್ತರ ಕ್ರಿಯಾದಿ ಆಹ್ವಾನ
01.07.1961 07.09.2024

ಶ್ರೀ. ಎ.ಬಿ.ಗೌಡ (ಬಾಬು)
ಲೇಟ್ ಅಂದಾನಪ್ಪನವರ ಐದನೇ ಮಗ
ಕಾಮಾಕ್ಷಿಪಾಳ್ಯ, ಬೆಂಗಳೂರು.
ಶ್ರೀಯುತರು ದಿನಾಂಕ 07.09.2024 ರಂದು ಮುಂಜಾನೆ 5.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯಕ್ರಮವನ್ನು ದಿನಾಂಕ 17.09.2024 ನೇ ಮಂಗಳವಾರ ಬೆಳಿಗ್ಗೆ 9.00 ಕ್ಕೆ ಪುಣ್ಯಾಹವನ್ನು ಮೃತರ ಸ್ವಗೃಹದ ಕಾಮಾಕ್ಷಿಪಾಳ್ಯದಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
: ಇಂತಿ ದುಃಖತಪ್ತ ಕುಟುಂಬ :
ಧರ್ಮಪತ್ನಿ: ಶ್ರೀಮತಿ ನಾಗರತ್ನ,
ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.
ಅಂದಾನಪ್ಪನವರ ಕುಟುಂಬವರ್ಗ, ಸ್ನೇಹಿತರು ಮತ್ತು ಬಂಧು ಮಿತ್ರರು
ವಿಳಾಸ: ನಂ. 4, 11ನೇ ಅಡ್ಡರಸ್ತೆ, ಅಂದಾನಪ್ಪ ರಸ್ತೆ, ಕಾಮಾಕ್ಷಿಪಾಳ್ಯ, ಬೆಂಗಳೂರು–560 079.
ಮೊ: 98444 15999, 99000 00736, 98450 72424, 98453 72484

LOOKING FOR JOB OPPORTUNITY
Refer Classifieds on Wednesday

ವಂದೇ ಮೆಟ್ರೊಗೆ ಇಂದು ಚಾಲನೆ

ಮುಂಬೈ (ಪಿಟಿಐ): ಭುಜ್ ಮತ್ತು ಅಹಮದಾಬಾದ್ ನಡುವಿನ ದೇಶದ ಮೊದಲ 'ವಂದೇ ಮೆಟ್ರೊ' ಸೇವೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಚಾಲನೆ ನೀಡಲಿದ್ದಾರೆ.

ತಮ್ಮ ಗುಜರಾತ್ ಭೇಟಿಯ ಸಂದರ್ಭದಲ್ಲಿ ಆರು ವಂದೇ ಭಾರತ್ ರೈಲುಗಳಿಗೂ ಪ್ರಧಾನಿ ಹಸಿರು ನಿಶಾನೆ ತೋರಲಿದ್ದು, ಇದರಲ್ಲಿ ಒಂದು ರೈಲು ಪುಣೆ–ಹುಬ್ಬಳ್ಳಿ ನಡುವೆ ಸಂಚರಿಸಲಿದೆ. 20 ಕೋಚ್‌ಗಳ ಮೊದಲ ವಂದೇ ಭಾರತ್ ರೈಲು ವಾರಾಣಸಿ–ದೆಹಲಿ ನಡುವೆ ಓಡಲಿದೆ.

ಸೆ.18ರಿಂದ ಹುಬ್ಬಳ್ಳಿ–ಪುಣೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಹುಬ್ಬಳ್ಳಿ ನಿಲ್ದಾಣದಿಂದ ಪ್ರತಿ ಬುಧವಾರ, ಶುಕ್ರವಾರ, ಭಾನುವಾರ ಬೆಳಿಗ್ಗೆ 5 ಗಂಟೆಗೆ ಹೊರಡಲಿದ್ದು, ಮಧ್ಯಾಹ್ನ 1.30ಕ್ಕೆ ಪುಣೆ ತಲುಪಲಿದೆ. ಸತಾರಾ, ಸಾಂಗ್ಲಿ, ಮೀರಜ್, ಬೆಳಗಾವಿ, ಧಾರವಾಡ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಸೆ.19ರಿಂದ ಪುಣೆ–ಹುಬ್ಬಳ್ಳಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಪುಣೆ ರೈಲು ನಿಲ್ದಾಣದಿಂದ ಗುರುವಾರ, ಶನಿವಾರ, ಸೋಮವಾರ ಮಧ್ಯಾಹ್ನ 2.15ಕ್ಕೆ ಹೊರಡಲಿದ್ದು, ರಾತ್ರಿ 10.45ಕ್ಕೆ ಹುಬ್ಬಳ್ಳಿ ತಲುಪಲಿದೆ ಎಂದು ಕೇಂದ್ರ ರೈಲ್ವೆ ತಿಳಿಸಿದೆ.

ಗುಂಡಿನ ಚಕಮಕಿ

ಮೆಂಧಾರ್/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಗ್ರಾಮವೊಂದರಲ್ಲಿ ಭದ್ರತಾ ಸಿಬ್ಬಂದಿ ಮತ್ತು ಭಯೋತ್ಪಾದಕರ ಮಧ್ಯೆ ಗುಂಡಿನ ಕಾಳಗ ನಡೆದಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಉಗ್ರರು ಅಡಗಿ ಕುಳಿತ ಖಚಿತ ಮಾಹಿತಿ ಮೇರೆಗೆ ಪೊಲೀಸರು ಮತ್ತು ಸೇನಾ ಸಿಬ್ಬಂದಿ ಶನಿವಾರ ಸಂಜೆ ಜಂಟಿಯಾಗಿ ಪಠಾಣ್‌ತೀರ್ ಪ್ರದೇಶವನ್ನು ಸುತ್ತುವರಿದು, ಶೋಧ ಕಾರ್ಯ ಆರಂಭಿಸಿದ್ದರು. ಈ ವೇಳೆ ಭದ್ರತಾ ಸಿಬ್ಬಂದಿ ಮೇಲೆ ಉಗ್ರರು ಗುಂಡಿನ ದಾಳಿ ಆರಂಭಿಸಿದರು, ಭದ್ರತಾ ಸಿಬ್ಬಂದಿ ಪ್ರತಿದಾಳಿ ಮಾಡಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹330-541
ದ್ವಿತಳಿ (ಬಿ.ವಿ)	₹375-713

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹545
12 ಕ್ಕೆ	₹75
ಮೈಸೂರು	
100ಕ್ಕೆ	₹550

ಮನುಕುಲದ ಬೆಳಕು ಮುಹಮ್ಮದ್ ಪೈಗಂಬರ್

• ಅಬ್ದುಲ್ ರಹಿಮಾನ್

'ಮಾನವ ನಾಗರಿಕತೆಯ ಮೇಲೆ ಅವರು ಬೀರಿದ ಶಾಶ್ವತ ಪ್ರಭಾವ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅವರ ವರ್ಚಸ್ಸಿನ ವಿಸ್ತಾರ, ಸಾಂಸ್ಕೃತಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಜೀವನದಲ್ಲಿ ಅವರ ನಿರಂತರ ಇರುವಿಕೆ, ಅವರ ಧಾರ್ಮಿಕ ಸಿದ್ಧಾಂತ, ಸಮಾಜ ಸುಧಾರಣೆ, ದಾರ್ಶನಿಕ ನಾಯಕತ್ವದಿಂದಾಗಿ ಭೂಗೋಳದಲ್ಲಾದ ಅಗಾಧವಾದ ಪರಿವರ್ತನೆ, ಸಂಘಟಿತ ಸಮಾಜ ರಚಿಸುವಲ್ಲಿ ಅವರ ಪಾತ್ರ..'

-1978ರಲ್ಲಿ ಪ್ರಕಟವಾದ 'The 100: A Ranking of the Most Influential Persons in History' ಎಂಬ ಪುಸ್ತಕದಲ್ಲಿ ಪ್ರವಾದಿ ಮುಹಮ್ಮದ್ ಪೈಗಂಬರ್ ಅವರಿಗೆ ಮೊದಲ ಸ್ಥಾನ ನೀಡಿದ್ದಕ್ಕೆ ಅಮೆರಿಕದ ಖ್ಯಾತ ಖಗೋಳ ಭೌತಶಾಸ್ತ್ರಜ್ಞ, ಲೇಖಕ ಮೈಕೆಲ್ ಎಚ್. ಹಾರ್ಟ್ ಅವರು ನೀಡಿದ ವಿವರಣೆ ಇದು. ಹಾರ್ಟ್ ಅವರ ಈ ಮಾತುಗಳು ಪ್ರವಾದಿ ಮುಹಮ್ಮದರ ವ್ಯಕ್ತಿತ್ವವನ್ನು ಕಟ್ಟಿ ಕೊಟ್ಟಿದೆ.

ಸಣ್ಣ ಮಾತಿಗೂ ಯುದ್ಧ ನಡೆಸುತ್ತಿದ್ದ, ದ್ವೇಷವನ್ನು ತಲೆಮಾರುಗಳಿಗೂ ದಾಟಿಸುತ್ತಿದ್ದ, ಪ್ರತಿಷ್ಠೆಯೇ ಜೀವನವೆಂದು ಬಗೆದಿದ್ದ, ಕುಲವೇ ಶ್ರೇಷ್ಠವೆಂದು ನಂಬಿದ್ದ, ಹೆಣ್ಣು ಮಕ್ಕಳನ್ನು ಜೀವಂತ ಹೂಳುತ್ತಿದ್ದ, ಅಮಲಿನ ದಾಸರಾಗಿದ್ದ ಒಂದು ಜನಾಂಗವನ್ನು ಪುನರುದ್ಧರಿಸಿದ ಶ್ರೇಯ ಪ್ರವಾದಿ ಮುಹಮ್ಮದರಿಗೆ ಸಲ್ಲಬೇಕು. ತನ್ನ ನಡವಳಿಕೆಯಿಂದ ಒಂದು ಯುಗವನ್ನು ಬದಲಾಯಿಸಿದ, ನಾಗರಿಕತೆಗೆ ಹೊಸ ರೂಪ ನೀಡಿ ಈ ಮಟ್ಟದಲ್ಲಿ ಪ್ರಗತಿಗೆ ಕಾರಣವಾದ ಮತ್ತೊಬ್ಬ ವ್ಯಕ್ತಿಯನ್ನು ಇತಿಹಾಸದಲ್ಲಿ ಕಾಣಲು ಸಾಧ್ಯವಿಲ್ಲ. ಅವರ ಬೋಧನೆಗಳ ವ್ಯಾಪ್ತಿ ಹಾಗೂ ಪರಿಣಾಮವೇ ಅವರನ್ನು ಕೇವಲ ಧಾರ್ಮಿಕ ನಾಯಕರಾಗಿ ಮಾತ್ರವಲ್ಲದೆ, ಸಾಮಾಜಿಕ, ರಾಜಕೀಯ ನಾಯಕನಾಗಿ ಚರಿತ್ರೆಯಲ್ಲಿ ಜಾಗ ಪಡೆಯುವಂತೆ ಮಾಡಿದೆ.

ಅರಬರಲ್ಲಿ ಆಳವಾಗಿ ಬೇರೂರಿದ್ದ ಶ್ರೇಷ್ಠತೆಯ ಅಂಧಾಭಿಮಾನವನ್ನು ಹೋಗಲಾಡಿಸಿ, ಮನುಷ್ಯರೆಲ್ಲರೂ ಸಮಾನರೆಂದು ಸಾರಿದರು. ಕಪ್ಪು ಜನಾಂಗದ ಸಯ್ಯಿದ್ ಬಿಲಾಲ್ ಹಾಗೂ ಬಿಳಿವರ್ಣೀಯ ಸಯ್ಯಿದ್ ಸಲ್ಮಾನುಲ್ ಫಾರಿಸ್ ಅವರನ್ನು ಒಂದೇ ತಟ್ಟೆಯಲ್ಲಿ ಉಣ್ಣುವಂತೆ ಮಾಡಿದರು. ಭಾಷೆ, ವರ್ಣ, ಪ್ರಾದೇಶಿಕತೆಗಳನ್ನು ಬದಿಗಿಟ್ಟು ಸಾಮೂಹಿಕ ಪ್ರಾರ್ಥನೆಗೆ ಭುಜಕ್ಕೆ ಭುಜಕೊಟ್ಟು ನಿಲ್ಲುವಂತೆ ಮಾಡಿದರು.

ಇಂದು ಈದ್ ಮಿಲಾದ್

ತಾಯಿಯ ಪಾದದಡಿ ಸ್ವರ್ಗವಿದೆ, ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಹಕ್ಕಿದೆ ಎಂದು ಮಹಿಳಾ ಸಬಲೀಕರಣಕ್ಕೂ ಕಾರಣರಾದರು. ತಮ್ಮ ಕೊನೆಯ ಭಾಷಣದಲ್ಲೂ ಸಮಾನತೆ, ಏಕತೆ, ಸಹಿಷ್ಣುತೆ ಹಾಗೂ ಸಹೋದರತೆಗೆ ಒತ್ತುಕೊಟ್ಟರು. 'ಜಗತ್ತಿಗೆ ಸಮಾನತೆಯ ಸಂದೇಶವನ್ನು ತಂದ ಮಹಾನ್ ವ್ಯಕ್ತಿ ಮುಹಮ್ಮದರ ಮೇಲೆ ನಮ್ಮ ದೃಷ್ಟಿ ಹೊರಳುತ್ತದೆ' ಎಂದು ಸ್ವಾಮಿ ವಿವೇಕಾನಂದರು 1900ರ ಏಪ್ರಿಲ್ 3ರಂದು ಅಮೆರಿಕದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದರು.

ಮುಹಮ್ಮದರ ಶಾಂತಿ, ಸಹಬಾಳ್ವೆಯ ಸಂದೇಶವು ಧರ್ಮಗಳ ನಡುವೆ ಸಂವಾದ ಮತ್ತು ಸಹಕಾರವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮದೀನಾದಲ್ಲಿ ಹಲವು ಸಮುದಾಯಗಳೊಂದಿಗೆ ಮಾಡಿಕೊಂಡ ಒಪ್ಪಂದಗಳು, ಮೈತ್ರಿ ರಚನೆ, ಸಂಘರ್ಷ ಪರಿಹಾರ ಸೂತ್ರಗಳು ಶಾಂತಿ, ಸಹಕಾರಕ್ಕೆ ನೆರವಾದವು. ಇದು ಅವರ ರಾಜತಾಂತ್ರಿಕ ಚಾಕಚಕ್ಯತೆ ಮತ್ತು ಪರಸ್ಪರ ಗೌರವಿಸುವ ಗುಣಕ್ಕೆ ಹಿಡಿದ ಕೈಗನ್ನಡಿ. ಯುದ್ಧದಲ್ಲಿ ಮಕ್ಕಳು, ಮಹಿಳೆಯರನ್ನು ಕೊಲ್ಲಬಾರದು ಎಂದರು. ಯುದ್ಧ ಕೈದಿಗಳಲ್ಲಿ ಅಕ್ಷರಸ್ಥರಿದ್ದರೆ ಬೇರೆ ಬಂಧಿಗಳಿಗೆ ಅಕ್ಷರ ಕಲಿಸುವ 'ಶಿಕ್ಷೆ'ಯನ್ನು ನೀಡಿ ಅವರನ್ನು ಬಂಧಮುಕ್ತಗೊಳಿಸುತ್ತಿದ್ದರು. ಅಕ್ಷರಾಭ್ಯಾಸ ಮಾಡಿದ ಕೈದಿಗಳನ್ನು ಬಿಡುಗಡೆಗೊಳಿಸಿ ಶಿಕ್ಷಣದ ಮಹತ್ವ ಸಾರಿದರು. ಜ್ಞಾನ ಪರಂಪರೆಯಲ್ಲಿ ಗುಲಾಮರಿಗೂ ಅವಕಾಶ ನೀಡಿ ಅವರನ್ನೂ ಪಂಡಿತರನ್ನಾಗಿ ಪರಿವರ್ತಿಸಿದರು. ಪರಿಣಾಮ ವಿಜ್ಞಾನ, ವೈದ್ಯಕೀಯ, ಗಣಿತಶಾಸ್ತ್ರ, ತತ್ವಶಾಸ್ತ್ರ ಕ್ಷೇತ್ರಗಳಲ್ಲಿ ಮುಸ್ಲಿಂ ವಿದ್ವಾಂಸರ ಕೊಡುಗೆ ಭಾರಿ ದೊಡ್ಡ ಮಟ್ಟದಲ್ಲಿ ಆಯಿತು.

ಶ್ರೀಮಂತರ ಸ್ವತ್ತಿನ ಶೇ 2.5ರಷ್ಟು ಬಡವನ ಹಕ್ಕು, ನೆರೆಹೊರೆಯವ ಹಸಿದಿರುವಾಗ ಉಣ್ಣುವವನು ನನ್ನವನಲ್ಲ ಎನ್ನುವ ಅವರ ಸಿದ್ಧಾಂತಗಳು ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆಯ ಪ್ರತಿಧ್ವನಿಗಳು. ನಾಳೆ ಪ್ರಳಯವಾಗುವುದಿದ್ದರೂ ಇಂದು ಸಸಿಯೊಂದನ್ನು ನೆಡು, ತುಂಬಿ ಹರಿಯುವ ನದಿಯಿಂದಲೂ ಹನಿ ನೀರು ಪೋಲು ಮಾಡಕೂಡದು ಎಂದು ಪರಿಸರ ಸಂರಕ್ಷಣೆಯ ಮಹತ್ವ ಸಾರಿದರು. ಹುಟ್ಟಿದ ಊರಿನಿಂದ ತೊರೆಯುವಂತೆ ಮಾಡಿದ, ತನ್ನನ್ನು ಹೀನಾಯವಾಗಿ ನಿಂದಿಸಿ, ಅವಮಾನಿಸಿ, ಪೀಡಿಸಿ, ಚಿಕ್ಕಪ್ಪನ ಕರುಳು ಬಗೆದು ರಕ್ತ ಕುಡಿದವರಿಗೂ ಸಾಮೂಹಿಕ ಕ್ಷಮಾದಾನ ನೀಡಿದ ಅವರ ಕ್ಷಮಾಗುಣವೇ ಅವರನ್ನು ಸಾರ್ವಕಾಲಿಕ ನಾಯಕರನ್ನಾಗಿ ಮಾಡಿದೆ.

ಈದ್ ಮಿಲಾದ್ ಅಂಗವಾಗಿ ವಿದ್ಯುತ್ ದೀಪಗಳಿಂದ ಅಲಂಕೃತವಾದ ಅಜ್ಮೀರ್‌ನ ದರ್ಗಾ –ಪಿಟಿಐ ಚಿತ್ರ

ಆನ್‌ಲೈನ್ ಗೇಮಿಂಗ್ ಕಂಪನಿಗಳಿಗೆ ಷೋಕಾಸ್ ನೋಟಿಸ್

ಜಿಎಸ್‌ಟಿ: ₹1.10 ಲಕ್ಷ ಕೋಟಿ ಬಾಕಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಆನ್‌ಲೈನ್ ಗೇಮಿಂಗ್ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸಿದೆ. ಆದರೆ, ಹಲವು ಕಂಪನಿಗಳು ಇಷ್ಟು ಪ್ರಮಾಣದ ತೆರಿಗೆ ಪಾವತಿಗೆ ಹಿಂದೇಟು ಹಾಕಿರುವ ಬಗ್ಗೆ ಕೇಂದ್ರ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯದ (ಡಿಜಿಜಿಐ) ವಾರ್ಷಿಕ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ದೇಶದಲ್ಲಿ ಒಟ್ಟು 118 ಆನ್‌ಲೈನ್ ಗೇಮಿಂಗ್ ಕಂಪನಿಗಳಿವೆ. ಈ ಪೈಕಿ 34 ಕಂಪನಿಗಳ ಮಾಲೀಕರು ₹1.10 ಲಕ್ಷ ಕೋಟಿ ಜಿಎಸ್‌ಟಿ ಬಾಕಿ ಉಳಿಸಿಕೊಂಡಿದ್ದು, ಎಲ್ಲರಿಗೂ ಷೋಕಾಸ್ ನೋಟಿಸ್ ನೀಡಲಾಗಿದೆ ಎಂದು ಕೇಂದ್ರೀಯ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ತಿಳಿಸಿದೆ.

ನಿಗದಿಪಡಿಸಿರುವ ತೆರಿಗೆ ಪಾವತಿಸದ ಗೇಮಿಂಗ್ ಕಂಪನಿಗಳಿಗೆ ನೋಟಿಸ್ ನೀಡಲಾಗಿದೆ. ಅವುಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಮತ್ತು ತೆರಿಗೆ ಕಾನೂನು ಪಾಲನೆಗೆ ಒಳಪಡಿಸುವ ಸಂಬಂಧ ಜಾರಿ ನಿರ್ದೇಶನಾಲಯ, ಆರ್‌ಬಿಐ, ಆದಾಯ ತೆರಿಗೆ, ಗ್ರಾಹಕ ವ್ಯವಹಾರಗಳ ಇಲಾಖೆ ಒಳಗೊಂಡ ಅಂತರ ಇಲಾಖಾ ಸಮಿತಿ ರಚನೆಗೂ ಮಂಡಳಿಯು ತೀರ್ಮಾನಿಸಿದೆ.

ವಿದೇಶದಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ಭಾರತದಲ್ಲಿ ಕಾರ್ಯಾಚರಣೆ ನಡೆಸುವ 658 ಆನ್‌ಲೈನ್ ಗೇಮಿಂಗ್ ಕಂಪನಿಗಳನ್ನು ಡಿಜಿಜಿಐ ಪತ್ತೆಹಚ್ಚಿದೆ. ಈ ಕಂಪನಿಗಳು ಭಾರತದಲ್ಲಿ ನೋಂದಣಿ ಮಾಡಿಕೊಂಡಿಲ್ಲ. ಜೊತೆಗೆ, ದೇಶದ ಕಾನೂನು ಪಾಲನೆಯನ್ನೂ ಮಾಡುತ್ತಿಲ್ಲ. ಅಲ್ಲದೆ, 167 ಯುಆರ್‌ಎಲ್/ವೆಬ್‌ಸೈಟ್‌ಗಳ ಕಾರ್ಯಾಚರಣೆಯ ಸ್ಥಗಿತಕ್ಕೂ ಸೂಚನೆ ನೀಡಿದೆ.

ವಿದೇಶಿ ಕಂಪನಿ ಪತ್ತೆ ಕಷ್ಟಕರ

2023ರ ಅಕ್ಟೋಬರ್ 1ರಿಂದ ಆನ್‌ಲೈನ್ ಗೇಮಿಂಗ್ ವಲಯವನ್ನು ಜಿಎಸ್‌ಟಿಯ ಶೇ 28ರಷ್ಟು ತೆರಿಗೆ ದರದ ವ್ಯಾಪ್ತಿಗೆ ತರಲಾಗಿದೆ.

ಬಹಳಷ್ಟು ಕಂಪನಿಗಳು ವಿದೇಶದಿಂದ ಕಾರ್ಯಾಚರಣೆ ನಡೆಸುತ್ತವೆ (ಉದಾಹರಣೆಗೆ ಮಾಲ್ಟಾ, ಕುರಾಕೊ ಐಲ್ಯಾಂಡ್, ಬ್ರಿಟಿಷ್ ವರ್ಜಿನ್ ಐಲ್ಯಾಂಡ್, ಸೈಪ್ರೆಸ್ ಇತ್ಯಾದಿ). ಇವುಗಳ ಮಾಲೀಕರನ್ನು ಪತ್ತೆ ಹಚ್ಚುವುದು ಕಷ್ಟಕರವಾಗಿದೆ ಎಂದು ಡಿಜಿಜಿಐ ತಿಳಿಸಿದೆ.

ತೆರಿಗೆ ತಪ್ಪಿಸಿಕೊಳ್ಳಲು ಆನ್‌ಲೈನ್ ಗೇಮಿಂಗ್ ವೇದಿಕೆಗಳು ಯುಆರ್‌ಎಲ್/ವೆಬ್‌ಸೈಟ್/ಆ್ಯಪ್‌ಗಳನ್ನು ಬದಲಾವಣೆ ಮಾಡುತ್ತಿರುತ್ತವೆ. ಡಾರ್ಕ್‌ವೆಬ್ ಅಥವಾ ವಿಪಿಎನ್ ಬಳಸುವ ವೇದಿಕೆಗಳನ್ನು ಪತ್ತೆ ಹಚ್ಚಿ ತೆರಿಗೆ ಕಾನೂನಿನ ವ್ಯಾಪ್ತಿಗೆ ಒಳಪಡಿಸುವುದು ಕಷ್ಟಕರವಾಗಿದೆ ಎಂದು ಹೇಳಿದೆ. ತೆರಿಗೆ ವಂಚನೆ ಎಸಗುತ್ತಿರುವ ಈ ಕಂಪನಿಗಳ ವಿರುದ್ಧ ಸಮಗ್ರ ಕಾರ್ಯತಂತ್ರ ರೂಪಿಸುವ ಭಾಗವಾಗಿ ಅಂತರ ಇಲಾಖೆಗಳನ್ನು ಒಳಗೊಂಡ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಗ್ರಾಹಕರ ರಕ್ಷಣೆ ಮತ್ತು ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಆನ್‌ಲೈನ್ ಗೇಮಿಂಗ್ ವಲಯವು ಜಿಎಸ್‌ಟಿ ವಂಚನೆಯಲ್ಲಿ ಮುಂಚೂಣಿಯಲ್ಲಿದೆ ಎಂದು ಡಿಜಿಜಿಐ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಹಣ ಅಕ್ರಮ ವರ್ಗಾವಣೆ, ಸೈಬರ್ ಅಪರಾಧ, ಬಾಲಾಪರಾಧ, ಸಾಮಾಜಿಕ ಹಾಗೂ ಆರ್ಥಿಕ ಅಪರಾಧ ಚಟುವಟಿಕೆಗಳು ಈ ವಲಯದಲ್ಲಿ ಹೆಚ್ಚು ನಡೆಯುತ್ತವೆ ಎಂದು ಹೇಳಿದೆ.

ವಿಮೆ ಮೇಲಿನ ಜಿಎಸ್‌ಟಿ ಪರಿಷ್ಕರಣೆ: ಅ. 30ಕ್ಕೆ ವರದಿ ಸಲ್ಲಿಕೆ

ನವದೆಹಲಿ (ಪಿಟಿಐ): ಆರೋಗ್ಯ ವಿಮೆ ಹಾಗೂ ಜೀವ ವಿಮೆಗಳ ಕಂತಿನ ಮೇಲೆ ವಿಧಿಸುತ್ತಿರುವ ಶೇ 18ರಷ್ಟು ಜಿಎಸ್‌ಟಿಯನ್ನು ಕಡಿಮೆಗೊಳಿಸುವುದಕ್ಕೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ರಚಿಸಿರುವ 13 ಸಚಿವರನ್ನು ಒಳಗೊಂಡ ಸಮಿತಿಯು, ಅಕ್ಟೋಬರ್ 30ರಂದು ವರದಿ ಸಲ್ಲಿಸಲಿದೆ.

ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಈ ಸಮಿತಿಯ ಸಂಚಾಲಕರಾಗಿದ್ದಾರೆ. ಉತ್ತರ ಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ, ಕರ್ನಾಟಕ, ಕೇರಳ, ಆಂಧ್ರಪ್ರದೇಶ, ಗೋವಾ, ಗುಜರಾತ್, ಮೇಘಾಲಯ, ಪಂಜಾಬ್, ತಮಿಳುನಾಡು ಮತ್ತು ತೆಲಂಗಾಣದ ಸಚಿವರು ಸಮಿತಿಯ ಸದಸ್ಯರಾಗಿದ್ದಾರೆ.

ಸಮಿತಿಯು ಸಲ್ಲಿಸುವ ವರದಿ ಆಧಾರದ ಮೇಲೆ ನವೆಂಬರ್‌ನಲ್ಲಿ ನಡೆಯುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ.

ಈಕ್ವಿಟಿ: ಹೂಡಿಕೆ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ತಿಂಗಳ ಎರಡು ವಾರದಲ್ಲಿ (ಸೆಪ್ಟೆಂಬರ್ 13ರ ವರೆಗೆ) ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ₹27,856 ಕೋಟಿ ಹೂಡಿಕೆ ಮಾಡಿದ್ದಾರೆ.

ದೇಶೀಯ ಷೇರುಪೇಟೆಯ ಚೇತರಿಕೆಯಿಂದಾಗಿ ಹೂಡಿಕೆ ಪ್ರಮಾಣದಲ್ಲಿ ಏರಿಕೆಯಾಗಿದೆ. ಏಪ್ರಿಲ್–ಮೇ ಅವಧಿಯಲ್ಲಿ ₹34,252 ಕೋಟಿ ಬಂಡವಾಳವನ್ನು ಹಿಂಪಡೆದಿದ್ದರು. ಆದರೆ, ಜೂನ್ ಬಳಿಕ ದೇಶೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಖರೀದಿಸುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ ಈಕ್ವಿಟಿ ಮಾರುಕಟ್ಟೆಯಲ್ಲಿ ₹70,737 ಕೋಟಿ ವಿದೇಶಿ ಬಂಡವಾಳ ಹೂಡಿಕೆಯಾಗಿದೆ.

'ಅಮೆರಿಕದಲ್ಲಿ ಸತತ ಐದನೇ ತಿಂಗಳು ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದ್ದು, 43 ತಿಂಗಳ ಕನಿಷ್ಠ ಮಟ್ಟವಾದ ಶೇ 2.5ಕ್ಕೆ ತಲುಪಿದೆ. ಮುಂದಿನ ವಾರ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಹಾಗಾಗಿ, ಹೂಡಿಕೆ ಏರಿಕೆಯಾಗುತ್ತಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎಪ್ಸಿಲಾನ್: ₹9,000 ಕೋಟಿ ಹೂಡಿಕೆ

ಕರ್ನಾಟಕದಲ್ಲಿ ಆನೋಡ್ ಘಟಕ ನಿರ್ಮಾಣಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಬ್ಯಾಟರಿ ಉತ್ಪನ್ನಗಳ ತಯಾರಿಕಾ ಕಂಪನಿ ಎಪ್ಸಿಲಾನ್ ಅಡ್ವಾನ್ಸ್‌ಡ್ ಮೆಟೀರಿಯಲ್ಸ್, ಕರ್ನಾಟಕದಲ್ಲಿ ವಾರ್ಷಿಕ 90 ಸಾವಿರ ಟನ್ ಉತ್ಪಾದನಾ ಸಾಮರ್ಥ್ಯದ ಆನೋಡ್ ಘಟಕ ಸ್ಥಾಪನೆಗೆ ನಿರ್ಧರಿಸಿದ್ದು, ಇದಕ್ಕಾಗಿ ₹9 ಸಾವಿರ ಕೋಟಿ ಬಂಡವಾಳ ಹೂಡಿಕೆಗೆ ಮುಂದಾಗಿದೆ.

ಮೊದಲ ಹಂತದಲ್ಲಿ 30 ಸಾವಿರ ಟನ್ ಸಾಮರ್ಥ್ಯದ ಆನೋಡ್ ಘಟಕ ನಿರ್ಮಿಸಲಾಗುತ್ತದೆ. ಇದಕ್ಕಾಗಿ ₹4 ಸಾವಿರ ಕೋಟಿ ಹೂಡಿಕೆ ಮಾಡಲಾಗುವುದು ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿಕ್ರಮ್ ಹಂಡಾ ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ ಘಟಕವನ್ನು 90 ಸಾವಿರ ಟನ್ ಸಾಮರ್ಥ್ಯಕ್ಕೆ ವಿಸ್ತರಿಸಲಾಗುವುದು. ಇದಕ್ಕಾಗಿ ₹5 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಹಾಗಾಗಿ, ಬ್ಯಾಟರಿ ಘಟಕಗಳ ಸ್ಥಾಪನೆಗೆ ಸೆಲ್ ತಯಾರಿಕಾ ಕಂಪನಿಗಳ ಅಗತ್ಯ ಹೆಚ್ಚಿದೆ. ಈ ಕಂಪನಿಗಳಿಗೆ ಎಪ್ಸಿಲಾನ್, ಆನೋಡ್ ಮತ್ತು ಕ್ಯಾಥೋಡ್ ಪೂರೈಸುವ ವಿಶ್ವಾಸಾರ್ಹ ಪೂರೈಕೆದಾರನಾಗಲಿದೆ ಎಂದು ಹೇಳಿದ್ದಾರೆ.

ಮುಂದಿನ ಎಂಟು ತಿಂಗಳಿನಲ್ಲಿ ಘಟಕ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗುತ್ತದೆ. ಒಂದೂವರೆ ವರ್ಷದಲ್ಲಿ ಘಟಕ ನಿರ್ಮಾಣವಾಗಲಿದೆ. 2026ರ ಅಂತ್ಯಕ್ಕೆ ಅಥವಾ 2027ರ ಆರಂಭದಲ್ಲಿ ಮಾರುಕಟ್ಟೆಗೆ ಉತ್ಪನ್ನಗಳನ್ನು ಪೂರೈಸಲು ಯೋಜಿಸಲಾಗಿದೆ ಎಂದು ಹೇಳಿದ್ದಾರೆ.

ಎಪ್ಸಿಲಾನ್ ಮಾತೃಸಂಸ್ಥೆಯಾದ ಎಪ್ಸಿಲಾನ್ ಕಾರ್ಬನ್ ಈಗಾಗಲೇ ಕರ್ನಾಟಕದಲ್ಲಿ ಕಾರ್ಬನ್ ಬ್ಲಾಕ್ ಘಟಕ ಸ್ಥಾಪಿಸಿ ಉತ್ಪಾದನೆಯನ್ನು ಆರಂಭಿಸಿದೆ. ಇಲ್ಲಿ 1,100 ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಒಡಿಶಾದಲ್ಲಿ ಕಂಪನಿಯು ಹೊಸ ನಿರ್ಮಾಣ ಯೋಜನೆ ಆರಂಭಿಸಿದ್ದು, ₹10 ಸಾವಿರ ಕೋಟಿ ಹೂಡಿಕೆ ಮಾಡಿದೆ.

ಮೊಬೈಲ್, ಪೆನ್‌ಡ್ರೈವ್, ಚಾಕು ವಶ

ಒಂದನೇ ಪುಟದಿಂದ...

ಕರ್ತವ್ಯಲೋಪದ ಆರೋಪದ ಮೇಲೆ ಜೈಲು ಅಧಿಕಾರಿಗಳು, ಕಾರಾಗೃಹದ ಭದ್ರತಾ ಉಸ್ತುವಾರಿ ಹೊಂದಿರುವ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ, ವಿಚಾರಣಾಧೀನ ಕೈದಿಗಳು ಮತ್ತು ಸಜಾ ಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

'ತಪಾಸಣೆ ವೇಳೆ ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜು ಬಳಿ ಮೊಬೈಲ್ ಫೋನ್ ಪತ್ತೆಯಾಗಿದೆ. ಅಲ್ಲದೇ ನಾಗನ ಸಹಚರರು ಸಹ ಮೊಬೈಲ್ ಬಳಸುತ್ತಿರುವುದು ಗೊತ್ತಾಗಿದೆ. ವಿಚಾರಣಾಧೀನ ಕೈದಿಗಳು ಆಮ್ಲೆಟ್ ತಯಾರಿಸಲು ಹಾಗೂ ಸಾಂಬಾರು ಬಿಸಿ ಮಾಡಿಕೊಳ್ಳಲು ಎಲೆಕ್ಟ್ರಿಕ್ ಸ್ಟೌ ಬಳಸುತ್ತಿದ್ದರು. ಬಿಗಿ ಭದ್ರತೆ ನಡುವೆಯೂ ಇವುಗಳನ್ನು ಜೈಲಿನೊಳಗೆ ಹೇಗೆ ತರಲಾಗಿದೆ ಎಂಬ ಕುರಿತು ತನಿಖೆ ನಡೆಯುತ್ತಿದೆ' ಎಂದಿದ್ದಾರೆ.

ಕಾರಾಗೃಹದಲ್ಲಿ ಜಪ್ತಿ ಮಾಡಿರುವ ಪೆನ್ ಡ್ರೈವ್‌ಗಳಲ್ಲಿ ಏನಿದೆ ಎಂಬುದನ್ನು ಕೋರ್ಟ್ ಅನುಮತಿ ಪಡೆದು ಪರಿಶೀಲನೆ ನಡೆಸಬೇಕಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಂಪೂರ್ಣ ರಹಸ್ಯ ಕಾರ್ಯಾಚರಣೆ

ಒಂದನೇ ಪುಟದಿಂದ...

ಜಂಟಿ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ನೇತೃತ್ವದ ತಂಡ ಆ.24ರಂದು ಶೋಧ ನಡೆಸಿದ್ದಾಗ ಏನೂ ಸಿಕ್ಕಿರಲಿಲ್ಲ. ಅದರ ಮರು ದಿನವೇ (ಆ.25) ದರ್ಶನ್, ವಿಲ್ಸನ್ ಗಾರ್ಡನ್ ನಾಗ ಹಾಗೂ ಸಹಚರರು ಜೈಲಿನಲ್ಲಿ ಟೀ ಪಾರ್ಟಿ ಮಾಡಿದ್ದ ಫೋಟೊ ಜಾಲತಾಣದಲ್ಲಿ ಬಹಿರಂಗವಾಗಿತ್ತು. ಇದರ ಬೆನ್ನಲ್ಲೇ ಜೈಲು ಅಧಿಕಾರಿಗಳು ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಿದ್ದರು. ವಿಲ್ಸನ್ ಗಾರ್ಡನ್ ನಾಗ ಮತ್ತು ಆತನ ಸಹಚರರನ್ನು ಬೇರೆ ಜೈಲಿಗೆ ಸ್ಥಳಾಂತರಿಸಲು ಅನುಮತಿ ಕೋರಿ ಜೈಲು ಅಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈವರೆಗೆ ಅನುಮತಿ ದೊರೆತಿಲ್ಲ.

ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದಲ್ಲಿ ಚಂದ್ರಗುಪ್ತ ನೇತೃತ್ವದಲ್ಲಿ ಪ್ರತ್ಯೇಕ ತನಿಖೆಯೂ ನಡೆಯುತ್ತಿದೆ.

ಸಂಕ್ಷಿಪ್ತ ಸುದ್ದಿ

ಭಾರತ–ಮಾಲ್ದೀವ್ಸ್ ಸಂಬಂಧ ಸುಧಾರಣೆ: ಸಚಿವ ಜಮೀರ್

ಮಾಲೆ (ಪಿಟಿಐ): ಮಾಲ್ದೀವ್ಸ್ ಮತ್ತು ಭಾರತದ ನಡುವಿನ 'ಭಿನ್ನಾಭಿಪ್ರಾಯಗಳು' ಪರಿಹಾರವಾಗಿವೆ ಎಂದು ಮಾಲ್ದೀವ್ಸ್ ವಿದೇಶಾಂಗ ವ್ಯವಹಾರಗಳ ಸಚಿವ ಮೂಸಾ ಜಮೀರ್ ಅವರು ಹೇಳಿದರು.

ಶ್ರೀಲಂಕಾಕ್ಕೆ ಶುಕ್ರವಾರ ಭೇಟಿ ನೀಡಿದ್ದ ಅವರು, ಪ್ರಮುಖ ಮಿತ್ರ ದೇಶಗಳು ಅದರಲ್ಲೂ ಭಾರತ ಮತ್ತು ಚೀನಾದೊಂದಿಗಿನ ಸಂಬಂಧ ಎಷ್ಟು ಮುಖ್ಯ ಎಂದು ಒತ್ತಿ ಹೇಳಿದರು.

ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಅಧಿಕಾರ ವಹಿಸಿಕೊಂಡ ಆರಂಭದ ದಿನಗಳಲ್ಲಿ ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧದಲ್ಲಿ ಬಿಕ್ಕಟ್ಟು ತಲೆದೋರಿತ್ತು. ಮಾಲ್ದೀವ್ಸ್‌ನಿಂದ ಭಾರತೀಯ ಪಡೆಗಳ ವಾಪಸಾತಿ ನಂತರ ಉಭಯ ದೇಶಗಳ ನಡುವಣ 'ತಪ್ಪು ತಿಳಿವಳಿಕೆ'ಗಳು ದೂರವಾಗಿವೆ ಎಂದು ತಿಳಿಸಿದರು.

ಭಾರತ–ಚೀನಾದೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇವೆ. ಎರಡೂ ದೇಶಗಳು ಮಾಲ್ದೀವ್ಸ್ ಅನ್ನು ಬೆಂಬಲಿಸುತ್ತವೆ ಎಂದರು.

ಬಾಂಗ್ಲಾದೇಶಕ್ಕೆ ನೆರವು ಅಮೆರಿಕ ಅಭಯ

ಢಾಕಾ (ಪಿಟಿಐ): ಬಾಂಗ್ಲಾದ ನಾಗರಿಕರಿಗೆ ಸಮಾನ ಮತ್ತು ಕ್ರಿಯಾಶೀಲರಾಗುವಂತೆ ಭವಿಷ್ಯವನ್ನು ರೂಪಿಸಲು ಅಗತ್ಯವಿರುವ ಆರ್ಥಿಕ ಮತ್ತು ರಾಜಕೀಯ ಸಹಕಾರವನ್ನು ನೀಡುವ ಭರವಸೆಯನ್ನು ಅಮೆರಿಕ, ಭಾನುವಾರ ಬಾಂಗ್ಲಾದೇಶದ ಮಧ್ಯಂತರ ಸರ್ಕಾರಕ್ಕೆ ನೀಡಿದೆ.

ಪ್ರಮುಖ ಸುಧಾರಣೆಗಳ ಜಾರಿಗೆ ನೆರವು ನೀಡಬೇಕು ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರು ಮಾಡಿದ್ದ ಮನವಿಗೆ ಹೀಗೆ ಪ್ರತಿಕ್ರಿಯಿಸಿದೆ.

ಅಮೆರಿಕದ ಖಜಾನೆ ಇಲಾಖೆಯ ಅಂತರರಾಷ್ಟ್ರೀಯ ಹಣಕಾಸು ವಿಭಾಗದ ಸಹಾಯಕ ಕಾರ್ಯದರ್ಶಿ ಬ್ರೆಂಟ್ ನೀಮನ್ ನೇತೃತ್ವದ, ಬಹು ಏಜೆನ್ಸಿಗಳ ಪ್ರತಿನಿಧಿಗಳನ್ನು ಒಳಗೊಂಡಿದ್ದ ನಿಯೋಗವು ಭಾನುವಾರ ಢಾಕಾಗೆ ಭೇಟಿ ನೀಡಿತ್ತು.

'ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಪ್ರೊ. ಯೂನುಸ್ ಅವರ ಜೊತೆಗಿನ ಭೇಟಿ ವೇಳೆ ನಿಯೋಗ ಈ ಭರವಸೆ ನೀಡಿತು' ಎಂದು ಅಮೆರಿಕದ ರಾಯಭಾರ ಕಚೇರಿ ಹೇಳಿಕೆ ನೀಡಿದೆ.

ನಿಫಾ ಸೋಂಕು: ಕೇರಳಕ್ಕೆ ತೆರಳಿದ್ದ ಬೆಂಗಳೂರಿನ ಯುವಕ ಸಾವು

ಮಲಪ್ಪುರ (ಪಿಟಿಐ): ನಗರದ ಖಾಸಗಿ ಆಸ್ಪತ್ರೆಯಲ್ಲಿ ಈಚೆಗೆ ನಿಧನರಾದ 24 ವರ್ಷದ ಯುವಕನಿಗೆ ನಿಫಾ ವೈರಸ್ ಸೋಂಕು ತಗುಲಿತ್ತು ಎಂದು ಕೇರಳದ ಆರೋಗ್ಯ ಸಚಿವರಾದ ವೀಣಾ ಜಾರ್ಜ್ ಭಾನುವಾರ ತಿಳಿಸಿದ್ದಾರೆ.

'ಬೆಂಗಳೂರಿನಿಂದ ರಾಜ್ಯಕ್ಕೆ ಬಂದಿದ್ದ ಮಲಪ್ಪುರದ ಯುವಕ ಸೆ. 9ರಂದು ನಿಧನರಾಗಿದ್ದರು. ಪ್ರಾದೇಶಿಕ ವೈದ್ಯಕೀಯ ಅಧಿಕಾರಿಯು ಈ ಸಾವಿನ ತನಿಖೆ ನಡೆಸಿದ ನಂತರ ಅನುಮಾನ ಸೃಷ್ಟಿಯಾಗಿತ್ತು. ತಕ್ಷಣವೇ ಲಭ್ಯವಿದ್ದ ಮಾದರಿಗಳನ್ನು ಕೋಯಿಕ್ಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷೆಯಲ್ಲಿ ನಿಫಾ ವೈರಸ್ ತಗುಲಿದ್ದು ದೃಢಪಟ್ಟಿದೆ' ಎಂದು ಹೇಳಿದ್ದಾರೆ.

ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಯು (ಎನ್‌ಐವಿ) ಭಾನುವಾರ ಸೋಂಕನ್ನು ದೃಢಪಡಿಸಿದೆ.

ಆರೋಗ್ಯ ಸಚಿವರ ನೇತೃತ್ವದಲ್ಲಿ ಶನಿವಾರ ರಾತ್ರಿಯೇ ನಡೆದ ಉನ್ನತ ಮಟ್ಟದ ಸಭೆಯಲ್ಲಿ 16 ಸಮಿತಿ ರಚಿಸಿದ್ದು, 151 ಜನರ ಸಂಪರ್ಕ ಪಟ್ಟಿ ಸಿದ್ಧಪಡಿಸಲಾಗಿದೆ.

ಐಸೋಲೇಷನ್‌ನಲ್ಲಿದ್ದ ಐವರಲ್ಲಿ ಜ್ವರ ಹಾಗೂ ಸೋಂಕಿನ ಲಕ್ಷಣಗಳು ಗೋಚರಿಸಿದ್ದು, ಇವರ ಮಾದರಿಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ವೀಣಾ ತಿಳಿಸಿದ್ದಾರೆ.

ಸೋಂಕಿನಿಂದ ಬಳಲುತ್ತಿದ್ದ ಬಾಲಕನೊಬ್ಬ ಜುಲೈ 21ರಂದು ಮೃತಪಟ್ಟಿದ್ದ. ರಾಜ್ಯದಲ್ಲಿ ಈ ವರ್ಷ ನಿಫಾ ವೈರಸ್‌ನಿಂದ ಮೃತಪಟ್ಟ ಪ್ರಕರಣ ಇದಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಉದ್ಯೋಗಾವಕಾಶ
General
ತಕ್ಷಣ ಸಂಪರ್ಕಿಸಿರಿ: ಸಂಸ್ಥೆಯಿಂದ ಸೇವಾ ಜವಾಬ್ದಾರಿಯೊಂದಿಗೆ ಮನೆ, ಆಸ್ಪತ್ರೆ ಓಲ್ಡ್ ಏಜ್ ಹೋಂ ಮುಂತಾದೆಡೆ ಕೆಲಸ ಮಾಡಲು ಆಸ್ಪತ್ರೆಗಳ ಮುಖಾಂತರ ಉಚಿತವಾಗಿ ತರಬೇತಿ ಕೊಡಲಾಗುವುದು. ತರಬೇತಿ ಸಮಯದಲ್ಲಿ ಪ್ರಾರಂಭದಲ್ಲಿ 20,000/– ತನಕ ಸಂಬಳವಿರುತ್ತದೆ. ಊಟ, ಹಾಸ್ಟೆಲ್, ಸಮವಸ್ತ್ರ ಉಚಿತ. ಈಗಾಗಲೇ ತರಬೇತಿ ಹೊಂದಿ ಅನುಭವವಿರುವ ನರ್ಸ್, ಹೋಂನರ್ಸ್ ಗಳಿಗೆ ಉತ್ತಮ ಸಂಬಳವಿರುತ್ತದೆ ಹಾಗೂ ಮಗು ಬಾಣಂತಿ ಆರೈಕೆಗೆ ಬೇಕಾಗಿದ್ದಾರೆ. ಸಂಪರ್ಕಿಸಿರಿ. ದಾಸ್ ಸೇವಾ ಸಂಸ್ಥೆ (ರಿ), (ಸರಕಾರಿ ನೋಂದಾಯಿತ ಸಂಸ್ಥೆ) ಬೆಂಗಳೂರು: 080–23342559/ 9242730143, ಮಂಗಳೂರು: 0824–2432744, 9343568915, 9845495055, ಮೈಸೂರು:0821–2439990/ 9243306815, ಹುಬ್ಬಳ್ಳಿ:8050646321/ 9242302918, ಬೆಳಗಾಂ:8867356219/ 9242096219, ಹಾಸನ:08172–260000/ 9241324003, ಶಿವಮೊಗ್ಗ:08182–220120/ 9241127545, ದಾವಣಗೆರೆ:7760164111, ಬಳ್ಳಾರಿ:08392–277696/ 9972851518.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555 6364468422

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ
Travel
16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಡೈಮಂಡ್ ಲೀಗ್: ಕೈಮುರಿತದ ನೋವಿನಲ್ಲಿಯೂ ಕಣಕ್ಕಿಳಿದಿದ್ದ ಜಾವೆಲಿನ್ ಥ್ರೋ ತಾರೆ ನೀರಜ್

'ಗಾಯ'ದ ಋತುವಿನಲ್ಲೂ ಗೆದ್ದ ಚೋಪ್ರಾ

ಬ್ರಸೆಲ್ಸ್ (ಪಿಟಿಐ): ಡಬಲ್ ಒಲಿಂಪಿಕ್ ಪದಕವಿಜೇತ ನೀರಜ್ ಚೋಪ್ರಾ ಅವರು ಶನಿವಾರ ತಡರಾತ್ರಿ ಇಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಕೇವಲ ಒಂದು ಸೆಂಟಿಮೀಟರ್ ಅಂತರದಲ್ಲಿ ಪ್ರಶಸ್ತಿ ಕೈತಪ್ಪಿಸಿಕೊಂಡರು. ಆದರೆ, ತಮ್ಮ ಎಡಗೈಗೆ ಆಗಿದ್ದ ಗಾಯದ ನೋವಿನಲ್ಲಿಯೂ ದ್ವಿತೀಯ ಸ್ಥಾನ ಪಡೆಯುವಲ್ಲಿ ಯಶಸ್ವಿಯಾದರು.

ಪುರುಷರ ಜಾವೆಲಿನ್ ಥ್ರೋನಲ್ಲಿ ಅವರ ಪ್ರತಿಸ್ಪರ್ಧಿ ಗ್ರೆನಡಾದ ಪೀಟರ್ಸ್ ಆ್ಯಂಡರ್ಸನ್ ಅವರು 87.87 ಮೀಟರ್ಸ್ ಥ್ರೋ ಮಾಡಿದರು. ನೀರಜ್ 87.86 ಮೀ ದೂರ ಜಾವೆಲಿನ್ ಎಸೆದರು. ಕೇವಲ 0.01 ಮೀ ಅಂತರದಲ್ಲಿ ಕಿರೀಟ ಕೈತಪ್ಪಿತು. ತಮ್ಮ ಗಾಯದ ಕುರಿತು ನೀರಜ್ ಅವರೇ ಈಗ ಹೇಳಿಕೊಂಡಿದ್ದಾರೆ.

ನೀರಜ್ ಚೋಪ್ರಾ ಅವರ ಥ್ರೋಗಳು (ಮೀ)

86.82
83.49
87.86
82.04
83.30
86.56

'ಕಳೆದ ಸೋಮವಾರ ಅಭ್ಯಾಸ ಮಾಡುವ ಸಂದರ್ಭದಲ್ಲಿ ಗಾಯವಾಯಿತು. ಎಡಗೈ ಅಂಗೈನ ಮೂಳೆ ಮುರಿದಿದ್ದು ಎಕ್ಸ್‌ರೇಯಲ್ಲಿ ಗೊತ್ತಾಯಿತು. ಮತ್ತೊಂದು ಬಾರಿ ನೋವಿನೊಂದಿಗೆ ಸವಾಲು ಎದುರಿಸುವ ಸಂದರ್ಭ ಇದಾಗಿತ್ತು. ಆದರೆ ನನ್ನ ತಂಡದ ನೆರವಿನಿಂದಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಯಿತು' ಎಂದು 26 ವರ್ಷದ ನೀರಜ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಸಂದೇಶದೊಂದಿಗೆ ತಮ್ಮ ಎಡಗೈ ಗಾಯದ ಎಕ್ಸ್ ರೇ ಚಿತ್ರವನ್ನೂ ಲಗತ್ತಿಸಿದ್ದಾರೆ.

'ನನಗೆ ಈ ವರ್ಷದ ಕೊನೆಯ ಸ್ಪರ್ಧೆ ಇದಾಗಿದೆ. ಯಶಸ್ಸಿನೊಂದಿಗೆ ಋತುವನ್ನು ಕೊನೆಗೊಳಿಸುವುದು ನನ್ನ ಉದ್ದೇಶವಾಗಿತ್ತು. ಆದರೆ ನಾನು ಅಂದುಕೊಂಡಂತೆ ಆಗಲಿಲ್ಲ. ಪ್ರಸಕ್ತ ಋತುವಿನಲ್ಲಿ ನಾನು ಬಹಳಷ್ಟು ಕಲಿತಿರುವೆ. ಮುಂದಿನ ಋತುವಿನಲ್ಲಿ ಸಂಪೂರ್ಣ ಫಿಟ್ ಆಗಿ ಮರಳುತ್ತೇನೆ' ಎಂದು ನೀರಜ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈಗ ಮುಕ್ತಾಯಗೊಂಡ ಋತುವಿನುದ್ದಕ್ಕೂ ಚೋಪ್ರಾ ತಮ್ಮ ಫಿಟ್‌ನೆಸ್ ನಿರ್ವಹಣೆಗೆ ಬಹಳಷ್ಟು ಕಷ್ಟಪಟ್ಟಿದ್ದಾರೆ. ಈ ಮೊದಲೇ ಅವರು ತೊಡೆ ಸಂಧು ಸ್ನಾಯುವಿನ ನೋವಿನಿಂದ ಬಳಲಿದ್ದಾರೆ. ಆ ನೋವಿನಲ್ಲಿಯೇ ಅವರು ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಿದ್ದರು. ಅಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಆದರೆ 90 ಮೀಟರ್ಸ್ ಥ್ರೋ ಮಾಡುವ ಅವರ ಗುರಿ ಇದುವರೆಗೂ ಈಡೇರಿಲ್ಲ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಚಿನ್ನ ಜಯಿಸಿದ್ದರು.

ಇದೇ ತಿಂಗಳು ಅವರು ತೊಡೆಸಂಧು ನಾಯುಕ್ಕೆ ಶಸ್ತ್ರಚಿಕಿತ್ಸೆಗೊಳಗಾಗುವ ಸಾಧ್ಯತೆ ಇದೆ.

'2024ರ ಋತು ಮುಗಿದಿದೆ. ಹಿಂದೆ ಒಮ್ಮೆ ಹೊರಳಿ ನೋಡಿದರೆ ಬಹಳಷ್ಟು ಅನುಭವ, ಸುಧಾರಣೆಗಳನ್ನು ಕಂಡಿದ್ದೇನೆ. ಕೆಲವು ಹಿನ್ನಡೆಗಳನ್ನೂ ಅನುಭವಿಸಿರುವೆ. ಮನೋಬಲ ಮತ್ತಿತರ ಸಂಗತಿಗಳನ್ನೂ ಅರಿತಿರುವೆ. ತಮ್ಮೆಲ್ಲರ ಪ್ರೋತ್ಸಾಹಕ್ಕೆ ಧನ್ಯವಾದಗಳು. 2024 ರ ವರ್ಷವು ನನ್ನನ್ನು ಉತ್ತಮ ಅಥ್ಲೀಟ್ ಆಗಿ ರೂಪಿಸಿದೆ. 2025ರಲ್ಲಿ ಮತ್ತೆ ನಿಮ್ಮನ್ನು ಕಾಣುವೆ' ಎಂದು ಬರೆದಿದ್ದಾರೆ.

ನೀರಜ್ ಅವರು ನೀರಜ್ ಅವರು 2022ರಲ್ಲಿ ಜ್ಯೂರಿಚ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್ ಕೂಟದಲ್ಲಿ ಪ್ರಥಮ ಮತ್ತು 2023ರಲ್ಲಿ ಯುಗೇನ್‌ನಲ್ಲಿ ನಡೆದಾಗ ದ್ವಿತೀಯ ಸ್ಥಾನ ಗಳಿಸಿದ್ದರು.

2024ರ ಋತುವಿನಲ್ಲಿ ನೀರಜ್ ಸಾಧನೆ

ಗಳಿಸಿದ ಸ್ಥಾನ	ಸ್ಪರ್ಧೆ	ಶ್ರೇಷ್ಠ ಥ್ರೋ (ಮೀ)
2	ದೋಹಾ ಡೈಮಂಡ್ ಲೀಗ್	88.36
1	ಫೆಡರೇಷನ್ ಕಪ್	82.27
1	ಪಾವೊ ನುರ್ಮಿ ಗೇಮ್ಸ್	85.97
2	ಪ್ಯಾರಿಸ್ ಒಲಿಂಪಿಕ್ಸ್	89.45
2	ಲಾಸೆನ್ ಡೈಮಂಡ್ ಲೀಗ್	89.49
2	ಬ್ರಸೆಲ್ಸ್ ಡೈಮಂಡ್ ಲೀಗ್	87.86

ಬ್ರಸೆಲ್ಸ್ ಫೈನಲ್ ಫಲಿತಾಂಶ

ಸ್ಥಾನ	ಸ್ಪರ್ಧಿ	ಥ್ರೋ (ಮೀ)
1	ಪೀಟರ್ಸ್ ಆ್ಯಂಡರ್ಸನ್ (ಗ್ರೆನಡಾ)	87.87
2	ನೀರಜ್ ಚೋಪ್ರಾ (ಭಾರತ)	87.86
3	ಜೂಲಿಯನ್ ವೆಬರ್ (ಜರ್ಮನಿ)	85.97
4	ಆ್ಯಂಡ್ರಿಯನ್ ಮರ್ಡಾರೆ (ಮಾಲ್ಡೋವಾ)	82.79
5	ದೀನ್ ರಾಡ್ರಿಕ್ ಜೆಂಕಿ (ಜಪಾನ್)	80.37
6	ಆರ್ಥರ್ ಫೆಲ್ಫ್ನರ್ (ಉಕ್ರೇನ್)	79.86
7	ಹರ್ಮನ್ ತಿಮೊತಿ (ಬೆಲ್ಜಿಯಂ)	76.46

2022ರಲ್ಲಿ ಜಯಿಸಿದ್ದ ಡೈಮಂಡ್ ಟ್ರೋಫಿಯೊಂದಿಗೆ ನೀರಜ್ ಚೋಪ್ರಾ –ಎಪಿ/ಪಿಟಿಐ ಚಿತ್ರ

ಚಾಂಪಿಯನ್ಸ್ ಟ್ರೋಫಿ: ಭಾರತ ತಂಡಕ್ಕೆ ಕೊರಿಯಾ ಸವಾಲು

ಹುಲುನ್‌ಬ್ಯುಯರ್ (ಚೀನಾ), (ಪಿಟಿಐ): ಲೀಗ್ ಹಂತದ ಎಲ್ಲ ಪಂದ್ಯಗಳನ್ನು ಗೆದ್ದುಕೊಂಡಿರುವ ಭಾರತ ತಂಡ, ಸೋಮವಾರ ನಡೆಯುವ ಏಷ್ಯಾ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದ್ದು, ನೆಚ್ಚಿನ ತಂಡ ಎನಿಸಿದೆ.

ಪ್ಯಾರಿಸ್ ಒಲಿಂಪಿಕ್ ಕಂಚಿನ ಪದಕ ವಿಜೇತ ಭಾರತ ತಂಡ, ಹಾಲಿ ಚಾಂಪಿಯನ್‌ಷಿಪ್‌ನಲ್ಲಿ ಅಮೋಘ ಫಾರ್ಮ್‌ನಲ್ಲಿದೆ. ಕೊರಿಯಾ ಎರಡು ಪಂದ್ಯಗಳಲ್ಲಿ ಮಾತ್ರ (ಕೊರಿಯಾ ವಿರುದ್ಧ 3–1 ಮತ್ತು ಬದ್ಧ ಎದುರಾಳಿ ಪಾಕ್ ವಿರುದ್ಧ 2–1 ಗೆಲುವಿಗೆ) ಹೆಚ್ಚು ಹೋರಾಡಬೇಕಾಯಿತು.

ಫಾರ್ವರ್ಡ್ ಲೈನ್, ಮಿಡ್‌ಫೀಲ್ಡ್ ಮತ್ತು ಡಿಫೆನ್ಸ್– ಈ ಮೂರೂ ವಿಭಾಗಗಳಲ್ಲಿ ಭಾರತ ತಂಡದ ಪ್ರದರ್ಶನ ಗಮನಾರ್ಹವಾಗಿದೆ. ಮುಂಚೂಣಿ ಆಟಗಾರರು ಉತ್ತಮ ಲಯದಲ್ಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಗೋಲು ಗಳು ಸುಲಭವಾಗಿ ಬರುತ್ತಿರಲಿಲ್ಲ. ಆದರೆ ಇಲ್ಲಿ ಸುಖಜೀತ್ ಸಿಂಗ್, ಅಭಿಷೇಕ್, ಉತ್ತಮ್ ಸಿಂಗ್, ಗುರ್ಜೋತ್ ಸಿಂಗ್ ಮತ್ತು ಅರೈಜೀತ್ ಸಿಂಗ್ ಹುಂಡಲ್ ಅವರನ್ನೊಳಗೊಂಡ ತಂಡ ನಿರೀಕ್ಷೆಗೆ ಮೀರಿ ಉತ್ತಮ ಪ್ರದರ್ಶನ ನೀಡಿದೆ.

ಯುವ ಮಿಡ್‌ಫೀಲ್ಡರ್ ರಾಜಕುಮಾರ್ ಪಾಲ್ ಕೂಡ ಗಮನ ಸೆಳೆದಿದ್ದಾರೆ. ಕೆಲವು ಫೀಲ್ಡ್ ಗೋಲುಗಳ ಕಾಣಿಕೆ ನೀಡಿದ್ದಾರೆ. ಅನುಭವಿಗಳಾದ ಮನ್‌ಪ್ರೀತ್, ಉಪನಾಯಕ ವಿವೇಕ್ ಸಾಗರ್ ಪ್ರಸಾದ್ ಮತ್ತು ನೀಲಕಂಠ ಶರ್ಮಾ ಕೂಡ ಮಿಡ್‌ಫೀಲ್ಡ್‌ನಲ್ಲಿ ಮಿಂಚಿದ್ದಾರೆ.

ಭಾರತ ಎದುರಾಳಿಗಳಿಗೆ ನಾಲ್ಕು ಗೋಲುಗಳನ್ನು ಬಿಟ್ಟುಕೊಟ್ಟಿದೆ. 15 ವರ್ಷ ತಂಡದಲ್ಲಿ ಗೋಲ್‌ಕೀಪರ್ ಆಗಿದ್ದ ಪಿ.ಆರ್.ಶ್ರೀಜೇಶ್ ನಿವೃತ್ತಿ ನಿರ್ವಾತ ಸೃಷ್ಟಿಸಿದರೂ ಕೃಷನ್ ಬಹಾದೂರ್ ಪಾಠಕ್ ಮತ್ತು ಸೂರಜ್ ಕರ್ಕೇರಾ ತಮಗೊದಗಿದ ಅವಕಾಶಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ವಿಶ್ವದ ಶ್ರೇಷ್ಠ ಡ್ರ್ಯಾಗ್‌ಫ್ಲಿಕರ್ ಗಳಲ್ಲಿ ಒಬ್ಬರಾದ ಹರ್ಮನ್‌ಪ್ರೀತ್ ಸಿಂಗ್ ನಾಯಕರಾಗಿ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ತಾವೇ ಐದು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಗೋಲು ಗಳಿಸಿದ್ದಾರೆ. ಫೀಲ್ಡ್ ಗೋಲುಗಳಿಗೆ ಪರದಾಡುವಾಗ ಕೊರತೆಯಾಗದಂತೆ ನೋಡಿಕೊಂಡಿದ್ದಾರೆ.

ಪುಟಿದೇಳಬಲ್ಲ ತಂಡ: ಆದರೆ ಯಾವುದೇ ಹಂತದಲ್ಲಿ ಪುಟಿದೇಳುವ ಸಾಮರ್ಥ್ಯ ಹೊಂದಿರುವ ಕೊರಿಯಾವನ್ನು ಭಾರತ ನಿರ್ಲಕ್ಷಿಸುವಂತಿಲ್ಲ. ಕೊನೆಯ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ಕೊನೆಗಳಿಗೆಯಲ್ಲಿ ಚೇತರಿಸಿ ಕೊಂಡು 3–3 ಸಮಬಲ ಸಾಧಿಸಿ ಈ ತಂಡ ಸೆಮಿಫೈನಲ್‌ಗೆ ಅರ್ಹತೆ ಪಡೆದಿತ್ತು.

ಕೊರಿಯಾದ ಜಿಹುನ್ ಯಾಂಗ್ 7 ಗೋಲುಗಳನ್ನು ಗಳಿಸಿದ್ದು, ಕೊರಿಯಾದ ಪ್ರಬಲ ಅಸ್ತ್ರ. ಈ ಡ್ರ್ಯಾಗ್‌ಫ್ಲಿಕರ್ ಆಟಗಾರ ಟೂರ್ನಿಯ ಅತ್ಯಧಿಕ ಸ್ಕೋರರ್ ಕೂಡ.

ಪಾಕಿಸ್ತಾನ ತಂಡವು, ದಿನದ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಚೀನಾ ವಿರುದ್ಧ ಆಡಲಿದೆ.

ಮುಲಾನಿ, ತನುಷ್ ದಾಳಿಗೆ ಒಲಿದ ಜಯ

ಭಾರತ ಎ ತಂಡಕ್ಕೆ ಮಣಿದ ಡಿ ತಂಡ: ರಿಕಿ ಭುಯಿ ಶತಕ

ಅನಂತಪುರ (ಪಿಟಿಐ): ಶಮ್ಸ್ ಮುಲಾನಿ ಮತ್ತು ತನುಷ್ ಕೋಟ್ಯಾನ್ ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ಎ ತಂಡವು ದುಲೀಪ್ ಟ್ರೋಫಿ ಪಂದ್ಯದಲ್ಲಿ ಭಾರತ ಡಿ ತಂಡದ ವಿರುದ್ಧ 186 ರನ್‌ಗಳಿಂದ ಜಯಿಸಿತು.

488 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಡಿ ತಂಡವು 82.2 ಓವರ್‌ಗಳಲ್ಲಿ 301 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಶನಿವಾರ 44 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಡಿ ತಂಡದ ರಿಕಿ ಭುಯಿ ಅವರು ಪಂದ್ಯದ ನಾಲ್ಕನೇ ದಿನವಾದ ಭಾನುವಾರ (113; 195ಎ, 4X14, 6X3) ಶತಕ ಗಳಿಸಿದರು. ಇದರಿಂದಾಗಿ ಎ ತಂಡಕ್ಕೆ ಜಯ ಒಲಿಯುವುದು ಸ್ವಲ್ಪ ವಿಳಂಬವಾಯಿತು. ಈ ಜಯದೊಂದಿಗೆ ಎ ತಂಡವು 6 ಅಂಕ ಗಳಿಸಿತು. ಇದರೊಂದಿಗೆ ಪ್ರಶಸ್ತಿ ಜಯಿಸುವ ತಂಡದ ಆಸೆಯು ಜೀವಂತ-ವಾಗುಳಿಯಿತು.

ಶಮ್ಸ್ ಮುಲಾನಿ, ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್‌ನಲ್ಲಿ (117ಕ್ಕೆ3) ಮಿಂಚಿದರು. ಅವರೊಂದಿಗೆ ತನುಷ್ ಕೋಟ್ಯಾನ್ (73ಕ್ಕೆ4) ಕೂಡ ಪರಿಣಾಮಕಾರಿ ದಾಳಿ ನಡೆಸಿದರು.

ತನುಷ್ ಕೋಟ್ಯಾನ್

ಪಂದ್ಯ ಡ್ರಾ: ಭಾರತ ಬಿ ಮತ್ತು ಸಿ ತಂಡಗಳ ನಡುವಣ ಪಂದ್ಯವು ಡ್ರಾ ಅಯಿತು.

ಸಿ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 525 ರನ್‌ಗಳಿಗೆ ಉತ್ತರವಾಗಿ ಬಿ ತಂಡವು 332 ರನ್ ಗಳಿಸಿತ್ತು. ಸಿ ತಂಡದ ಅನ್ಶುಲ್ ಕಾಂಬೋಜ್ (69ಕ್ಕೆ8) ಅವರ ಬೌಲಿಂಗ್ ಮುಂದೆ ತಂಡವು ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 84.3 ಓವರ್‌ಗಳಲ್ಲಿ 290. ಭಾರತ ಡಿ: 52.1 ಓವರ್‌ಗಳಲ್ಲಿ 183. ಎರಡನೇ ಇನಿಂಗ್ಸ್: ಭಾರತ ಎ: 98 ಓವರ್‌ಗಳಲ್ಲಿ 3ಕ್ಕೆ380 ಡಿಕ್ಲೇರ್ಡ್. ಭಾರತ ಡಿ: 82. 2 ಓವರ್‌ಗಳಲ್ಲಿ 301 (ಯಶ್ ದುಬೆ 37, ರಿಕಿ ಭುಯಿ 113, ಶ್ರೇಯಸ್ ಅಯ್ಯರ್ 41, ಸಂಜು ಸ್ಯಾಮ್ಸನ್ 40, ಸೌರಭ್ ಕುಮಾರ್ 22, ಹರ್ಷಿತ್ ರಾಣಾ 24, ಶಮ್ಸ್ ಮುಲಾನಿ 117ಕ್ಕೆ3, ತನುಷ್ ಕೋಟ್ಯಾನ್ 73ಕ್ಕೆ4) ಫಲಿತಾಂಶ: ಭಾರತ ಎ ತಂಡಕ್ಕೆ 186 ರನ್‌ಗಳ ಜಯ. ಪಂದ್ಯದ ಆಟಗಾರ: ಶಮ್ಸ್ ಮುಲಾನಿ.

ಎರಡನೇ ಪಂದ್ಯ: ಮೊದಲ ಇನಿಂಗ್ಸ್: ಭಾರತ ಸಿ: 124.1 ಓವರ್‌ಗಳಲ್ಲಿ 525. ಭಾರತ ಬಿ: 108 ಓವರ್‌ಗಳಲ್ಲಿ 332. ಎರಡನೇ ಇನಿಂಗ್ಸ್: 37 ಓವರ್‌ಗಳಲ್ಲಿ 4ಕ್ಕೆ128 ಡಿಕ್ಲೇರ್ಡ್: ಋತುರಾಜ್ ಗಾಯಕವಾಡ 62, ರಜತ್ ಪಾಟೀದಾರ್ 42, ರಾಹುಲ್ ಚಾಹರ್ 8ಕ್ಕೆ2) ಫಲಿತಾಂಶ : ಪಂದ್ಯ ಡ್ರಾ.

ಟೆಸ್ಟ್ ಕ್ರಿಕೆಟ್: ಚೆನ್ನೈಗೆ ಬಂದಿಳಿದ ಬಾಂಗ್ಲಾ ತಂಡ

ಚೆನ್ನೈ (ಪಿಟಿಐ): ಭಾರತ ತಂಡದ ಎದುರು ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡಲಿರುವ ಬಾಂಗ್ಲಾದೇಶ ತಂಡವು ಭಾನುವಾರ ಚೆನ್ನೈಗೆ ಬಂದಿಳಿಯಿತು.

ಭಾರತದಲ್ಲಿ ಬಾಂಗ್ಲಾ ತಂಡವು 2 ಟೆಸ್ಟ್ ಮತ್ತು 3 ಟಿ20 ಪಂದ್ಯಗಳ ಸರಣಿಗಳಲ್ಲಿ ಆಡಲಿದೆ. ನಜ್ಮುಲ್ ಹುಸೇನ್ ಶಾಂತೊ ನಾಯಕತ್ವದ ಬಾಂಗ್ಲಾ ತಂಡವು ಪಾಕಿಸ್ತಾನದಲ್ಲಿ 2–0ಯಿಂದ ಸರಣಿ ಜಯ ಸಾಧಿಸಿ ಇಲ್ಲಿಗೆ ಬಂದಿದೆ. ಇದೇ 19ರಂದು ಚೆನ್ನೈನಲ್ಲಿ ಮೊದಲ ಟೆಸ್ಟ್ ನಡೆಯಲಿದೆ.

'ಈ ಸರಣಿಯು ನಮಗೆ ಕಠಿಣ ಸವಾಲೊಡ್ಡಲಿದೆ. ಪಾಕಿಸ್ತಾನ ಎದುರು ಉತ್ತಮ ಸಾಧನೆ ಮಾಡಿದ ನಂತರ ನಮ್ಮಲ್ಲಿ ಆತ್ಮವಿಶ್ವಾಸ ಇಮ್ಮಡಿಸಿದೆ' ಎಂದು ಶಾಂತೊ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಫುಟ್‌ಬಾಲ್: ಎರಡು ತಂಡ ಅನರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯುತ್ತಿರುವ 13 ವರ್ಷದೊಳಗಿನ ಬಾಲಕರ ಸಬ್ ಜೂನಿಯರ್ (ಟಿಯರ್1) ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಟಗಾರರ ವಯೋಮಿತಿ ನಿಯಮ ಉಲ್ಲಂಘಿಸಿದ ಅರುಣಾಚಲ ಪ್ರದೇಶ ಮತ್ತು ಮೇಘಾಲಯ ತಂಡಗಳನ್ನು ಅನರ್ಹಗೊಳಿಸಲಾಗಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವಯೋಮಿತಿ ವಿಭಾಗದಲ್ಲಿಯೂ ಟಿಡಬ್ಲ್ಯು3 ಟೆಸ್ಟ್ (ಮೂಳೆ ಸಾಂದ್ರತೆ ಪರೀಕ್ಷೆ) ಕಡ್ಡಾಯ ಮಾಡಿದೆ.

'ತಂಡಗಳು ಅನರ್ಹವಾಗಿರುವುದು ನಿಜ. ಅರುಣಾಚಲ ಪ್ರದೇಶ ತಂಡವು ಟೂರ್ನಿ ಆರಂಭವಾಗುವ ಮುನ್ನಾ ತಿಳಿಸಿದೆ. ತಂಡದ ಕೆಲವು ಆಟಗಾರರು ಟಿಡಬ್ಲ್ಯು3 ಟೆಸ್ಟ್‌ನಲ್ಲಿ ಉತ್ತೀರ್ಣರಾಗಿಲ್ಲ. ಮೇಘಾಲಯ ತಂಡದ 9 ಆಟಗಾರರು ಟೆಸ್ಟ್‌ನಲ್ಲಿ ಅನುತ್ತೀರ್ಣರಾದರು. ಈ ತಂಡವನ್ನು ಮರಳಿ ಕಳಿಸಲಾಗಿದೆ' ಎಂದು ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ. ಕುಮಾರ್ ತಿಳಿಸಿದ್ದಾರೆ.

ಹೈದರಾಬಾದ್ ರೇಸ್

ವೆಸ್ಟ್ ಬ್ರೂಕ್ ಗೆಲ್ಲುವ ನಿರೀಕ್ಷೆ

ಸಿಲ್ವರ್ ಜೆಟ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವೆಸ್ಟ್ ಬ್ರೂಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:20ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಚೆರಿಶ್ ದಿ ಲೇಡಿ 4, ಪಾಂಚೊ 6, ಅಶ್ಯೂರ್ಡ್ ಸಕ್ಸಸ್ 5
2ನೇ ರೇಸ್: ಏರಿಯಾನ್ ಒನ್ 8, ಡಿಯಾಬ್ಲೊ 1, ಟಾರ್ಚ್ ಬೇರರ್ 6
3ನೇ ರೇಸ್: ಹೋಪಿಂಗ್ ಸ್ಟಾರ್ 1, ಶ್ಯಾಡೊ ಬೇಬಿ 3, ಆಲ್ಕೋಹಾಲ್ ಫ್ರೀ 6
4ನೇ ರೇಸ್: ಕಲ್ಕಿ 8, ಪಾಂಟಿಕ್ರಾಫ್ಟ್ 3, ವೂಸೆಸ್ಟರ್ 7
5ನೇ ರೇಸ್: ಬಾರ್ಬೆಟ್ 5, ಲೇಡಿ ಡೇಂಜರ್ 4, ವಾಲೋಪ್ ಅಂಡ್ ಗ್ಯಾಲಪ್ 9
6ನೇ ರೇಸ್: ವೆಸ್ಟ್ ಬ್ರೂಕ್ 2, ಹರಿಕೇನ್ ಬೇ 6, ಫ್ಲೈ ಟು ದಿ ಸ್ಟಾರ್ಸ್ 5
7ನೇ ರೇಸ್: ವಿಂಡ್ಸರ್ 4, ಸೀ ಮೈ ಆಟಿಟ್ಯೂಡ್ 5, ಫೆಡರರ್ 6

ಉತ್ತಮ ಬೆಟ್: ಕಲ್ಕಿ

ಜಾಕ್‌ಪಾಟ್‌ಗೆ	ಟ್ರಿಬಲ್	ಟ್ರಿಬಲ್
3,4,5,6,7	2,3,4	5,6,7

ಅಥ್ಲೆಟಿಕ್ಸ್: 5 ದಾಖಲೆ

• ಆರ್. ಜಿತೇಂದ್ರ

ಮೈಸೂರು: ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನ 2ನೇ ದಿನವಾದ ಭಾನುವಾರ ಐದು ಕೂಟ ದಾಖಲೆಗಳು ನಿರ್ಮಾಣವಾದವು.

ಶಶಾಂಕ ಪಾಟೀಲ

23 ವರ್ಷದ ಒಳಗಿನ ಪುರುಷರ ಹೈ ಜಂಪ್‌ನಲ್ಲಿ ಶಿವಮೊಗ್ಗದ ಸುದೀಪ್ 2.05 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ಕಳೆದ ವರ್ಷ ಅನಿಲ್ ಕುಮಾರ್ ನಿರ್ಮಿಸಿದ್ದ (2 ಮೀಟರ್) ದಾಖಲೆಯನ್ನು ಅಳಿಸಿದರು.

ಜಾವೆಲಿನ್ ಥ್ರೋನಲ್ಲಿ ಬೆಳಗಾವಿಯ ಡಿವೈಇಎಸ್‌ನ ಶಶಾಂಕ ಪಾಟೀಲ 66.76 ಮೀಟರ್ ದೂರಕ್ಕೆ ಎಸೆದು, 2021ರಲ್ಲಿ ದಕ್ಷಿಣ ಕನ್ನಡದ ಶಾರುಖ್ ತಾರಿಹಾಳ ಹೆಸರಿನಲ್ಲಿದ್ದ 57.80 ಮೀಟರ್ ದಾಖಲೆಯನ್ನು ಅಳಿಸಿದರು.

ಇದೇ ವಯೋಮಿತಿಯ 200 ಮೀಟರ್ಸ್ ಓಟದಲ್ಲಿ ಧಾರವಾಡದ ಪ್ರಸನ್ನಕುಮಾರ್ ಮಣ್ಣೂರು 21.45 ಸೆಕೆಂಡುಗಳಲ್ಲಿ ಗುರಿ ಮುಟ್ಟಿ, 2022ರಲ್ಲಿ ಅಭಿನ್ ದೇವಾಡಿಗ ನಿರ್ಮಿಸಿದ್ದ ದಾಖಲೆಯನ್ನು (21.60 ಸೆ.) ಸರಿಗಟ್ಟಿದರು.

18 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಚಿಕ್ಕಮಗಳೂರಿನ ಎಚ್. ಡಿ. ಪ್ರಥಮ್ 1000 ಮೀ. ಓಟವನ್ನು 2ನಿ, 31.23 ಸೆಕೆಂಡುಗಳಲ್ಲಿ ಕ್ರಮಿಸುವ ಮೂಲಕ ಭೂಷಣ್ ಗುರುವ ಹೆಸರಿನಲ್ಲಿದ್ದ (2ನಿ, 35.10 ಸೆ) ದಾಖಲೆಯನ್ನು ಅಳಿಸಿದರು. 16 ವರ್ಷದ ಒಳಗಿನ ಬಾಲಕಿಯರ 80 ಮೀ. ಹರ್ಡಲ್ಸ್‌ನಲ್ಲಿ ಬೆಂಗಳೂರಿನ ನೂಪುರಾ ಹೊಳ್ಳ 12.51 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ 2019ರಲ್ಲಿ ಬೃಂದಾ ಗೌಡ ಹೆಸರಿನಲ್ಲಿದ್ದ 13.40 ಸೆಕೆಂಡುಗಳ ದಾಖಲೆ ಸರಿಗಟ್ಟಿದರು.

23 ವರ್ಷದ ಒಳಗಿನ ಪುರುಷರ ಹೈ ಜಂಪ್‌ನಲ್ಲಿ 2.05 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ಕೂಟ ದಾಖಲೆ ನಿರ್ಮಿಸಿದ ಶಿವಮೊಗ್ಗದ ಸುದೀಪ್
ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

'ಹಿಂದೂ ಸಮಾಜ ದೇಶದ ಕರ್ತಾ–ಧರ್ತಾ'

ಜೈಪುರ (ಪಿಟಿಐ): ಹಿಂದೂಗಳೆಂದರೆ ಉದಾರಿಗಳು. ಧಾರ್ಮಿಕ ನಂಬಿಕೆ, ಜಾತಿ ಹಾಗೂ ಆಚರಣೆಗಳ ಹೊರತಾಗಿಯೂ ಅವರು ಪ್ರತಿಯೊಬ್ಬರಿಗೂ ಒಳಿತನ್ನು ಬಯಸುತ್ತಾರೆ. ಹಿಂದೂ ಸಮಾಜವು ದೇಶದ ಕ್ರಿಯಾಶಕ್ತಿ ಹಾಗೂ ಧಾರಣಶಕ್ತಿ (ಕರ್ತಾ–ಧರ್ತಾ) ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾನುವಾರ ಹೇಳಿದರು.

'ದೇಶದಲ್ಲಿ ಏನಾದರೂ ತಪ್ಪು ನಡೆಯುತ್ತಿದ್ದರೆ, ಅದು ಹಿಂದೂ ಸಮಾಜದ ಮೇಲೆ ಪ್ರಭಾವ ಬೀರುತ್ತದೆ. ದೇಶದಲ್ಲಿ ಏನೇ ಒಳಿತಾ ದರೂ ಅದು ಹಿಂದೂ ಸಮಾಜಕ್ಕೆ ಹಿರಿಮೆತಂದುಕೊಡುತ್ತದೆ. ಏಕೆಂದರೆ ಹಿಂದೂ ಸಮಾಜವು ಈ ದೇಶದ ಕರ್ತಾ-ಧರ್ತಾ' ಎಂದರು.

ಹಿಂದೂಗಳು ಉದಾರಿಗಳು, ಎಲ್ಲರಿಗೂ ಪ್ರೀತಿ ಹಂಚುತ್ತಾರೆ, ಎಲ್ಲರಿಗೂ ಒಳಿತು ಬಯಸುತ್ತಾರೆ. ಈ ಗುಣಗಳನ್ನು ಹೊಂದಿರುವ ವರನ್ನು ಅವರ ಆಚರಣೆ, ಭಾಷೆ, ಜಾತಿಯ ಹೊರತಾಗಿ ಹಿಂದೂ ಎಂದು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಮೊದಲು ಸಂಘದ ಬಗ್ಗೆ ಬಹುತೇಕರಿಗೆ ತಿಳಿದಿರಲಿಲ್ಲ. ಆದರೆ ಈಗ ವ್ಯಾಪಕವಾಗಿ ಗುರುತಿಸಿಕೊಂಡಿದೆ ಮತ್ತು ಬಾಹ್ಯವಾಗಿ ವಿರೋಧಿಸು ವವರೂ ಸಂಘಕ್ಕೆ ಗೌರವ ನೀಡುತ್ತಾರೆ ಎಂದರು.

ಶಸ್ತ್ರ ಬಳಕೆ: ಪೊಲೀಸರ ಕಳವಳ

ಇಂಫಾಲ್ (ಪಿಟಿಐ): ಪ್ರತಿಭಟನಾ ಸ್ಥಳದಲ್ಲಿ ನಿಯೋಜನೆಗೊಳ್ಳುವ ಭದ್ರತಾ ಸಿಬ್ಬಂದಿ ಮೇಲೆ ಪ್ರತಿಭಟನಕಾರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ದಾಳಿ ನಡೆಸುತ್ತಾರೆ. ಪೊಲೀಸರು ಸಮಾಜದ ಭಾಗವೇ ಹೊರತು ಶತ್ರುಗಳಲ್ಲ ಎಂದು ಮಣಿಪುರ ಪೊಲೀಸರು ಕಳವಳ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಈ ರೀತಿ ದಾಳಿ ನಡೆಸದಂತೆ ಪ್ರತಿಭಟನಕಾರರನ್ನು ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಡಿಐಜಿ (ರೇಂಜ್ 1) ಎನ್ ಹೆರೋಜಿತ್ ಸಿಂಗ್ ಅವರು 'ಇತ್ತೀಚೆಗೆ ಪ್ರತಿಭಟನೆಗಳ ಸ್ವರೂಪವು ಬದಲಾಗಿದೆ. ಭದ್ರತಾ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸುವುದು, ಅವರನ್ನು ಗುರಿಯಾಗಿಸಿ ಸ್ಲಿಂಗ್‌ಶಾಟ್‌ಗಳಿಂದ ಕಬ್ಬಿಣದ ತುಂಡುಗಳನ್ನು ಹಾರಿಸುವುದು, ಅಶ್ರುವಾಯು ಷೆಲ್‌ಗಳನ್ನು ಸಿಡಿಸುವುದು ಹಾಗೂ ಸ್ವಯಂಚಾಲಿತ ಬಂದೂಕುಗಳನ್ನು ಬಳಸುವುದನ್ನು ಕಂಡಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಹಾಗೂ ಸಶಸ್ತ್ರ ದಾಳಿಗಳ ವಿರುದ್ಧ ಹೋರಾಡುವುದು ಪೊಲೀಸರ ಕರ್ತವ್ಯ. ಇಂತಹ ಸಮಯದಲ್ಲಿ ನಾವು ನಮ್ಮ ಅನೇಕ ಸಿಬ್ಬಂದಿಯ ಸಾವು–ನೋವುಗಳನ್ನು ಕಂಡಿದ್ದೇವೆ.

ಪ್ರತಿಭಟನೆಯನ್ನು ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕವಾಗಿ ನಡೆಸಿ ಎಂದು ಜನರಲ್ಲಿ ನನ್ನ ವಿನಂತಿ. ಮುಂದೆ ಹೀಗೆ ಪೊಲೀಸರನ್ನು ಗುರಿಯಾಗಿಸಿ ದಾಳಿ ನಡೆಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದೂ ಎಚ್ಚರಿಕೆಯನ್ನು ನೀಡಿದರು.

ಪೊಲೀಸ್ ಮಾಹಿತಿದಾರನೆಂದು ಶಂಕಿಸಿ ಶಿಕ್ಷಕನ ಕೊಂದ ನಕ್ಸಲರು

ಸುಕ್ಮಾ (ಪಿಟಿಐ): ಪೊಲೀಸ್ ಮಾಹಿತಿದಾರನೆಂದು ಶಂಕಿಸಿ 25 ವರ್ಷದ ಅರೆಕಾಲಿಕ ಶಿಕ್ಷಕರೊಬ್ಬರನ್ನು ನಕ್ಸಲರು ಹತ್ಯೆ ಮಾಡಿರುವ ಘಟನೆ ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಜಗಾರಗುಂಡ ಪೊಲೀಸ್ ಠಾಣಾ ವ್ಯಾಪ್ತಿಯ ಗೊಂಡಪಲ್ಲಿ ಗ್ರಾಮದಲ್ಲಿ ಅರೆಕಾಲಿಕ ಅತಿಥಿ ಶಿಕ್ಷಕ (ಶಿಕ್ಷಾ ದೂತ್) ದೂಡಿ ಅರ್ಜುನ್ ಅವರನ್ನು ನಕ್ಸಲರು ಹೊಡೆದು, ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಿಕ್ಷಕನ ಹತ್ಯೆಯ ಮಾಹಿತಿ ಸಿಕ್ಕಿದ ತಕ್ಷಣ ಪೊಲೀಸರ ತಂಡವನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ನಕ್ಸಲರ ಪತ್ತೆಗೆ ಭದ್ರತಾ ಸಿಬ್ಬಂದಿ ತೀವ್ರ ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಅರ್ಜುನ್ ಅವರು ನಕ್ಸಲರ ಭದ್ರಕೋಟೆಯಾಗಿರುವ ಜಗಾರಗುಂಡ-ಪ್ರದೇಶದ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ನಕ್ಸಲರ ಬೆದರಿಕೆಯಿಂದ ಹಲವಾರು ವರ್ಷಗಳಿಂದ ಮುಚ್ಚಿದ್ದ ಶಾಲೆಗಳನ್ನು ಪುನಃ ತೆರೆಯುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಅವರು ತಿಳಿಸಿದ್ದಾರೆ.

ನಕ್ಸಲರು ಬಸ್ತಾರ್‌ನಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಈ ವರ್ಷ ನಕ್ಸಲ್ ನಿಗ್ರಹ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿರುವುದರಿಂದ ನಕ್ಸಲರು ಭಾರಿ ನಷ್ಟ ಅನುಭವಿಸಿದ್ದಾರೆ. ಹೀಗಾಗಿ ಹತಾಶೆಯಿಂದ ಅವರು ಜನರನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

'ಸಂವಿಧಾನ ವಿರೋಧಿ ಮನಃಸ್ಥಿತಿ'

ಮುಂಬೈ (ಪಿಟಿಐ): 'ಮೀಸಲಾತಿ ಕುರಿತ ಹೇಳಿಕೆಗೆ ರಾಹುಲ್ ಗಾಂಧಿ ಅವರನ್ನು ಟೀಕಿಸಿರುವ ಉಪ ರಾಷ್ಟ್ರಪತಿ ಜಗದೀಪ್ ಧನಕರ್, 'ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರ ಇಂತಹ ನಿಲುವು ಅವರ ಸಂವಿಧಾನ ವಿರೋಧಿ ಮನಃಸ್ಥಿತಿ ತೋರಿಸುತ್ತದೆ' ಎಂದಿದ್ದಾರೆ.

ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಿದ್ದ ಧನ್‌ಕರ್ ಅವರು, 'ಭಾರತದ ಸಂವಿಧಾನದ ಆತ್ಮವನ್ನೇ ಕೆಲವರು ಮರೆತಿರುವ ಈ ಹೊತ್ತಿನಲ್ಲಿ, ಅದರ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ' ಎಂದರು.

'ಸಾಂವಿಧಾನಿಕ ಹುದ್ದೆಯಲ್ಲಿರುವವರು ವಿದೇಶಿ ನೆಲದಲ್ಲಿ ನಿಂತು ಮೀಸಲಾತಿ ಅಂತ್ಯವಾಗಬೇಕು ಎನ್ನುತ್ತಾರೆ. ಮೀಸಲಾತಿ ಕುರಿತ ಈ ಪೂರ್ವಗ್ರಹ ಪೀಡಿತ ಧೋರಣೆಯು ಹೊಸ ಪೀಳಿಗೆಗೂ ವ್ಯಾಪಿಸಿದಂತಿದೆ' ಎಂದು ಹೇಳಿದರು. ಮಾಜಿ ಪ್ರಧಾನಿಗಳಾದ ಜವಹರಲಾಲ್ ನೆಹರೂ, ಇಂದಿರಾಗಾಂಧಿ ಮತ್ತು ರಾಜೀವ್‌ಗಾಂಧಿ ವಿರುದ್ಧವೂ, ಅವರು ಮೀಸಲಾತಿ ಕುರಿತಂತೆ ಹೊಂದಿದ್ದ ನಿಲುವುಗಳಿಗಾಗಿ ಉಪ ರಾಷ್ಟ್ರಪತಿ ಧನಕರ್ ಅವರು ವಾಗ್ದಾಳಿ ನಡೆಸಿದರು.

'ಮೀಸಲಾತಿ ಪ್ರತಿಭೆಯ ವಿರುದ್ಧ ಅಲ್ಲ; ಅದು, ದೇಶ ಮತ್ತು ಸಂವಿಧಾನದ ಆತ್ಮ, ನಕಾರಾತ್ಮಕ ಕ್ರಿಯೆಯಲ್ಲ, ಬದ್ಧತೆ' ಎಂದು ಧನಕರ್ ವ್ಯಾಖ್ಯಾನಿಸಿದರು.

ಅಮೆರಿಕ ಪ್ರವಾಸದ ಅವಧಿಯಲ್ಲಿ ರಾಹುಲ್‌ಗಾಂಧಿ ಅವರು, 'ಭಾರತದಲ್ಲಿ ಸಮಾನತೆಯ ಸ್ಥಿತಿ ಮೂಡಿದ ನಂತರ ಮೀಸಲಾತಿ ರದ್ದತಿ ಕುರಿತು ಕಾಂಗ್ರೆಸ್ ಪಕ್ಷ ಚಿಂತಿಸಲಿದೆ' ಎಂದು ಹೇಳಿದ್ದಾಗಿ ವರದಿಯಾಗಿತ್ತು. ನಂತರ ಮಾಧ್ಯಮ ಸಂವಾದದಲ್ಲಿ, 'ನನ್ನ ಹೇಳಿಕೆಯನ್ನು ತಪ್ಪಾಗಿ ಬಿಂಬಿಸಲಾಗಿದೆ. ಮೀಸಲಾತಿ ಮಿತಿಯನ್ನು ನಾವು ಶೇ 50 ಮೀರಿ ವಿಸ್ತರಿಸಲಿದ್ದೇವೆ' ಎಂದು ಹೇಳಿದ್ದರು.

'ಸಂವಿಧಾನವನ್ನು ಗೌರವಿಸುವ ಯಾರೊಬ್ಬರೂ ರಾಹುಲ್ ಗಾಂಧಿ ಅವರ ನಡೆಯನ್ನು ಒಪ್ಪುವುದಿಲ್ಲ' ಎಂದು ಧನಕರ್ ಟೀಕಿಸಿದರು.

ಶೇ 50ರ ಮಿತಿ ರದ್ದು ಬೇಡಿಕೆ ಬೆಂಬಲಿಸುವಿರಾ?

ನವದೆಹಲಿ (ಪಿಟಿಐ): 'ಪರಿಶಿಷ್ಟರು, ಇತರೆ ಹಿಂದುಳಿದ ವರ್ಗದವರಿಗಾಗಿ ಮೀಸಲಾತಿಯ ಶೇ 50ರ ಮಿತಿ ತೆಗೆಯಬೇಕು ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ಉಪ ರಾಷ್ಟ್ರಪತಿ ಅವರೇ, ನೀವು ಇದನ್ನು ಬೆಂಲಿಸುತ್ತೀರಾ' ಎಂದು ಕಾಂಗ್ರೆಸ್ ಪಕ್ಷದ ವಕ್ತಾರ ಪವನ್ ಖೇರಾ 'ಎಕ್ಸ್' ಮೂಲಕ ಧನಕರ್‌ರನ್ನು ಪ್ರಶ್ನಿಸಿದ್ದಾರೆ.

ಎದೆಗಾರಿಕೆಯ ತೀರ್ಮಾನವೇ ಅಥವಾ ವರ್ಚಸ್ಸು ಸರಿಪಡಿಸಿಕೊಳ್ಳುವ ಯತ್ನವೇ?

ಕೇಜ್ರಿವಾಲ್ ತೀರ್ಮಾನದ ಹಿಂದಿನ ಲೆಕ್ಕಾಚಾರವೇನು?

• ಶೆಮಿನ್ ಜಾಯ್

ನವದೆಹಲಿ: ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಅರವಿಂದ ಕೇಜ್ರಿವಾಲ್ ಅವರು ಘೋಷಿಸಿರುವುದು ರಾಜಕೀಯವಾಗಿ ಎದೆಗಾರಿಕೆಯ ತೀರ್ಮಾನವೇ ಅಥವಾ ಭ್ರಷ್ಟಾಚಾರ ವಿರೋಧಿ ಹೋರಾಟದ ಹೀರೊ ಎಂಬ ಹೆಗ್ಗಳಿಕೆಯು ತಾವು ಹಗರಣವೊಂದರಲ್ಲಿ ಸಿಲುಕಿದ ನಂತರ ಮಾಸುತ್ತಿರುವುದನ್ನು ಅರಿತು, ಅದನ್ನು ಸರಿಪಡಿಸಿಕೊಳ್ಳುವ ತಂತ್ರಗಾರಿಕೆಯ ನಡೆಯೇ?

ಅವರ ತೀರ್ಮಾನವು ಈ ಎರಡರ ಪೈಕಿ ಯಾವುದು ಎಂಬುದು ಈ ನಡೆಯನ್ನು ಯಾವ ದೃಷ್ಟಿಕೋನದಿಂದ ನೋಡಲಾಗುತ್ತದೆ ಎಂಬುದನ್ನು ಆಧರಿಸಿದೆ. ಜೈಲಿನಲ್ಲಿ ಇದ್ದಾಗ ಕೇಜ್ರಿವಾಲ್ ಅವರು, 'ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂಬ ಒತ್ತಾಯಗಳಿಗೆ ಮಣಿದಿರಲಿಲ್ಲ.

ಎಎಪಿಯನ್ನು ಹಾಗೂ ದೆಹಲಿ ಸರ್ಕಾರವನ್ನು ಹಾಳುಗೆಡವಲು ಪಿತೂರಿಯೊಂದು ನಡೆದಿದೆ ಎಂದು ಅವರು ಆರೋಪಿಸಿದ್ದರು. ಆದರೆ ಈಗ, ದೆಹಲಿ ವಿಧಾನಸಭೆಗೆ ಚುನಾವಣೆ ಘೋಷಣೆ ಆಗುವುದಕ್ಕೆ ಐದು ತಿಂಗಳು ಮಾತ್ರ ಇರುವಾಗ ಅವರು ರಾಜೀನಾಮೆ ತೀರ್ಮಾನ ಪ್ರಕಟಿಸಿರುವುದು ಕುತೂಹಲಕಾರಿ.

ವಿಧಾನಸಭಾ ಚುನಾವಣೆಯು ಅವಧಿಗೆ ಮುನ್ನವೇ ನಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ. ಆದರೆ, 'ಪ್ರಾಮಾಣಿಕತೆಯ ಪ್ರಮಾಣಪತ್ರ' ಪಡೆದುಕೊಳ್ಳುವ ಉದ್ದೇಶ ಹೊರ-ತುಪಡಿಸಿದರೆ, ಈ ಆಗ್ರಹಕ್ಕೆ ಬೇರೆ ಕಾರಣ ಏನು ಎಂಬುದನ್ನು ಅವರು ಹೇಳಿಲ್ಲ. ಕೇಜ್ರಿವಾಲ್ ಅವರು ಹಿರಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡ ನಂತರ ಈ ತೀರ್ಮಾನ ಕೈಗೊಂಡಿರುವಂತಿದೆ. ಎಎಪಿಯಲ್ಲಿ ಎಲ್ಲವೂ ಸರಿಯಿಲ್ಲ ಎಂದು ಕೇಜ್ರಿವಾಲ್ ಭಾವಿಸಿರುವ ಹೊತ್ತಿನಲ್ಲಿ, ಲೋಕಸಭಾ ಚುನಾವಣೆಯಲ್ಲಿ ಎಎಪಿಯ ಸಾಧನೆಯು ನಿರೀಕ್ಷೆಗೆ ಅನುಗುಣವಾಗಿ ಇಲ್ಲದಿರುವಾಗ ಈ ತೀರ್ಮಾನ ಪ್ರಕಟವಾಗಿದೆ.

ಚುನಾವಣಾ ಪ್ರಚಾರಗಳನ್ನು ರೂಪಿಸುವ ವಿಚಾರದಲ್ಲಿ ಕೇಜ್ರಿವಾಲ್ ಅವರು ಮಾತಿನ ಆಡಂಬರ ಹಾಗೂ ಆರ್ಭಟವನ್ನು ನೆಚ್ಚಿಕೊಳ್ಳುತ್ತಾರೆ. ಇದನ್ನು 'ಇಂಡಿಯಾ ಅಗೇನ್ಸ್ಟ್ ಕರಪ್ಷನ್' ಸಂಘಟನೆಯ ಹೋರಾಟ ನಡೆಯುತ್ತಿದ್ದ ದಿನಗಳಿಂದಲೂ ಗಮನಿಸಲಾಗಿದೆ. ಈಗ, ಆಮ್ ಆದ್ಮಿ ಪಕ್ಷದ ಭ್ರಷ್ಟಾಚಾರ ವಿರೋಧಿ ನಿಲುವಿನ ವಿಚಾರದಲ್ಲಿ ಜನರು ಅನುಮಾನಗಳನ್ನು ಹೊಂದಿರುವಂತೆ ಕಾಣುತ್ತಿದೆ. ಈ ಸಂದರ್ಭದಲ್ಲಿ ಕೇಜ್ರಿವಾಲ್ ಅವರು ಹೊಸ ಸಂಕಥನವನ್ನು ಕಟ್ಟಲು ಯತ್ನಿಸುತ್ತಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾಮೀನು ಪಡೆಯಲು ಕೇಜ್ರಿವಾಲ್ ಯಶಸ್ವಿ ಆಗಿದ್ದಾರಾದರೂ, ಜಾಮೀನು ನೀಡುವಾಗ ನ್ಯಾಯಾಲಯ ಹಲವು ಷರತ್ತುಗಳನ್ನು ವಿಧಿಸಿದೆ. ಈ ಷರತ್ತುಗಳ ಪರಿಣಾಮವಾಗಿ ಕೇಜ್ರಿವಾಲ್ ಅವರು ದಾಖಲೆಗಳಲ್ಲಿ ಮಾತ್ರ ಮುಖ್ಯಮಂತ್ರಿ ಆದಂತಾಗಿದೆ.

ಎಎಪಿ ತಾನು ಹೇಳಿದ್ದನ್ನು ಮಾಡಿ ತೋರಿಸಬಲ್ಲದೇ ಎಂಬ ಪ್ರಶ್ನೆಯು ಜನರಿಂದ ಬರಬಹುದು, ಇದು ಮತಗಳನ್ನು ಸೆಳೆಯುವ ತಮ್ಮ ಸಾಮರ್ಥ್ಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಬಹುದು ಎಂಬ ಲೆಕ್ಕಾಚಾರ ಕೇಜ್ರಿವಾಲ್ ಅವರಿಗೆ ಇದೆ. ಅಲ್ಲದೆ, ಒಂಬತ್ತು ವರ್ಷಗಳಿಂದ ಅಧಿಕಾರದಲ್ಲಿ ಇರುವ ಅವರ ಮಾತುಗಳಲ್ಲಿ ಈಗ ಹೊಸತನ ಎನ್ನುವುದು ಉಳಿದಿಲ್ಲ. ಆರೋಪಗಳ ಪರಿಣಾಮ, ಎಎಪಿ ಹಾಗೂ ಕೇಜ್ರಿವಾಲ್ ಅವರ 'ಭ್ರಷ್ಟಾಚಾರ ವಿರೋಧಿ' ಎಂಬ ಹೆಗ್ಗಳಿಕೆಗೆ ಪೆಟ್ಟು ಬಿದ್ದಿದೆ. ಆದರೆ, ರಾಜೀನಾಮೆ ನೀಡುವ ಮೂಲಕ ತಾವು ಅಧಿಕಾರದಾಹಿ ಅಲ್ಲ ಎಂದು ತೋರಿಸಿ ಕೊಳ್ಳುವುದು ಅವರ ಇರಾದೆ.ಭಾನುವಾರದ ಭಾಷಣದಲ್ಲಿ ಕೇಜ್ರಿವಾಲ್ ಅವರು ತಮ್ಮ ಸರ್ಕಾರವು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ತೋರಿದ ಸಾಧನೆಯನ್ನು ಉಲ್ಲೇಖಿಸಿದರಾದರೂ, ಹಿಂದೆಲ್ಲ ಮಾಡುತ್ತಿದ್ದಂತೆ ಈ ಬಾರಿ ಅದರ ಬಗ್ಗೆ ಹೆಚ್ಚು ಒತ್ತು ನೀಡಲಿಲ್ಲ.

ನಾಟಕವಾಡುತ್ತಿದ್ದಾರೆ– ಬಿಜೆಪಿ: 'ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಆಡಳಿತಾವಧಿಯಲ್ಲಿ ಸೋನಿಯಾ ಗಾಂಧಿ ಅವರು ಸೃಷ್ಟಿಸಿದ್ದಂತಹ ಪರಿಸ್ಥಿತಿಯನ್ನೇ ದೆಹಲಿಯಲ್ಲಿ ತರುವುದು ಕೇಜ್ರಿವಾಲ್ ಗುರಿ. ಅದಕ್ಕೇ ಅವರು ಸಾರ್ವಜನಿಕರಲ್ಲಿ ಸದಭಿಪ್ರಾಯ ಮೂಡಿಸುವ ನಾಟಕವಾಡುತ್ತಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ.

2 ದಿನದಲ್ಲಿ ರಾಜೀನಾಮೆ: ಕೇಜ್ರಿವಾಲ್

ಒಂದನೇ ಪುಟದಿಂದ...

'ನೀವು ಪ್ರಾಮಾಣಿಕರು ಎಂದು ಜನರು ಹೇಳಿದ ನಂತರವೇ ನಾನು ಮುಖ್ಯಮಂತ್ರಿ ಆಗುತ್ತೇನೆ, ಮನೀಶ್ ಸಿಸೋಡಿಯಾ ಅವರು ಉಪ ಮುಖ್ಯಮಂತ್ರಿ ಆಗುತ್ತಾರೆ' ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಕೂಡ ಆಗಿರುವ ಕೇಜ್ರಿವಾಲ್ ಹೇಳಿದರು.

'ನಾನು ಭ್ರಷ್ಟ ಎಂದು ಸಾಬೀತು ಮಾಡಲು ಬಿಜೆಪಿ ಯತ್ನಿಸಿತು' ಎಂದು ಆರೋಪಿಸಿದ ಕೇಜ್ರಿವಾಲ್, 'ಜನರಿಗೆ ಒಳ್ಳೆಯ ಶಾಲೆ ಹಾಗೂ ಉಚಿತ ವಿದ್ಯುತ್ ನೀಡಲು ಬಿಜೆಪಿಗೆ ಸಾಧ್ಯವಿಲ್ಲ. ಏಕೆಂದರೆ ಬಿಜೆಪಿಯವರೇ ಭ್ರಷ್ಟರು' ಎಂದರು. 'ನಾವು ಪ್ರಾಮಾಣಿಕರು' ಎಂದು ಪ್ರತಿಪಾದಿಸಿದರು.

'ಬಿಜೆಪಿಯವರಲ್ಲದ ಮುಖ್ಯಮಂತ್ರಿಗಳ ವಿರುದ್ಧ ಆ ಪಕ್ಷದವರು ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತಾರೆ; ಬಂಧನ ಆದರೆ ರಾಜೀನಾಮೆ ಕೊಡಬಾರದು, ಅದರ ಬದಲಿಗೆ ಜೈಲಿನಿಂದಲೇ ಸರ್ಕಾರವನ್ನು ಮುನ್ನಡೆಸಬೇಕು ಎಂದು ನಾನು ಒತ್ತಾಯಿಸುತ್ತೇನೆ' ಎಂದರು.

'ನಾನು ರಾಜೀನಾಮೆ ನೀಡಲಿಲ್ಲ (ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧನದ ನಂತರ). ಏಕೆಂದರೆ ನನಗೆ ಪ್ರಜಾಪ್ರಭುತ್ವದಲ್ಲಿ ಗೌರವವಿದೆ. ನನಗೆ ಸಂವಿಧಾನವೇ ಎಲ್ಲಕ್ಕಿಂತ ಮಿಗಿಲು' ಎಂದು ಕೇಜ್ರಿವಾಲ್ ಹೇಳಿದರು. ಬಿಜೆಪಿಯ 'ಪಿತೂರಿಗಳನ್ನು' ಎದುರಿಸಿ ನಿಲ್ಲುವ ಶಕ್ತಿ ಇರುವುದು ಎಎಪಿಗೆ ಮಾತ್ರ ಎಂದರು.

ಜನ ಲೋಕಪಾಲ ಮಸೂದೆ ವಿಚಾರವಾಗಿ 2014ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ತಾವು ರಾಜೀನಾಮೆ ನೀಡಿದ್ದನ್ನು ಉಲ್ಲೇಖಿಸಿದ ಕೇಜ್ರಿವಾಲ್, 'ಆಗ ನನ್ನ ಆದರ್ಶಗಳಿಗಾಗಿ ರಾಜೀನಾಮೆ ನೀಡಿದ್ದೆ. ನನಗೆ ಅಧಿಕಾರದ ಮೇಲೆ ಮೋಹ ಇಲ್ಲ' ಎಂದು ಹೇಳಿದರು. ಆಗ ಅವರು ಅಧಿಕಾರ ಸ್ವೀಕರಿಸಿದ 49ನೇ ದಿನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಚೆಸ್: ಭಾರತ ತಂಡಗಳ ಗೆಲುವಿನ ಓಟ ಅಬಾಧಿತ

ಬುಡಾಪೆಸ್ಟ್ (ಪಿಟಿಐ): ಯಶಸ್ಸಿನ ಓಟ ಮುಂದುವರಿಸಿರುವ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಸತತ ನಾಲ್ಕನೇ ಜಯ ಪಡೆದರು. 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಅವರ ಉತ್ತಮ ಆಟದ ಬಲದಿಂದ ಭಾರತ 3.5–0.5 ಅಂತರದಿಂದ ಶನಿವಾರ ರಾತ್ರಿ ಸರ್ಬಿಯಾ ತಂಡವನ್ನು ಮಣಿಸಿತು.

ಪ್ರಜ್ಞಾನಂದ ಅವರು ಅಲೆಕ್ಸಿ ಸರನ ಅವರೊಂದಿಗೆ ಪಾಯಿಂಟ್ ಹಂಚಿಕೊಂಡ ಮೇಲೆ ಅರ್ಜುನ್ ಅವರ ಆಟ ಭಾರತದ ಪಾಲಿಗೆ ನಿರ್ಣಾಯಕವಾಗಿತ್ತು. ವಿಶ್ವದ ನಾಲ್ಕನೇ ಕ್ರಮಾಂಕದ ಅರ್ಜುನ್ ನಿರಾಸೆ ಮೂಡಿಸದೇ, ಪರಿಪೂರ್ಣ ಪ್ರತಿದಾಳಿಯ ಆಟದಲ್ಲಿ ಎದುರಾಳಿ ಇಂಡ್ಜಿಕ್ ಅಲೆಕ್ಸಾಂಡರ್ ಅವರನ್ನು ಸೋಲಿಸಿದರು. ಮಾತ್ರವಲ್ಲ, ತಮ್ಮ ರೇಟಿಂಗನ್ನು 2800 ರೇಟಿಂಗ್ ಹತ್ತಿರ ತಲುಪಿದರು.

ಗ್ರ್ಯಾಂಡ್‌ಮಾಸ್ಟರ್‌ಗಳಾದ ವಿದಿತ್ ಗುಜರಾತಿ ಮತ್ತು ಡಿ.ಗುಕೇಶ್ ಅವರು ಕ್ರಮವಾಗಿ ಎವಿಕ್ ವೆಲಿಮಿರ್ ಮತ್ತು ಅಲೆಕ್ಸಾಂಡರ್ ಪ್ರೆಡ್ಕೆ ಅವರನ್ನು ಸೋಲಿಸಿದರು.

ದಿವ್ಯಾ

ಮಹಿಳೆಯರ ವಿಭಾಗದಲ್ಲಿ ಭಾರತ ತಂಡ 3.5–0.5 ರಿಂದ ಫ್ರಾನ್ಸ್ ತಂಡವನ್ನು ಮಣಿಸಿ ಅಜೇಯ ಓಟ ಮುಂದುವರಿಸಿತು.

ಇನ್ನು ಏಳೂ ಸುತ್ತಿನ ಪಂದ್ಯಗಳು ಬಾಕಿವುಳಿದಿವೆ.

ಅಗ್ರ ಬೋರ್ಡ್‌ನಲ್ಲಿ ಡಿ.ಹಾರಿಕ ತಮ್ಮೆಲ್ಲ ಅನುಭವ ಬಳಸಿಕೊಂಡು ಫ್ರೆಂಚ್ ಆಟಗಾರ್ತಿ ಡೀಮೆಂಟೆ ದೊಲಿಟ್ ಕಾರ್ನೆಟ್ ಅವರನ್ನು ಸೋಲಿಸಿದರು. ತಾನಿಯಾ ಸಚದೇವ್ ಅವರು ಬೆನ್‌ಬೆಸ್ಮಿಯಾ ನತಾಶ ಅವರ ವಿರುದ್ಧ ಗೆಲುವಿಗೆ ಹೋರಾಡಬೇಕಾಯಿತು. ಫ್ರಾನ್ಸ್‌ನ ಆಟಗಾರ್ತಿ ಸಮಯದ ಒತ್ತಡಕ್ಕೆ ಸಿಲುಕಿದ್ದರಿಂದ ತಾನಿಯಾ ಗೆಲುವು ಸುಲಭವಾಯಿತು. ದಿವ್ಯಾ ದೇಶಮುಖ್, ಹೆಝ್ಞಾಜಿಪೌರ್ ಮಿತ್ರಾ ವಿರುದ್ಧ ಜಯಗಳಿಸಿದರೆ, ವೈಶಾಲಿ ಮತ್ತು ಸೋಫಿ ಮಿಲಿಟ್ ಪಾಯಿಂಟ್ ಹಂಚಿಕೊಂಡರು.

ಹಾಕಿ ಕರ್ನಾಟಕಕ್ಕೆ ಸುಲಭ ಜಯ

ಜಲಂಧರ್ (ಪಿಟಿಐ): ಕರ್ನಾಟಕ ತಂಡ, 14ನೇ ಹಾಕಿ ಇಂಡಿಯಾ ಜೂನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಎಚ್ ಗುಂಪಿನ ಲೀಗ್ ಪಂದ್ಯದಲ್ಲಿ ಭಾನುವಾರ 6–1 ಗೋಲುಗಳಿಂದ ಕೇರಳ ತಂಡವನ್ನು ಸದೆಬಡಿಯಿತು.

ಆರ್ಯನ್ ಉತ್ತಪ್ಪ (6 ಮತ್ತು 35ನೇ ನಿಮಿಷ), ಕಳೆದ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧಿಸಿದ್ದ ಸುನೀಲ್ ಪಿ.ಬಿ. (8 ಮತ್ತು 45ನೇ ನಿಮಿಷ) ತಲಾ ಎರಡೆರಡು ಗೋಲುಗಳನ್ನು ಗಳಿಸಿದರು.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಹರಿಯಾಣ 6–1 ಗೋಲುಗಳಿಂದ ರಾಜಸ್ಥಾನ ಮೇಲೆ ಜಯಪಡೆಯಿತು.

ಟಿ20: ಮೂರನೇ ಪಂದ್ಯ ಮಳೆಪಾಲು

ಮ್ಯಾಂಚೆಸ್ಟರ್ (ಎಪಿ): ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಡುವಣ ಟಿ20 ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯ ಭಾನುವಾರ ಮಳೆಗೆ ಕೊಚ್ಚಿಹೋಯಿತು. ಇದರಿಂದ ಸರಣಿ 1–1 ರಲ್ಲಿ ಸಮಬಲಗೊಂಡಿತು.

ಅನ್ಮೋಲ್ ಖರ್ಬ್

ಅನ್ಮೋಲ್‌ಗೆ ಚೊಚ್ಚಲ ಪ್ರಶಸ್ತಿ

ಲಿವೆನ್, ಬೆಲ್ಜಿಯಂ (ಪಿಟಿಐ): ಭಾರತದ 17 ವರ್ಷ ವಯಸ್ಸಿನ ಅನ್ಮೋಲ್ ಖರ್ಬ್ ಅವರು ಮಹಿಳೆಯರ ಸಿಂಗಲ್ಸ್ ಬ್ಯಾಡ್ಮಿಂಟನ್‌ನಲ್ಲಿ ಮೊದಲ ಅಂತರರಾಷ್ಟ್ರೀಯ ಪ್ರಶಸ್ತಿ ಗಳಿಸಿದರು.

ಶನಿವಾರ ಇಲ್ಲಿ ನಡೆದ ಬೆಲ್ಜಿಯನ್ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಅನ್ಮೋಲ್ 24-22, 12-21, 21-10ರಿಂದ ಏಳನೇ ಶ್ರೇಯಾಂಕದ ಆಟಗಾರ್ತಿ, ಡೆನ್ಮಾರ್ಕ್‌ನ ಅಮೇಲಿ ಶುಜ್ ವಿರುದ್ಧ ಜಯಿಸಿದರು. 59 ನಿಮಿಷ ನಡೆದ ಪಂದ್ಯವು ರೋಚಕವಾಗಿತ್ತು.

ಫರೀದಾಬಾದಿನ ಅನ್ಮೋಲ್ ಅವರು 222 ರ‍್ಯಾಂಕ್ ಆಟಗಾರ್ತಿಯಾಗಿದ್ದಾರೆ.

ಕೆಎಸ್‌ಸಿಎ ಕೋಲ್ಟ್ಸ್‌ಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೆಎಸ್‌ಸಿಎ ಕೋಲ್ಟ್ಸ್ ತಂಡವು ಬರೋಡಾ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 128 ರನ್‌ಗಳ ಹಿನ್ನಡೆ ಅನುಭವಿಸಿದೆ.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದ 2ನೇ ದಿನವಾದ ಭಾನುವಾರ ಬರೋಡಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿದ ಕೋಲ್ಟ್ಸ್ 2ನೇ ಇನಿಂಗ್ಸ್‌ನಲ್ಲಿ 1 ವಿಕೆಟ್‌ಗೆ 38 ರನ್ ಗಳಿಸಿದೆ.

ಬರೋಡಾ ಪರ ಅಭಿಮನ್ಯು ಸಿಂಗ್ (79) ಹಾಗೂ ಮಿತೇಶ್ ಪಟೇಲ್ (76) ಐದನೇ ವಿಕೆಟ್‌ಗೆ 104 ರನ್ ಜೊತೆಯಾಟದ ಮೂಲಕ ಭಾರಿ ಮೊತ್ತ ಕಲೆಹಾಕುವ ಪ್ರಯತ್ನ ನಡೆಸಿದರು. ಆದರೆ ಕೆಳಕ್ರಮಾಂಕದ ಬ್ಯಾಟರ್‌ಗಳು ಉತ್ತಮವಾಗಿ ಆಡಲಿಲ್ಲ. ಕೋಲ್ಟ್ಸ್ ತಂಡದ ಧೀರಜ್ ಗೌಡ 80 ರನ್‌ಗಳಿಗೆ 4 ವಿಕೆಟ್ ಉರುಳಿಸಿದರೆ, ನಿಶ್ಚಿತ್, ಧೀರಜ್ ಹಾಗೂ ಶುಭಾಂಗ್ ಹೆಗ್ಡೆ ತಲಾ 2 ವಿಕೆಟ್ ಪಡೆಯುವ ಮೂಲಕ ಸಾಥ್ ನೀಡಿದರು.

ಎಸ್‌ಜೆಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮತ್ತೊಂದು ಪಂದ್ಯದಲ್ಲಿ ಒಡಿಶಾ ಪರ ಆಕರ್ಷಕ ಶತಕ ಸಿಡಿಸಿದ ಕೆ. ಸಂದೀಪ್ (158: 242 ಎ, 4X22, 6X1) ತಂಡಕ್ಕೆ ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಒದಗಿಸಿದರು. ಡಾ.ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ ಪರ ನಾಯಕ ಕರ್ಷ್ ಕೊಠಾರಿ 82ಕ್ಕೆ 7 ವಿಕೆಟ್ ಉರುಳಿಸಿ ಮಿಂಚಿದರು.

2ನೇ ಇನಿಂಗ್ಸ್‌ನಲ್ಲಿ ಪಾಟೀಲ ಕ್ರಿಕೆಟ್ ಅಕಾಡೆಮಿ 2 ವಿಕೆಟ್‌ಗೆ 88 ರನ್ ಗಳಿಸಿದ್ದು, 3ನೇ ದಿನಕ್ಕೆ ಆಟ ಕಾಯ್ದುಕೊಂಡಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ:

ಕೆಎಸ್‌ಸಿಎ ಕೋಲ್ಟ್ಸ್ ಪರ ನಾಲ್ಕು ವಿಕೆಟ್ ಉರುಳಿಸಿದ ಎಡಗೈ ಸ್ಪಿನ್ನರ್ ಧೀರಜ್ ಗೌಡ ಬೌಲಿಂಗ್ ವೈಖರಿ
ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 62.3 ಓವರ್‌ಗಳಲ್ಲಿ 202. ಬರೋಡಾ ಕ್ರಿಕೆಟ್ ಸಂಸ್ಥೆ: 104.3 ಓವರ್‌ಗಳಲ್ಲಿ 330 (ಕೆನೆತ್ ಪಟೇಲ್ 73. ಮಿತೇಶ್ ಪಟೇಲ್ 76, ಅಭಿಮನ್ಯು ಸಿಂಗ್ 79. ಧೀರಜ್ ಗೌಡ 80ಕ್ಕೆ 4, ಧನುಷ್ ಗೌಡ 48ಕ್ಕೆ 2, ನಿಶ್ಚಿತ್ ಪೈ 35ಕ್ಕೆ 2). ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 9.2 ಓವರ್‌ಗಳಲ್ಲಿ 1 ವಿಕೆಟ್‌ಗೆ 38 (ಎಸ್.ಯು. ಕಾರ್ತಿಕ್ 27, ಎಂ.ಬಿ. ಶಿವಂ 10. ಭಾರ್ಗವ್ ಭಟ್ 11ಕ್ಕೆ 1)

ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನಿಂಗ್ಸ್: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 53.3 ಓವರ್‌ಗಳಲ್ಲಿ 262. ಒಡಿಶಾ ಕ್ರಿಕೆಟ್ ಸಂಸ್ಥೆ: 86.1 ಓವರ್‌ಗಳಲ್ಲಿ 283 (ಕೆ. ಸಂದೀಪ್ 158, ಆಶೀರ್ವಾದ್ ಸ್ವೈನ್ 55. ಕರ್ಷ್ ಕೊಠಾರಿ 82ಕ್ಕೆ 7). 2ನೇ ಇನಿಂಗ್ಸ್: ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 88ಕ್ಕೆ 2 (ಪ್ರಣವ್ ಕೇಲಾ 31, ಹರ್ಷ್ ರಾಣೆ 37)

ಐಎಸ್‌ಎಲ್: ಪಂಜಾಬ್‌ಗೆ ರೋಚಕ ಜಯ

ಕೊಚ್ಚಿ (ಪಿಟಿಐ): ಕೊನೆಯ ಕ್ಷಣದಲ್ಲಿ ಕ್ರೊವೇಷ್ಯಾದ ಫಿಲಿಪ್ ಮ್ರಿಲ್ಜಾಕ್ ಅವರು ಗಳಿಸಿದ ಗೋಲಿನ ನೆರವಿನಿಂದ ಪಂಜಾಬ್ ಎಫ್‌ಸಿ ತಂಡ, ಭಾನುವಾರ ನಡೆದ ಐಎಸ್‌ಎಲ್‌ನ ರೋಚಕ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡದ ಮೇಲೆ 2–1 ಗೋಲುಗಳಿಂದ ಜಯಗಳಿಸಿತು.

ಜವಾಹರಲಾಲ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದ ಎಲ್ಲ ಮೂರೂ ಗೋಲುಗಳು ಕೊನೆಯ 11 ನಿಮಿಷಗಳಲ್ಲಿ ದಾಖಲಾದವು.

86ನೇ ನಿಮಿಷ ಲೂಕಾ ಮೇಯ್ಸೆನ್ ಅವರು ಪಂಜಾಬ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ 92ನೇ (90 + 2) ನಿಮಿಷ ಜೇಸಸ್ ಜಿಮಿನೆಝ್ ಮೂಲಕ ಸಮಮಾಡಿಕೊಂಡಿತು. ಪಂದ್ಯ ಸಮಬಲದಲ್ಲಿ ಮುಗಿಯಿತು ಎನ್ನುವಾಗ ಲೂಕಾ ಅವರ ಉತ್ತಮ ಪಾಸ್‌ನಲ್ಲಿ 90 + 5ನೇ ನಿಮಿಷ ಫಿಲಿಪ್ ನಿರ್ಣಾಯಕ ಗೋಲು ಗಳಿಸಿ ಪಂಜಾಬ್ ಸಂಭ್ರಮಕ್ಕೆ ಕಾರಣರಾದರು.

ಇಂದು ನಾರ್ತ್‌ಈಸ್ಟ್– ಮೊಹಮಡನ್ ಪಂದ್ಯ

ಕೋಲ್ಕತ್ತ (ಪಿಟಿಐ): ಹಾಲಿ ಡುರಾಂಡ್ ಕಪ್ ಚಾಂಪಿಯನ್ಸ್ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು, ಇಂಡಿಯನ್ ಸೂಪರ್ ಲೀಗ್ ಅಭಿಯಾನವನ್ನು ಸೋಮವಾರ ಮೊಹಮಡನ್ ಸ್ಪೋರ್ಟ್ಸ್ ಕ್ಲಬ್ ವಿರುದ್ಧ ಆಡುವ ಮೂಲಕ ಆರಂಭಿಸಲಿದೆ. ಪಂದ್ಯವು ಕಿಶೋರ ಭಾರತಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮೊಹಮಡನ್ ತಂಡ 2023–24ರ ಐ ಲೀಗ್ ಗೆದ್ದು, ಐಎಸ್‌ಎಲ್‌ನಲ್ಲಿ ಸ್ಥಾನ ಪಡೆದಿತ್ತು.